ಬೆಂಗಳೂರು ಸಂಪುಟ: 16 ಸಂಚಿಕೆ: 40 ಪುಟ: 06 ಗುರುವಾರ 02-01-2025

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Mail:mussanje2010@gmail.com www.mussanjenews.com

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh



'ಪ್ರೀತಿ,ಮದ್ವೆ'; ಮೆಚ್ಯೂರಿಟಿ ಇರಲಿಲ

'ಇಡ್ಲಿ ಕಡೈ' ಫಸ್ಟ್ ಲುಕ್

55ರಲ್ಲೂ ಫಿಟ್&ಫೈನ್ ಪುಟ 6

# ನ್ಯಾಯಾಂಗ ತನಿಖೆಗೆ ಪಟ್ಟು

## ಬಾಣಂತಿಯರ ಸಾವಿನ ಪ್ರಕರಣ; ದಿನೇಶ್ ಗುಂಡೂರಾವ್ ರಾಜೀನಾಮೆಗೆ ಅಶೋಕ್ ಪಟ್ಟು

ಬೆಂಗಳೂರು: ರಾಜ್ಯದಲ್ಲಿ ನಿರಂತರವಾಗಿ ನಡೆಯುತ್ತಿರುವ ಬಾಣಂತಿಯರ ಸಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಪ್ರತಿಪಕ್ಷ ಭಾರತೀಯ ಜನತಾ ಪಕ್ಷ ಪ್ರಕರಣವನ್ನು ಕೂಡಲೇ ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದೆ.

ಸರ್ಕಾರ ಈ ವಿಷಯದಲ್ಲಿ ಕುರುಡಾಗಿ ವರ್ತಿಸುತ್ತಿದೆ. ಹೆಣ್ಣು ಮಕ್ಕಳ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲ. ಇಲಾಖಾ ಸಚಿವರಿಗೂ ಜವಾಬ್ದಾರಿ ಇಲ್ಲ. ಯಾರೊಬ್ಬರು ಇದರ ಹೊಣೆಯನ್ನು ಹೊರುತ್ತಿಲ್ಲ. ಹೀಗೆ ಆದಲ್ಲಿ ಜನತಿರುಗಿ ಬೀಳುವ ದೂರವೇನೂ ಇಲ್ಲ ಎಂದು ವಿಪಕ್ಷ ನಾಯಕ ಆರ್.ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಸಚಿವರು ಈ ಕೂಡಲೇ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಹಾಗೂ ನ್ಯಾಯಮೂರ್ತಿಯೊಬ್ಬರಿಂದ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ರಾಜ್ಯದಲ್ಲಿ ಬಾಣಂತಿಯರ ಸರಣಿ ಸಾವು ಮುಂದುವರೆದಿದೆ. ಆಸ್ಪತ್ರೆಗಳಿಗೆ ಹೆರಿಗೆಗೆಂದು ಹೋದವರು ಶವವಾಗಿ ಬರ್ತಿದ್ದಾರೆ. 2 ಸಾವಿರ ರೂ. ನಕಲಿ ಗ್ಯಾರಂಟಿ ಬಿಟ್ಟು ಮೊದಲು ರಾಜ್ಯದಲ್ಲಿ ನಡೆಯುತ್ತಿರುವ ಬಾಣಂತಿಯರ ಸಾವು ನಿಲ್ಲಿಸಿ ಎಂದು ಆಗ್ರಹಿಸಿದರು.

ಇನ್ನೂ ಕೂಡ ಬಾಣಂತಿಯರ ಸಾವು ನಿಂತಿಲ್ಲ. ಅಧಿವೇಶನದಲ್ಲಿ ನಾವು ಸರ್ಕಾರದ ಕಿವಿ ಹಿಂಡಿದ್ದೆವು. ಆದರೂ ಪ್ರಯೋಜನವಾಗಿಲ್ಲ. ಹೆರಿಗೆಗೆಂದು ಹೋದ ತಾಯಂದಿರುವ ಶವವಾಗಿ ಬರುತ್ತಿದ್ದಾರೆ. ಸರ್ಕಾರ ಇನ್ನೂ ಎಚ್ಚೆತ್ತುಕೊಂಡಿಲ್ಲ ಇದು ಸರ್ಕಾರಿ ಪ್ರಾಯೋಜಿತ ಕೊಲೆಗೆ ಸಮ. ಬಾಣಂತಿಯರ ಸಾವಿಗೆ ಸಂಬಂಧಿಸಿದ ನ್ಯಾಯಾಂಗ ತನಿಖೆ ಬಗ್ಗೆ, ಡೆತ್ ಆಡಿಟ್ ಬಗ್ಗೆ ಇನ್ನೂ ಯಾವುದೇ ಮಾಹಿತಿ ಬಂದಿಲ್ಲ. ಕಳಪೆ ದ್ರಾವಣ ಪೂರೈಸಿದ ಕಂಪನಿ ವಿರುದ್ಧ ದೆಹಲಿಗೆ ಹೋಗಿ ದೂರು ಕೊಡುವುದಾಗಿ ಆರೋಗ್ಯ ಸಚಿವರು ಹೇಳಿದ್ದರು. ಆದರೆ



ಇನ್ನೂ ಯಾಕೆ ಹೋಗಿ ದೂರು ಕೊಟ್ಟಿಲ್ಲ ಎಂದು ಪ್ರಶ್ನಿಸಿದರು.

ಬಾಣಂತಿಯರ ಸಾವಿನ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಲಿ ಎಂದು ಆಗ್ರಹಿಸಿದ ಆರ್.ಅಶೋಕ್, ನಿಮ್ಮ ಗ್ಯಾರಂಟಿ 2000 ರೂ ಬೇಡ. ಮೊದಲು ರಾಜ್ಯದಲ್ಲಿ ಬಾಣಂತಿಯರ ಸಾವು ನಿಲ್ಲಿಸಿ. ಗೃಹಲಕ್ಷ್ಮೀ ಯೋಜನೆ ಮನೆ ಯಜಮಾನಿಯರಿಗೆ 2000 ರೂ ಹಾಕಿದ್ದೀವಿ. ಅವರು ಹೊಲಿಗೆ ಯಂತ್ರ ಖರೀದಿಸಿದರು, ಫ್ರಿಡ್ಜ್ ಖರೀದಿಸಿದರು ಬೋರ್ ವೆಲ್ ಕೊರೆಸಿದರು, ಗ್ರಂಥಾಲಯ ತೆಗೆದರು ಎಂದು ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದೀರಾ. ಜಿಲ್ಲೆ ಜಿಲ್ಲೆಗಳಲ್ಲಿ ಬಾಣಂತಿಯರ ಸರಣಿ ಸಾವು ಸಂಭವಿಸುತ್ತಿದೆ. ಆದರೂ ಸಿಎಂ ಸಿದ್ದರಾಮಯ್ಯ ಈ ಬಗ್ಗೆ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದು ಅಶೋಕ್ ಕಿಡಿಕಾರಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜೀನಾಮೆ ಕೊಟ್ಟು ಆರೋಗ್ಯ ಇಲಾಖೆ ಹೊಸ ಸಚಿವರು ಬಂದು ಸಕ್ರಿಯವಾಗಿ ಕೆಲಸ ಮಾಡಿದರೆ ಬಾಣಂತಿಯರ ಸಾವಿನ ವಿಚಾರದಲ್ಲಿ ಪರಿಹಾರ ಸಿಗಬಹುದು ಎಂದು ಅವರು ಹೇಳಿದರು.

ಬಾಣಂತಿಯರ ಸಾವಿನ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ನಮ್ಮ ಹೋರಾಟ ನಿಲ್ಲಲ್ಲ. ಬಿಜೆಪಿಯಿಂದ ಸತ್ಯ ಶೋಧನಾ ಸಮಿತಿ ಮಾಡಿದ್ದೇವೆ. ವರದಿ ಬಂದ ನಂತರ ಮುಂದಿನ ಹೋರಾಟ ರೂಪುರೇಷೆ ನಿರ್ಧರಿಸಿದ್ದೇವೆ. ರಾಜ್ಯಪಾಲರನ್ನು ಭೇಟಿ ಮಾಡುತ್ತೇವೆ ಎಂದರು.

ರಾಜ್ಯದಲ್ಲಿ ಇದುವರೆಗೂ 736 ಬಾಣಂತಿಯರ ಸಾವಾಗಿದೆ. ಬಾಣಂತಿಯರ ಕುಟುಂಬ ದುಃಖದಲ್ಲಿದೆ. ಈ ಸರ್ಕಾರಕ್ಕೆ ಏನೂ ಅನಿಸುತ್ತಿಲ್ಲವೇ, ಬೆಳಗಾವಿಯಲ್ಲಿ ಮೃತಪಟ್ಟ ಬಾಣಂತಿ ಜ್ಯೋತಿ ಪತಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಈ ಸರ್ಕಾರಕ್ಕೆ ಆತ್ಮಹತ್ಯೆ ಮಾಡಿಕೊಳ್ಳಬೇಕು ಅಂತ ಇನ್ನು ಅನಿಸಿಲ್ಲವೇ ಎಂದು ಅವರು ಪ್ರಶ್ನಿಸಿದರು.

ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಆಕ್ಸಿಜನ್ ದುರಂತದಲ್ಲಿ ಮಡಿದವರ ಕುಟುಂಬಗಳಿಗೆ ತೆರಳಿ ಕಾಂಗ್ರೆಸ್ ನಾಯಕರು ಕಣ್ಣೀರ ಕೋಡಿ ಹರಿಸಿದರು. ಹಾಸನದಲ್ಲಿ ಕಾಂಗ್ರೆಸ್ ಸಮಾವೇಶ ಸಂದರ್ಭದಲ್ಲಿ ಬಾಣಂತಿಯರು ಸತ್ತರಲ್ಲ, ಅವರ ಮನೆಗಳಿಗೆ ಏಕೆ ಹೋಗಲಿಲ್ಲ. ನಿಮ್ಮ ಕಣ್ಣೀರು ಬತ್ತಿ ಹೋಯಿತೆ ಎಂದು ಕಾಂಗ್ರೆಸ್ ನಾಯಕರನ್ನು ಅವರು ಪುಟ 2



ಕೇರಳದ ನೂತನ ರಾಜ್ಯಪಾಲರಾಗಿ ಗೋವಾದ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

## ಗೊ.ರು. ಚನ್ನಬಸಪ್ಪಗೆ ಸಿದ್ಧಗಂಗಾ ಶ್ರೀ ಪ್ರಶಸ್ತಿ


ತುಮಕೂರು: ಸಿದ್ದಗಂಗಾ ಮಠದ ಹಳೆ ವಿದ್ಯಾರ್ಥಿಗಳು ಮತ್ತು ಹಿತೈಷಿಗಳ ಸಂಘದ ವತಿಯಿಂದ ಕೊಡಮಾಡುವ 2024ನೇ



ಸಿದ್ದಗಂಗಾ ಶ್ರೀ ಪ್ರಶಸ್ತಿಗೆ ಹಿರಿಯ ವಿದ್ವಾಂಸ ಗೊ.ರು. ಚನ್ನಬಸಪ್ಪ ಆಯ್ಕೆಯಾಗಿದ್ದಾರೆ.ಜನವರಿ 21ರಂದು ಶ್ರೀ ಶಿವಕುಮಾರ ಸ್ವಾಮೀಜಿ ಅವರ 6ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಗೊ.ರು. ಚನ್ನಬಸಪ್ಪ ಅವರಿಗೆ ಸಿದ್ಧಗಂಗಾ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿದೆ. ಒಂದು ಲಕ್ಷ ನಗದು, ಅಭಿನಂದನಾ ಪತ್ರ ಸ್ಮರಣಿಕೆ ನೀಡಿ ಗೊ. ರು. ಚನ್ನಬಸಪ್ಪ ಅವರನ್ನು ಗೌರವಿಸಲಾಗುತ್ತದೆ. ಗೊ. ರು. ಚನ್ನಬಸಪ್ಪ ಅವರು ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## ರಾಜೇಂದ್ರ ಅರ್ಲೇಕರ್ ಕೇರಳ ರಾಜ್ಯಪಾಲರಾಗಿ ಪ್ರಮಾಣ

**ತಿರುವನಂತಪುರಂ:** ಕೇರಳದ ನೂತನ ರಾಜ್ಯಪಾಲರಾಗಿ ಗೋವಾದ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸಂಪುಟ ಸಚಿವರು, ವಿರೋಧ ಪಕ್ಷದ ನಾಯಕರು, ಕಾಂಗ್ರೆಸ್ ಸಂಸದ ಶಶಿ ತರೂರ್, ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ್ ಬೋಸ್ ಮತ್ತು ಇತರ ಗಣ್ಯರು ಪ್ರಮಾಣ ವಚನ ಸಮಾರಂಭದಲ್ಲಿ ಉಪಸ್ಥಿತರಿದ್ದರು. ರಾಜೇಂದ್ರ ಅರ್ಲೇಕರ್ ಈ ಹಿಂದೆ ಬಿಹಾರದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ.



ಕೇರಳದ ಸಾಂಪ್ರದಾಯಿಕ ಉಡುಪನ್ನು ಧರಿಸಿದ ಅರ್ಲೇಕರ್ ಅವರು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಅರ್ಲೇಕರ್ ಕೇರಳದ 23ನೇ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ರಾಜಭವನ ತಿಳಿಸಿದೆ. ಇತ್ತೀಚಿನವರೆಗೂ ಬಿಹಾರದ ರಾಜ್ಯಪಾಲರಾಗಿದ್ದ ಅರ್ಲೇಕರ್ ಅವರು ಆರಿಫ್ ಮೊಹಮ್ಮದ್ ಖಾನ್ ಅವರ ಸ್ಥಾನವನ್ನು ತುಂಬಲಿದ್ದಾರೆ. ರಾಜ್ಯದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಡ ಸರ್ಕಾರದೊಂದಿಗೆ ಆರಿಫ್ ಮೊಹಮ್ಮದ್

ಖಾನ್ ಹೊಂದಿದ್ದ ಪ್ರಕ್ಷುಬ್ಧ ಸಂಬಂಧದ ಹಿನ್ನೆಲೆಯಲ್ಲಿ ಹೊಸ ರಾಜ್ಯಪಾಲರ ಕಾರ್ಯವೈಖರಿ ಹೇಗಿರಲಿದೆ ಎಂಬುದು ಕುತೂಹಲ ಮೂಡಿಸಿದೆ. ಪುಟ 2

## ಫೆ.28ರಿಂದ ಹಂಪಿ ಉತ್ಸವ

**ಬೆಂಗಳೂರು :** ಈ ಬಾರಿಯ ವಿಶ್ವ ವಿಖ್ಯಾತ ಹಂಪಿ ಉತ್ಸವ ಫೆಬ್ರವರಿ 28 ರಿಂದ ಮೂರು ದಿನಗಳ ಕಾಲ ನಡೆಯಲಿದೆ.ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಅವರು ಗುರುವಾರ ಬೆಳಗ್ಗೆ ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಸಮ್ಮತಿ ಪಡೆದಿದ್ದಾರೆ. ಫೆಬ್ರವರಿ 28 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುಟ 2

ಅವರು ಹಂಪಿ ಉತ್ಸವ ಉದ್ಘಾಟನೆ ಮಾಡಲಿದ್ದು, ಮಾರ್ಚ್ 1 ಮತ್ತು 2 ರಂದು ಕಾರ್ಯಕ್ರಮ ಗಳು ಇರಲಿವೆ. ಮಾರ್ಚ್ 2 ರಂದು ಪುಟ 2

## ದೂರೇ ದಾಖಲಾಗಿಲ್ಲ

ಹುಬ್ಬಳ್ಳಿ : " ಸಿ.ಟಿ.ರವಿ ಅವರು ಅವಾಚ್ಯ ಪದ ಬಳಸಿದ್ದಾರೆ ಎನ್ನುವುದಕ್ಕೆ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಂದ ನನಗೆ ಇದುವರೆಗೆ ಯಾವುದೇ ದೂರು ಬಂದಿಲ್ಲ. ನಿಯಮಾವಳಿ ಪ್ರಕಾರ, ದೂರು ಬಂದರೆ ಮಾತ್ರ ಮುಂದಿನ ಕ್ರಮ ತೆಗೆದುಕೊಳ್ಳಲು ಸಾಧ್ಯ " ಎಂದು ಸಭಾಪತಿ ಬಸವರಾಜ ಹೊರಟ್ಟಿ, ಅವರು ಸ್ಪಷ್ಟ ಪಡಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಸಿ.ಟಿ.ರವಿ ಅವರು ಇದುವರೆಗೆ ನನಗೆ ಮೂರು ದೂರನ್ನು ಕೊಟ್ಟಿದ್ದಾರೆ, ಪೊಲೀಸರು ನನ್ನನ್ನು ಬಂಧಿಸಿ ಹಕ್ಕುಚ್ಯುತಿ ಎಸಗಿದ್ದಾರೆ. ಮತ್ತು, ಕಾಂಗ್ರೆಸ್ ಮುಖಂಡರು ತಮಗೆ ಬೆದರಿಕೆ ಹಾಕಿದ್ದಾರೆ ಎಂದು ಡಿ. 19, 24 ಮತ್ತು 27ರಂದು ಮೂರು ದೂರನ್ನು ರವಿ, ನನಗೆ ನೀಡಿದ್ದಾರೆ ಎಂದು ಹೊರಟ್ಟಿ ಹೇಳಿದ್ದಾರೆ.

## 'ಸಚಿನ್ ಆತ್ಮಹತ್ಯೆಗೂ ನನಗೂ ಸಂಬಂಧವಿಲ್ಲ'

**ಕಲಬುರಗಿ:** ಗುತ್ತಿಗೆದಾರ ಸಚಿನ್ ಪಾಂಚಾಳ್ ಅತ್ಮಹತ್ಯೆಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಕಲ್ಬುರ್ಗಿ ರಿಪಬ್ಲಿಕ್ ಮಾಡಲು ಹೊರಟಿದ್ದಾರೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಟಾಂಗ್



ಕೊಟ್ಟ ಸಚಿವ ಪ್ರಿಯಾಂಕ್ ಖರ್ಗೆ, ಬಿಜೆಪಿ ಅಭ್ಯರ್ಥಿಯಾಗಿದ್ದ ಮಣಿಕಂಠ ರಾಥೋಡ್ ಕುರಿತ ಆಡಿಯೋವೊಂದನ್ನ ಬಿಡುಗಡೆ ಮಾಡಿದರು. ಮಣಿಕಂಠ ರಾಥೋಡ್ ನಮ್ಮ ಕುಟುಂಬಕ್ಕೆ ಬೆದರಿಕೆ ಹಾಕಿದ್ದಾನೆ, ಬೆದರಿಕೆ ಹಾಕಿದವರನ್ನೇ ಅಭ್ಯರ್ಥಿಯನ್ನಾಗಿ ಮಾಡಿದ್ರಿ, ಖರ್ಗೆ ಕುಟುಂಬ ನಾಶ ಮಾಡ್ತೀನಿ ಎಂದಿದ್ದಾನೆ, ಆಡಿಯೋ ಬಗ್ಗೆ ದೂರು ಕೊಟ್ಟರೂ ಕ್ರಮ ಆಗಲಿಲ್ಲ, ಆತನ ವಿರುದ್ಧ 30 ಕೇಸ್ ಇದ್ದರೂ ಕ್ರಮ ಆಗಿಲ್ಲ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು. ಸಚಿನ್ ಆತ್ಮಹತ್ಯೆಗೂ ನನಗೂ ಸಂಬಂಧವಿಲ್ಲ. ಬಿಜೆಪಿ ನಾಯಕರು ಸುಳ್ಳಿನ ಶೂರರಾಗಿದ್ದಾರೆ. ಸುಳ್ಳೇ ಬಿಜೆಪಿ **ಬಂಡವಾಳ ಎಂದು ಖರ್ಗೆ ಗುಡುಗಿದರು.**

## ಹಿಮಾಚಲ ವಿದ್ಯುತ್ ಸಬ್ಸಿಡಿ ರಾಜ್ಯಕ್ಕೂ ಬರಬಹುದು

**ಬೆಂಗಳೂರು:** ಗ್ಯಾರಂಟಿ ಯೋಜನೆಗಳನ್ನು ಹಿಂತೆಗೆದುಕೊಳ್ಳುತ್ತಿರುವ ಹಿಮಾಚಲ ಸರ್ಕಾರದ ಸ್ಥಿತಿ ಕರ್ನಾಟಕಕ್ಕೆ ಬಂದರೂ ಅದರಲ್ಲಿ ಆಶ್ಚರ್ಯವಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟ್ವೀಟ್ ಮಾಡಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಿಮಾಚಲ ಸರ್ಕಾರ ಆರ್ಥಿಕ ಸಂಕಷ್ಟದಿಂದ ಪಾರಾಗಲು ವಿದ್ಯುತ್ ಸಬ್ಸಿಡಿಯನ್ನು ಕೈ ಬಿಟ್ಟಿರುವ ಸುದ್ದಿಯ ತುಣುಕನ್ನು ಹಂಚಿಕೊಂಡಿರುವ ಅವರು, ಗ್ಯಾರಂಟಿ ಯೋಜನೆಗಳನ್ನು ಹಿಮಾಚಲ ಪ್ರದೇಶ ಸರ್ಕಾರ ವಾಪಸ್ ಪಡೆಯುತ್ತಿರುವ ಸ್ಥಿತಿ ಕರ್ನಾಟಕಕ್ಕೆ ಬಂದರೂ ಬರಬಹುದು ಎಂಬ ಅರ್ಥದಲ್ಲಿ ಟ್ವೀಟ್ ಮಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಜನತೆಗೆ ನೀಡಿರುವ ವಚನ ಪಾಲನೆ ಹಾಗೂ ಜಾರಿಗೊಳಿಸಿರುವ ಯೋಜನೆಯನ್ನು ಸರಿದೂಗಿಸುವ ಬದ್ಧತೆ



ಇದ್ದರೆ ಈ ಕೂಡಲೇ ಗ್ಯಾರಂಟಿ ಯೋಜನೆಗಳನ್ನು ಸರಿದೂಗಿಸಲು ರಾಜ್ಯದ ಆರ್ಥಿಕ ಸಂಪನ್ಮೂಲ ಹೆಚ್ಚಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಯೋಜನೆಗಳನ್ನು ಪರಿಚಯಿಸುವ ಬದ್ಧತೆ ಪ್ರದರ್ಶಿಸಲಿ ಎಂದು ಆಗ್ರಹಿಸಿದ್ದಾರೆ.

ಸರ್ಕಾರದ ಆರ್ಥಿಕ ಸಂಪನ್ಮೂಲವನ್ನು ಆಧರಿಸಿ ಸಮತೋಲನ ಕಾಯ್ದುಕೊಳ್ಳುವಲ್ಲಿ ವಿಫಲರಾಗಿ ತಾವು ನೀಡುವ ಪೊಳ್ಳು ಭರವಸೆಗಳಿಗೆ ಹಣ ಒದಗಿಸಲಾಗದೆ ಯೋಜನೆಗಳು ಹೇಗೆ ವೈಫಲ್ಯ ಸಾಧಿಸುತ್ತವೆ ಎಂಬುದಕ್ಕೆ ಕಾಂಗ್ರೆಸ್ ಆಡಳಿತದ ಹಿಮಾಚಲ ಸರ್ಕಾರ ಸಾಕ್ಷಿ ಒದಗಿಸಿದೆ ಎಂದು ವಿಜಯೇಂದ್ರ ಹೇಳಿದ್ದಾರೆ. ಕರ್ನಾಟಕದಲ್ಲೂ ಸಹ ಪಂಚ ಗ್ಯಾರಂಟಿಗಳನ್ನು ನಿರ್ವಹಿಸುವಲ್ಲಿ ಗೊಂದಲಗಳನ್ನು ಸೃಷ್ಟಿಸಿಕೊಳ್ಳುತ್ತಿರುವ ಕಾಂಗ್ರೆಸ್ ಸರ್ಕಾರ ಶಕ್ತಿ ಯೋಜನೆಯಲ್ಲಿ ಈಗಾಗಲೇ ನಷ್ಟವನ್ನು ಅನುಭವಿಸಿದ್ದು, ಪುಟ 2

## ಶೋ ರೂಂಗೆ ಬೆಂಕಿ: 50 ಬೈಕ್‌ಗಳು ಭಸ್ಮ

**ಬೆಂಗಳೂರು:** ಮಹದೇವಪುರದ ಬಿ. ನಾರಾಯಣಪುರದಲ್ಲಿನ ಯಮಹಾ ಬೈಕ್ ಶೋರೂಂ ಒಂದರಲ್ಲಿ ನಿನ್ನೆ ರಾತ್ರಿ ಅಗ್ನಿ ಅವಘಡ ಸಂಭವಿಸಿ, 50ಕ್ಕೂ ಹೆಚ್ಚು ಬೈಕ್‌ಗಳು ಸುಟ್ಟು ಭಸ್ಮವಾಗಿವೆ.

ಶೋರೂಂ ಸಿಬ್ಬಂದಿ 7 ಗಂಟೆಗೆ ಕೆಲಸ ಮುಗಿಸಿ ಮನೆಗೆ ತೆರಳಿದ್ದರು. ಅದಾದ ಒಂದು ಗಂಟೆ ಸುಮಾರಿಗೆ ಸೆಕ್ಯೂರಿಟಿ ಊಟಕ್ಕೆ ತೆರಳಿದ್ದ ವೇಳೆ ಅಗ್ನಿ ಅವಘಡ ಸಂಭವಿಸಿದೆ. ಅವಘಡದಿಂದ ಶೋರೂಂನಲ್ಲಿದ್ದ ಸುಮಾರು 50ಕ್ಕೂ ಹೆಚ್ಚು ಬೈಕ್ ಸುಟ್ಟು ಭಸ್ಮವಾಗಿವೆ.

ಅಲ್ಲದೇ ಶೋ ರೂಂ ಹಿಂಬದಿಯಲ್ಲಿರುವ ಸರ್ವೀಸ್ ಸೆಂಟರ್‌ಗೆ ಸಹ ಬೆಂಕಿ ತಗುಲಿದೆ.

ತಕ್ಷಣ ಅಗ್ನಿಶಾಮಕ ಸಿಬ್ಬಂದಿ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಬಳಿಕ ಅಗ್ನಿಶಾಮಕ ಸಿಬ್ಬಂದಿ ಹಾಗೂ ಸ್ಥಳೀಯರ ಸಹಾಯದಿಂದ ಬೆಂಕಿ ನಂದಿಸುವ ಕೆಲಸ ಮಾಡಿದ್ದಾರೆ. ಅಷ್ಟರಲ್ಲಾಗಲೇ ದೊಡ್ಡ ಮಟ್ಟದಲ್ಲಿ ಬೆಂಕಿ ಆವರಿಸಿ ಶೋರೂಂನಲ್ಲಿದ್ದ 40ಕ್ಕೂ ಹೆಚ್ಚು ಬೈಕ್ ಹಾಗೂ ಶೋರೂಂ ಹಿಂಭಾಗದ ಸರ್ವಿಸ್ ಸೆಂಟರ್‌ನಲ್ಲಿದ್ದ 20ಕ್ಕೂ ಹೆಚ್ಚು ಬೈಕ್‌ಗಳು ಬೆಂಕಿಗೆ ಆಹುತಿಯಾಗಿವೆ. ಪುಟ 2


## 'ಸಚಿನ್ ಕೇಸ್ ಮುಚ್ಚಿ ಹಾಕಲು ಸರ್ಕಾರದ ಯತ್ನ'

ಬೀದರ್: ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣಕ್ಕೆ ಇದೀಗ ದೊಡ್ಡ ತಿರುವು ದೊರೆತಿದೆ. ಒಂದೆಡೆ, ಸಚಿನ್ ಬಳಿ ಗುತ್ತಿಗೆದಾರರ ಪರವಾನಿಗೆಯೇ ಇರಲಿಲ್ಲ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಗನ್ನಾಥ ಶೇಗಜಿ ಹೇಳಿದ್ದರೆ, ಮತ್ತೊಂದೆಡೆ ಪ್ರಕರಣ ಮುಚ್ಚಿ ಹಾಕಲು ರಾಜ್ಯ ಕಾಂಗ್ರೆಸ್ ಸರ್ಕಾರ ಯತ್ನಿಸುತ್ತಿದೆ ಎಂದು ಎಂದು ಸಚಿನ್ ಸಹೋದರಿ ಸುರೇಖಾ ಆರೋಪಿಸಿದ್ದಾರೆ. ಅಲ್ಲದೆ, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೆ ಪತ್ರ ಬರೆಯುತ್ತೇನೆ ಎಂದು ಹೇಳಿದ್ದಾರೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಕಟ್ಟಿ ತೂಗಾಂವ್‌ನಲ್ಲಿ ಮಾತನಾಡಿದ ಸುರೇಖಾ, ಕಲಬುರಗಿಯಲ್ಲಿ ಸಚಿನ್ ಕೆಲಸ ಮಾಡಿಲ್ಲ. ಆತ ನಮ್ಮ ಭೇಟಿಯೇ ಆಗಿಲ್ಲ. ಸಚಿನ್ ಕೈ ಬರಹವೇ ಅದಲ್ಲ. ಸಚಿನ್ ಹುಟ್ಟಿಯೇ ಇಲ್ಲ ಎಂದು ಅವರು (ರಾಜ್ಯ ಸರ್ಕಾರ) ಮಾಡಿಬಿಡುತ್ತಾರೆ ಎಂಬ ಆತಂಕ ಇದೆ. ರಾಜ್ಯ ಸರ್ಕಾರದ ಮೇಲೆ ನಮಗೆ ನಂಬಿಕೆ ಉಳಿದಿಲ್ಲ. ಸಿಬಿಐ ತನಿಖೆ ಮಾಡಿದರೆ ನ್ಯಾಯ ಸಿಗಬಹುದು ಎಂಬ ವಿಶ್ವಾಸವಿದೆ ಎಂದರು. ಡೆತ್ ನೋಟ್‌ನಲ್ಲಿ ಉಲ್ಲೇಖವಾದ ಆರೋಪಿಗಳನ್ನು ಈವರೆಗೆ ತನಿಖೆಗೆ ಒಳಪಡಿಸಿಲ್ಲ.

ತನಿಖಾಧಿಕಾರಿಗಳು ನಮ್ಮನ್ನು ಮಾತ್ರ ವಿಚಾರಣೆ ಮಾಡುತ್ತಿದ್ದಾರೆ. ಇಲ್ಲಿವರೆಗೆ ತನಿಖಾಧಿಕಾರಿಗಳು ಯಾವುದೇ ಮಾಹಿತಿ ಕೊಟ್ಟಿಲ್ಲ. ಎಫ್‌ಎಸ್‌ಎಲ್ ವರದಿ, ಮರಣೋತ್ತರ ಪರೀಕ್ಷೆ ವರದಿ ಬಗ್ಗೆ ನಮಗೆ ಮಾಹಿತಿ ನೀಡಿಲ್ಲ. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೂ ಪತ್ರ ಬರೆಯಲು ಪ್ರಯತ್ನಿಸುತ್ತೇವೆ ಎಂದು ಸುರೇಖಾ ಹೇಳಿದ್ದಾರೆ.

ಭಾಲ್ಕಿಯ ಗುತ್ತಿಗೆದಾರ ಸಚಿನ್ ಪಾಂಚಾಳ್ ಸಾವು




ಪ್ರಕರಣ ಕೇಂದ್ರ ಸರ್ಕಾರದ ಅಂಗಳ ತಲುಪುವ ಲಕ್ಷಣಗಳು ಸ್ಪಷ್ಟವಾಗುತ್ತಿವೆ. ಸಚಿನ್ ಗುತ್ತಿಗೆದಾರನೇ ಅಗಿರಲಿಲ್ಲ ಎಂಬ ಸುದ್ದಿ ಹೊರಬೀಳುತ್ತಿದ್ದಂತೆ ನಮ್ಮ ಬೀದರ್ ವರದಿಗಾರ ಸಚಿನ್ ಸಹೋದರಿಯೊಂದಿಗೆ ಮಾತಾಡಿದ್ದಾರೆ. ಅಣ್ಣ ಗುತ್ತಿಗೆದಾರನಾಗಿದ್ದ ಎಂದು ತಮ್ಮ ಕುಟುಂಬ ಯಾವತ್ತೂ ಹೇಳಿಲ್ಲ, ಅವನ ಕೆಲಸಕ್ಕೆ ಸಂಬಂಧಪಟ್ಟ ಎಲ್ಲ ದಾಖಲೆಗಳು ಕಲಬುರಗಿ ಕಚೇರಿಯಲ್ಲಿದ್ದವು. ಅದರೆ ಅವುಗಳನ್ನು ನಾಶಪಡಿಸಲಾಗಿದೆ,

ಈ ಸರ್ಕಾರ ಇವತ್ತು ಅವನು ಗುತ್ತಿಗೆದಾರ ಆಗಿರಲಿಲ್ಲ ಎನ್ನುತ್ತಿದೆ, ನಾಳೆ ಅವನು ಹುಟ್ಟೇ ಇರಲಿಲ್ಲ ಅಂತ ಹೇಳಿದರೂ ಆಶ್ಚರ್ಯವಿಲ್ಲ, ತಮ್ಮ ಕುಟುಂಬಕ್ಕೆ ಸರ್ಕಾರದ ಮೇಲೆ ನಂಬಿಕೆ ಇಲ್ಲ, ಹಾಗಾಗಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯುವರಿಗೆ ಪತ್ರ ಬರೆಯುವುದಾಗಿ ಅವರು ಹೇಳಿದರು.

# ಬಡ್ಡಿ ಸೇರಿಸಿ ಪರೀಕ್ಷಾ ಶುಲ್ಕ ವಾಪಸ್ ಮಾಡಲು ಒತ್ತಾಯ

**ಬೆಂಗಳೂರು:** ಮುಖ್ಯಮಂತ್ರಿಗಳೇ ನೇಮಿಸುವ ಐಎಎಸ್ ಅಧಿಕಾರಿಯಾದ ಕಾರ್ಯದರ್ಶಿ ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಕೆಪಿಎಸ್ಸಿ ಪರೀಕ್ಷೆಗಳನ್ನು ನಿಭಾಯಿಸುತ್ತಾರೆ. ಆದ್ದರಿಂದ ಕೆಪಿಎಸ್ಸಿ ಪರೀಕ್ಷಾ ವೈಫಲ್ಯದ ಜವಾಬ್ದಾರಿಯನ್ನು ಸ್ವತಃ ಮುಖ್ಯಮಂತ್ರಿಗಳೇ ಹೊರಬೇಕಾಗುತ್ತದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಅರುಣ್ ಶಹಾಪುರ ಅವರು ತಿಳಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಪಿಎಸ್ಸಿ ವ್ಯವಸ್ಥೆಯನ್ನು ಸರಿ ಮಾಡುವ ದೃಷ್ಟಿಯಿಂದ ತಕ್ಷಣ ಉನ್ನತ ಮಟ್ಟದ ತನಿಖೆ ನಡೆಸಬೇಕು. ಪರೀಕ್ಷಾ ಅಕ್ರಮ ದೊಡ್ಡ ಪ್ರಮಾಣದಲ್ಲಿದೆ. ಅದನ್ನು ತಡೆಯಲು ಸಾಕಷ್ಟು ಕಠಿಣ ಕಾನೂನುಗಳನ್ನು ರೂಪಿಸುವ ಕೆಲಸವನ್ನು ಹಿಂದಿನ ಸರಕಾರ ಮಾಡಿದೆ ಎಂದರು.

ಕರ್ನಾಟಕದಲ್ಲಿ ಈಗ ತನಿಖೆ ಎಂದರೆ ಪ್ರಹಸನ ಎಂಬಂತಾಗಿದೆ. ವಾತೆತ್ತಿದರೆ ಎ□□□ಐಟಿ, ಸಿಐಡಿ ಎನ್ನುತ್ತಿದ್ದಾರೆ. ಸ್ವತಂತ್ರ ನ್ಯಾಯಾಂಗದ ಸುಪರ್ದಿಯಲ್ಲಿ ತನಿಖೆ ನಡೆಯಬೇಕು ಎಂದು ಪ್ರಶ್ನೆಗೆ ಉತ್ತರ ನೀಡಿದರು.

ಕಾನೂನಿನ ಭ'ಂಯುವೇ ಇರದ ವ್ಯಕ್ತಿಗಳು ನಿರ್ಮಾಣವಾಗಿದ್ದಾರೆ. ಕೆಪಿಎಸ್ಸಿಗೆ ಕಾಯಕಲ್ಪ ಕೊಡಲು ಸಮಗ್ರ ತೀರ್ಮಾನ ಕೈಗೊಳ್ಳುವ ಕಾಲ ಈಗ ಬಂದಿದೆ ಎಂದು ಪ್ರಶ್ನೆಗೆ ಉತ್ತರ ಕೊಟ್ಟರು. ಯಾವುದೇ ಪರೀಕ್ಷೆಯನ್ನು ಯಾವುದೇ ಏಜೆನ್ಸಿಯಿಂದ ನಡೆಸಿದರೆ ಕನಿಷ್ಠ 4–5 ವರ್ಷ ಬೇಕೆಂಬ ಸ್ಥಿತಿಯಾದರೆ, ಗತಿ ಏನು ಹೇಳಿ ಎಂದು ಪ್ರಶ್ನಿಸಿದರು.

ದುಷ್ಟರ ಜೊತೆ ಕೆಲಸ ಮಾಡುವ ಒತ್ತಡ..

ಕರ್ನಾಟಕದ ಪೊಲೀಸ್ ವ್ಯವಸ್ಥೆ ಅತ್ಯಂತ ದಕ್ಷತೆಯಿಂದ ಕೂಡಿದೆ. ರಾಜೀವ್ ಗಾಂಧಿ ಹತ್ಯೆ ಮಾಡಿದವರನ್ನೇ ಹಿಡಿಯುವ ಸಮರ್ಥರಿದ್ದಾರೆ. ದುಷ್ಟರ ಆಡಳಿತದಲ್ಲಿ ಕೆಲಸ ಮಾಡುವ ಅನಿವಾರ್ಯತೆ ಅವರಿಗೆ ಬಂದಿದೆ. ದುಷ್ಟರ ಜೊತೆ ಕೆಲಸ ಮಾಡುವ ಒತ್ತಡದಲ್ಲಿ ಪೊಲೀಸರು ಇದ್ದಾರೆ. ಹಾಲಿ ನ್ಯಾಯಾಧೀಶರ ಸುಪರ್ದಿಯಲ್ಲಿ ತನಿಖೆ ನಡೆಸುವುದೇ ಸೂಕ್ತ ಎಂದು ಅರುಣ್ ಶಹಾಪುರ ಅವರು ಪ್ರಶ್ನೆಗೆ ಉತ್ತರ ಕೊಟ್ಟರು.

ಐದೈದು ವರ್ಷಕ್ಕೆ ಒಂದು ನೇಮಕಾತಿ ನಡೆದರೆ ರಾಜ್ಯ ಸರಕಾರ ಈ ವಿಷಯದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅಗತ್ಯವಿದೆ ಎಂದು ನುಡಿದರು. ಕರ್ನಾಟಕದಲ್ಲಿ ಗುಣಮಟ್ಟ, ಜನಕಲ್ಯಾಣಕ್ಕಿಂತ ಹೆಚ್ಚು ರಾಜಕೀಯ ದೃಷ್ಟಿಕೋನದಿಂದ ಈ ಕಾರ್ಯದರ್ಶಿ, ಪರೀಕ್ಷಾ ನಿಯಂತ್ರಣಾಧಿಕಾರಿ ನೇಮಕ ಆಗುತ್ತದೆ. ಪರೀಕ್ಷೆಯಲ್ಲಿ ಚಯ□□□ಮ್ಯಾನ್, ಸದಸ್ಯರ ಹಸ್ತಕ್ಷೇಪವೇನೂ ಇಲ್ಲ ಎಂದು ಅವರು ಪ್ರಶ್ನೆಗೆ ಉತ್ತರ ಕೊಟ್ಟರು.

ಪ್ರೊಬೆಷನರಿ ಕೆಎಎಸ್ ಸುಮಾರು 384 ಹುದ್ದೆಗಳಿಗೆ ಪರೀಕ್ಷೆಗಳು ಈಚೆಗೆ ನಡೆದಿವೆ. 2 ಲಕ್ಷದ 20 ಸಾವಿರ ಆಕಾಂಕ್ಷಿಗಳು ಪರೀಕ್ಷೆಗೆ ಸಂಬಂಧಿಸಿ ಅರ್ಜಿ ಹಾಕಿದ್ದಾರೆ. 1.30 ಲಕ್ಷದಷ್ಟು ಜನ ಮೊದಲನೇ ಬಾರಿ ಪರೀಕ್ಷೆ ಬರೆದಿದ್ದರು. ಕೆಪಿಎಸ್ಸಿ ಗೊಂದಲದಿಂದ ಮತ್ತೊಮ್ಮೆ ಪರೀಕ್ಷೆ ನಡೆಸಬೇಕಾಯಿತು. ಭಾಷಾಂತರದ ಸಮಸ್ಯೆಯಿಂದ ಇನ್ನೊಮ್ಮೆ ಪರೀಕ್ಷೆ ನಡೆಸಲು ಸ್ವತಃ ಮುಖ್ಯಮಂತ್ರಿಗಳೇ ಸೂಚಿಸಬೇಕಾಯಿತು ಎಂದು ವಿವರಿಸಿದರು. ಈ ಬಾರಿ 1 ಲಕ್ಷ 5 ಸಾವಿರ ಜನರು ಪರೀಕ್ಷೆಗೆ ಹಾಜರಾಗಿದ್ದರು ಎಂದು ವಿವರ ನೀಡಿದರು. ಮೊದಲ ಪರೀಕ್ಷೆಗೆ ಶೇ 62ರಷ್ಟು ಜನರು




ಪರೀಕ್ಷೆಗೆ ಹಾಜರಾದರೆ, ಮರು ಪರೀಕ್ಷೆ ವೇಳೆ ಅದು ಶೇ 48ಕ್ಕೆ ಕುಸಿದಿದೆ. ಕರ್ನಾಟಕದ ಕೆಪಿಎಸ್ಸಿ ಉದ್ಯೋಗಾಕಾಂಕ್ಷಿಗಳ ಮತ್ತು ರಾಜ್ಯದ ಜನತೆಯ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ ಎಂದು ಆಕ್ಷೇಪಿಸಿದರು. ಒ.ಎಮ್. ಆರ್ ಶೀ□□□ನಲ್ಲಿ ಕೈಬರಹದ ನೋಂದಣಿಗೆ ಅವಕಾಶ ಮಾಡಿಕೊಟ್ಟಿದ್ದು ತಮಗೆ ಬೇಕಾದವರನ್ನು ಕೆ.ಎ.ಎಸ್ ಅಧಿಕಾರಿಗಳನ್ನಾಗಿ ಮಾಡುವ ಹುನ್ನಾರ ಅಡಗಿದೆ ಎಂದು ಅವರು ಆರೋಪಿಸಿದರು.

ಮರುಪರೀಕ್ಷೆ ಯಾಕೆ ಎಂದು ಬಿಜೆಪಿ ಶಾಸಕ ಚಂದ್ರು ಲಮಾಣಿ ಅವರು ಸದನದಲ್ಲಿ ಪ್ರಶ್ನಿಸಿದ್ದರು. ಮುಖ್ಯಮಂತ್ರಿಗಳು ಉತ್ತರ ನೀಡಿದ್ದು, ಆಯೋಗವು 2021ನೇ ಸಾಲಿನಲ್ಲಿ ಪ್ರಶ್ನೆಗಳ ಸೋರಿಕೆಯ ಹಿನ್ನೆಲೆಯಲ್ಲಿ ರಚಿಸಲಾಗಿದ್ದ ಉಪ ಸಮಿತಿಯ ಭಾಷಾಂತರಕಾರರು ಭಾಷಾಂತರಿಸಿದ ಪ್ರಶ್ನೆಗಳನ್ನು ಗೌಪ್ಯ ಶಾಖೆಯ ಅಧಿಕಾರಿ, ಸಿಬ್ಬಂದಿಗಳು ನೋಡುವ ಅವಕಾಶ ಇರಬಾರದೆಂದು ಸಲಹೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸದರಿ ಪ್ರಶ್ನೆಗಳನ್ನು ಆಯೋಗದಿಂದ ಪರಿಶೀಲಿಸಿಲ್ಲ ಎಂದಿದ್ದಾರೆ. ಪ್ರಶ್ನೆಗಳನ್ನು ಯಾರೂ ನೋಡದೆ ಮುದ್ರಣಕ್ಕೆ ಕಳಿಸಿದ್ದೇವೆ. ಪರೀಕ್ಷಾರ್ಥಿಗಳಿಗೆ ಅದನ್ನೇ ನೀಡಿದ್ದು ಗೊಂದಲ ಆಗಿದೆ ಎಂದು ತಿಳಿಸಿದ್ದಾರೆ ಎಂದು ಟೀಕಿಸಿದರು.

ಸ್ವತಃ ಮುಖ್ಯಮಂತ್ರಿಗಳೇ ಹೇಳಿ ಮರುಪರೀಕ್ಷೆ ಮಾಡುವಾಗ ಅದೇ ತಪ್ಪಾದರೆ ಇವರಿಗೆ ಏನೆನ್ನಬೇಕು ಎಂದು ಪ್ರಶ್ನಿಸಿದರು. ಎಡವಿದ ಕಲ್ಲಿಗೇ ಇನ್ನೊಮ್ಮೆ ಎಡವಿದರೆ ನಾವು ಏನು ಹೇಳಬೇಕು ಎಂದು ಕೇಳಿದರು. ಎರಡನೇ ಬಾರಿಯೂ ವೈಫಲ್ಯ, ಅದೇ ತಪ್ಪಾದರೆ ಅದು ನಿಮ್ಮ ವೈಫಲ್ಯವಲ್ಲವೇ ಮುಖ್ಯಮಂತ್ರಿಗಳೇ ಎಂದು ಪ್ರಶ್ನೆ ಮಾಡಿದರು. ಕೆಪಿಎಸ್ಸಿಗೆ ಒಬ್ಬರು ಚಯ□□□ಮ್ಯಾನ್, ಹಲವಾರು ಸದಸ್ಯರಿದ್ದಾರೆ. ಅವರೆಲ್ಲರಿಗೂ ಈ ಎಲ್ಲ ಸಂಗತಿಗಳ ಮೇಲೆ ಯಾವುದೇ ನಿಯಂತ್ರಣವಿಲ್ಲ ಎಂದು ತಿಳಿಸಿದರು.

ಪರೀಕ್ಷೆ ಎಂಬ ಮುಗಿಯದ ಕಥೆ

ರಾಜ್ಯದಲ್ಲಿ ನೇಮಕಾತಿಗಾಗಿ ಪರೀಕ್ಷೆ ಎಂದರೆ ಅದು ಮುಗಿಯದ ಕಥೆ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ವಿಶೇಷವಾಗಿ ಯುಪಿಎಸ್ಸಿ, ಕೆಪಿಎಸ್ಸಿ ನೇಮಕಾತಿಗಳು ಅತ್ಯಂತ ಮಹತ್ವಪೂರ್ಣ. ದೇಶದ ಅಭಿವೃದ್ಧಿ, ಆಡಳಿತ ವ್ಯವಸ್ಥೆ ಮೇಲೆ ದೊಡ್ಡ ಪರಿಣಾಮ ಬೀರುವ ಯುಪಿಎಸ್ಸಿ, ಕೆಪಿಎಸ್ಸಿ ನೇಮಕಾತಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯಿಂದ ಕೂಡಿರಬೇಕೆಂದು ಗಂಭೀರವಾಗಿ ಪರಿಗಣಿಸಲಾಗಿತ್ತು ಎಂದರು.

ಯುಪಿಎಸ್ಸಿ ಮೊರೆ ಹೋಗಲು ಪಿ.ರಾಜೀವ್ ಆಗ್ರಹ

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಅವರು ಮಾತನಾಡಿ, ಯುಪಿಎಸ್ಸಿ ಪ್ರಾಮಾಣಿಕವಾಗಿ ಪರೀಕ್ಷೆ ನಡೆಸುತ್ತದೆ. ಕೆಪಿಎಸ್ಸಿ ಸೋತು ಹೋಗಿದೆ; ನೀವೇ ಇದರಲ್ಲಿನ ಗೊಂದಲಗಳ ತನಿಖೆ ಮಾಡಿ ಎಂದು ಸರಕಾರವು ಯುಪಿಎಸ್ಸಿಗೆ ಶರಣಾಗಬೇಕಿದೆ ಎಂದು ವಿನಂತಿಸಿದರು.

ಪರೀಕ್ಷಾರ್ಥಿಗಳು ಸರಕಾರಿ ನೌಕರಿಯ ನಂಬಿಕೆಯಿಂದ ಪರೀಕ್ಷಾ ಶುಲ್ಕ ಕಟ್ಟಿದ್ದು, ಅದನ್ನು ಬಡ್ಡಿ ಸೇರಿಸಿ ಎಲ್ಲ ಅಭ್ಯರ್ಥಿಗಳಿಗೆ ವಾಪಸ್ ಕೊಡಬೇಕೆಂದು ಅವರು ಒತ್ತಾಯಿಸಿದರು. ಬಿಜೆಪಿ ರಾಜ್ಯ ವಕ್ತಾರ ಅಶೋಕ್ ಗೌಡ ಅವರು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು.

# ಪುತ್ರಿ ಬಲತ್ಕಾರಕ್ಕೆ ಯತ್ನ; ಪತಿಯ ದೇಹ ತುಂಡರಿಸಿದ ಪತ್ನಿ

**ಬೆಳಗಾವಿ:** ದೈಹಿಕ ಸಂಪರ್ಕಕ್ಕೆ ತಾನು ಒಪ್ಪಿಲ್ಲವೆಂಬ ಕಾರಣಕ್ಕೆ ಮಗಳ ಮೇಲೆ ಬಲತ್ಕಾರ ಮಾಡಲು ಯತ್ನಿಸಿದ ಪತಿಯನ್ನು ಪತ್ನಿಯೇ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿ, ದೇಹವನ್ನು ತಂಡರಿಸಿ ಗದ್ದೆಗೆ ಎಸೆದ ಘಟನೆ ಚಿಕ್ಕೋಡಿ ತಾಲೂಕಿನ ಉಮರಾಣಿ ಗ್ರಾಮದಲ್ಲಿ ನಡೆದಿದೆ.

ಉಮರಾಣಿ ಗ್ರಾಮದ ಶ್ರೀಮಂತ ಇಟ್ನಾಳೆನನ್ನು ಕೊಲೆ ಮಾಡಿ, ಮೃತ ದೇಹವನ್ನು ಎರಡು ತುಂಡಾಗಿ ಕತ್ತರಿಸಿ ಪಕ್ಕದ ಗದ್ದೆಯಲ್ಲಿ ಎಸೆದಿದ್ದ ಆತನ ಪತ್ನಿ ಸಾವಿತ್ರಿಯನ್ನು ಪೊಲೀಸರು ಬಂಧಿಸಿದ್ದಾರೆ. ಶ್ರೀಮಂತ ಇಟ್ನಾಳೆಯನ್ನು ಕೊಲೆ ಮಾಡಿದ ನಂತರ, ಶವವನ್ನು ಮನೆಯಲ್ಲಿ ಇಟ್ಟುಕೊಂಡರೆ ಪೊಲೀಸರ ಕೈಗೆ ಸಿಕ್ಕಿಹಾಕಿಕೊಳ್ಳಬಹುದು ಎಂದು ಹೆದರಿದೆ ಸಾವಿತ್ರಿ ಶವವನ್ನು ಸಾಗಿಸುವುದು ಕಷ್ಟ ಎಂದು ಅರಿತು ಆಕೆ ಎರಡು ತುಂಡು ಮಾಡಿದ್ದಾಳೆ. ನಂತರ ಚಿಕ್ಕ ಬ್ಯಾರೆಲ್‌ನಲ್ಲಿ ಹಾಕಿ ಸಾಗಾಟ ಮಾಡಿ ಪಕ್ಕದ ಗದ್ದೆಯಲ್ಲಿ ಎಸೆದು ಬಂದಿದ್ದಾಳೆ.

ರಕ್ತ ಬಿದ್ದ ಜಾಗವನ್ನು ಸ್ವಚ್ಛಗೊಳಿಸಿ, ಸ್ನಾನ ಮಾಡಿ ಮೈ ಮೇಲಿನ ಬಟ್ಟೆಯನ್ನೆಲ್ಲ ಸುಟ್ಟು ಹಾಕಿ ಬೂದಿಯನ್ನು ತಿಪ್ಪೆಗೆ ಎಸೆದಿದ್ದಾಳೆ. ಕೊಲೆ ಮಾಡಲು ಬಳಸಿದ್ದ ಕಲ್ಲನ್ನು ತೊಳೆದು ತಗಡಿನ ಶೆಡ್ಡಿನಲ್ಲಿ ಬಚ್ಚಿಟ್ಟಿದ್ದಾಳೆ. ಪತಿಯ ಮೊಬೈಲ್ ನ್ನು ಸ್ವಿಚ್ ಆಫ್ ಮಾಡಿ ಇಟ್ಟಿದ್ದಾಳೆ. ಕೃತ್ಯದ ವೇಳೆ ಎಚ್ಚರಗೊಂಡಿದ್ದ ಮೊದಲ ಮಗಳಿಗೆ, ನಡೆದ ವಿಚಾರವನ್ನು ಯಾರ ಬಳಿಯೂ ಹೇಳದಂತೆ ತಾಕೀತು ಮಾಡಿದ್ದಾಳೆ. ರಾತ್ರಿ ಬೆಳಗಾಗುವಷ್ಟರಲ್ಲಿ ಕೊಲೆಯ ಸುಳಿವೇ ಸಿಗದಂತೆ ಮಾಡಿದ್ದಾಳೆ.

ಜಮೀನಿನಲ್ಲಿ ಶವ ಕಂಡ ಸ್ಥಳೀಯರು ಚಿಕ್ಕೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದರಿಂದ, ಅವರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದಾಗ ನಡೆದಿರುವ ಘಟನೆ ಒಂದೊಂದಾಗಿ ಬೆಳಕಿಗೆ ಬಂದಿದೆ. ಚಿಕ್ಕೋಡಿ ಪೊಲೀಸರಿಗೆ ಇಟ್ನಾಳೆ ಪತ್ನಿಯ ಮೇಲೆ ಅನುಮಾನ ಬಂದಿದ್ದು ವಿಚಾರಣೆಗೆ ಒಳಪಡಿಸಿದ್ದಾರೆ. ಈ ವೇಳೆ, ಸತ್ಯ ಬಾಯಿಬಿಟ್ಟ ಸಾವಿತ್ರಿ, ಪತಿಯಿಂದ ನಿರಂತರವಾಗಿ ಆಗುತ್ತಿದ್ದ ಕಿರುಕುಳ, ಶೋಷಣೆಗೆ ಬೇಸತ್ತು ಕೃತ್ಯ ಎಸಗಿದ್ದಾಗಿ ಒಪ್ಪಿಕೊಂಡಿದ್ದಾಳೆ.

ಪತಿ ಯಾವಾಗಲೂ ತನ್ನೊಂದಿಗೆ ಜಗಳವಾಡುತ್ತಿದ್ದ. ಕುಡಿಯಲು ಹಣಕೊಡಬೇಕು, ಬೈಕ್ ಕೊಡಿಸಬೇಕೆಂದು ಕಿರುಕುಳ ನೀಡುತ್ತಿದ್ದ. ಅಲ್ಲದೆ, ಹಣಕ್ಕಾಗಿ ಬೇರೆಯವರ ಜೊತೆ ಮಲಗು ಎಂದು ಒತ್ತಾಯಿಸುತ್ತಿದ್ದ. ಇದೇ ಕಾರಣದಿಂದ ಪರ ಪುರುಷರ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿರುವುದಾಗಿ ಸಾವಿತ್ರಿ ಪೊಲೀಸರ ಬಳಿ ತಿಳಿಸಿದ್ದಾಳೆ.

ಪತಿಯು ಮಗಳನ್ನೂ ಬಿಡದೆ ಬಲಾತ್ಕಾರ ಯತ್ನಿಸಿದ್ದರಿಂದ ಸಹಿಸಲಾಗದೆ ಕೃತ್ಯ ಎಸಗಿದ್ದಾಗಿ ಪೊಲೀಸರ ಬಳಿ ಒಪ್ಪಿಕೊಂಡಿದ್ದಾಳೆ. ಮಕ್ಕಳು ಅನಾಥರಾಗಲಿದ್ದು, ನನ್ನನ್ನು ಬಿಟ್ಟುಬಿಡಿ ಆರೋಪಿಯು ಗೋಗರೆದಿದ್ದಾಳೆ.

# ಸಿ ಟಿ ರವಿ ಜೀವಕ್ಕೆ ತೊಂದರೆ ಆಗದು

**ಬೆಂಗಳೂರು:** ಸಿ ಟಿ ರವಿ ಜೀವಕ್ಕೆ ತೊಂದರೆ ಆಗದು, ವೈಯಕ್ತಿಕವಾಗಿ ನಾನು ಗ್ಯಾರಂಟಿ ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ವೈಯಕ್ತಿಕವಾಗಿ ಒಂದು ಮಾತನ್ನಂತೂ ಹೇಳಬಲ್ಲೆ, ನಿಮಗೆ(ಸಿ ಟಿ ರವಿ) ಏನೂ ಆಗುವುದಿಲ್ಲ. ನಿಮ್ಮ ಜೀವಕ್ಕೆ ನಾನು ಗ್ಯಾರಂಟಿ. ತುರ್ತು ಪರಿಸ್ಥಿತಿ ಎಂದರೆ ಕೇಂದ್ರ ಸರ್ಕಾರದವರು ಮಾಧ್ಯಮದವರ ಮೇಲೆ ಮಾಡುತ್ತಿದ್ದಾರಲ್ಲಾ ಅದು. ಎಮರ್ಜೆನ್ಸಿ ಪರಿಸ್ಥಿತಿ ಕರ್ನಾಟಕದಲ್ಲಿ ಇಲ್ಲ. ನಾನು ಎಂಎಲ್‌ಎ, ನೀವು ಎಂಎಲ್ಸಿ ಎಂದು ಹೇಳಿದ್ದಾರೆ.

" ಐದು ವರ್ಷದ ಹಿಂದೆ ನನ್ನ ಮೇಲೆ ಎಫ್‌ಐಆರ್ ಏನೂ ಆಗಿರಲಿಲ್ಲ, ನಾನು ಕಳೆದ ಚುನಾವಣೆಯಲ್ಲಿ ಯಾರನ್ನು ಸೋಲಿಸಿದ್ದೇನೋ, ಅವರು ನನ್ನನ್ನು ಐದು ತಾಸು ಚಿಕ್ಕಬಳ್ಳಾಪುರದಲ್ಲಿ ಸುತ್ತಾಡಿಸಿದ್ದಾರೆ. ಕಾಫಿ, ಟೀ, ತಿಂಡಿ, ಊಟ ಎಂದು ಹೇಳಿಕೊಂಡು ಅಲ್ಲಲ್ಲಿ ನನ್ನನ್ನು ಸುತ್ತಾಡಿಸಿದ್ದರು. ಪೊಲೀಸರು ನನ್ನನ್ನು ಚೆನ್ನಾಗಿಯೇ ನೋಡಿಕೊಂಡರು. ಸಿ.ಟಿ.ರವಿ ಅವರನ್ನೂ ಚೆನ್ನಾಗಿ ನೋಡಿಕೊಂಡಿರುತ್ತಾರೆ" ಎಂದು ಈಶ್ವರ್ ಹೇಳಿದ್ದಾರೆ. ಸಿ.ಟಿ.ರವಿ ಅವರಿಗೆ ತುಂಬಾ ಜೀವದ ಮೇಲೆ ಭಯ ಇದ್ದರೆ, ಸರ್ಕಾರದ ಪರವಾಗಿ ಹೇಳುತ್ತೇನೆ, ಅವರ ಜೀವಕ್ಕೆ ನಾನು ಹೊಣೆಯಾಗಿರುತ್ತೇನೆ. ಅವರು ತಲೆಕೆಡಿಸಿಕೊಳ್ಳಲು ಹೋಗುವುದು ಬೇಡ. ಪೊಲೀಸರು ಅವರನ್ನು ಚೆನ್ನಾಗಿಯೇ ನೋಡಿಕೊಂಡಿರುತ್ತಾರೆ. ಅದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲು ಅವರಿಗೆ ಕಷ್ಟವಾಗಬಹುದು ಎಂದು ಹೇಳಿದ್ದಾರೆ.

# ಎಸ್‌ಎಂಕೃಷ್ಣ ಸ್ಮಾರಕ ಪ್ರಶಸ್ತಿಗೆ ಸಂದೀಪ್ ಆಯ್ಕೆ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರ ನೆನಪಿನಾರ್ಥ, ಸಂಗೀತ ಕ್ಷೇತ್ರದಲ್ಲಿ ಸಾಧನೆಗೈದವರನ್ನು ಪ್ರೋತ್ಸಾಹಿಸುವ ಸಲುವಾಗಿ " ಕೃಷ್ಣ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ" ಸ್ಥಾಪಿಸಲಾಗಿದೆ. ಪ್ರಶಸ್ತಿಯು 1 ಲಕ್ಷ ನಗದು ಬಹುಮಾನವನ್ನು ಹೊಂದಿದೆ. ಸಂದೀಪ್ ನಾರಾಯಣ್ ಅವರು ಈ ಪ್ರಶಸ್ತಿಯ ಮೊದಲ ಪುರಸ್ಕೃತರಾಗಿ ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ಎಸ್.ಎಂ. ಕೃಷ್ಣ ಅವರ ಶಾಸ್ತ್ರೀಯ ಸಂಗೀತದ ನಿರಂತರ ಉತ್ಸಾಹ ಮತ್ತು ಕಲಾತ್ಮಕ ಪ್ರತಿಭೆಯನ್ನು ಪೋಷಿಸುವ ಅವರ ಬದ್ಧತೆಗೆ ಪೂರಕವಾಗಿದೆ ಎಂದು ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ಸ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಮತ್ತು ಪ್ರಧಾನ ಕಾರ್ಯದರ್ಶಿ ಎಸ್ ಎನ್ ವರದರಾಜ್ ತಿಳಿಸಿದ್ದಾರೆ.

# ‘ಸಚಿನ್ ಪಾಂಚಾಳ್ ಗುತ್ತಿಗೆದಾರನೇ ಅಲ್ಲ’



**ಬೆಂಗಳೂರು:** ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜ ಕಪನೂರು ವಿರುದ್ಧ ವಂಚನೆ ಕೊಲೆ ಬೆದರಿಕೆ ಆರೋಪ ಮಾಡಿ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಇದೀಗ ಹೊಸ ಟ್ವಿಸ್ಟ್ ಸಿಕ್ಕಿದೆ. ಸಚಿನ್ ಪಂಚಾಳ ಗುತ್ತಿಗೆದಾರನೇ ಅಲ್ಲ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಗನ್ನಾಥ್ ಶೆಗಜಿ ಸ್ಪಷ್ಟನೆ ನೀಡಿದ್ದಾರೆ. ಸಚಿನ್ ಗುತ್ತಿಗೆದಾರ ಎಂದು ಎಲ್ಲೂ ನೋಂದಣಿ ಇಲ್ಲ. ಗುತ್ತಿಗೆದಾರರ ಸಂಘದ ಬೀದರ್ ಘಟಕದಿಂದಲೂ ಮಾಹಿತಿ ಪಡೆಯಲಾಗಿದೆ. ಇತರೆ ಜಿಲ್ಲೆಗಳಿಂದಲೂ ಗುತ್ತಿಗೆದಾರ ಅಲ್ಲವೆಂದು ಮಾಹಿತಿ ಲಭ್ಯವಾಗಿದೆ ಎಂದಿದ್ದಾರೆ. ಧಾರವಾಡ ಇಂಜಿನಿಯರ್ ಕಚೇರಿಯಲ್ಲೂ ಗುತ್ತಿಗೆದಾರ ಎಂದು ಎಲ್ಲೂ ಕೂಡ ನೋಂದಣಿ ದಾಖಲೆ ಇಲ್ಲ. ಎರಡು ಕಚೇರಿಯಿಂದ ಮಾಹಿತಿಯನ್ನು ಗುತ್ತಿಗೆದಾರರ ಸಂಘ ಇದೀಗ ಪಡೆದುಕೊಂಡಿದೆ.ಆದರೆ ಎಲ್ಲೂ ಕೂಡ ಸಚಿನ್ ಪಂಚಾಳ್ ಹೆಸರು ಗುತ್ತಿಗೆದಾರ ಎಂದು ನಮೂದು ಆಗಿಲ್ಲ ಎನ್ನಲಾಗಿದೆ.

# ನಿಖಿಲ್, ಅನಿತಾ ಕುಮಾರಸ್ವಾಮಿ ಹೆಸರಲ್ಲೂ ಐಶ್ವರ್ಯ ವಂಚನೆ

ಮಂಡ್ಯ: ಮಾಜಿ ಸಂಸದ ಡಿ.ಕೆ. ಸುರೇಶ್ ತಂಗಿ ಎಂದು ಹೇಳಿಕೊಂಡು 9 ಕೋಟಿ ರೂ. ಮೌಲ್ಯದ ಚಿನ್ನ ಪಡೆದು ವಂಚಿಸಿದ್ದಾರೆಂದು ಆರೋಪಿಸಲಾಗಿರುವ ಐಶ್ವರ್ಯ ಗೌಡ, ನನಗೆ ಮಾಜಿ ಸಿಎಂ ಕುಮಾರಸ್ವಾಮಿ ಪತ್ನಿ ಅನಿತಾ ಹಾಗೂ ಪುತ್ರ ನಿಖಿಲ್ ಕುಮಾರಸ್ವಾಮಿ ಕೂಡ ಹತ್ತಿರದ ಪರಿಚಯಸ್ಥರು ಎಂದು ಹೇಳಿಕೊಂಡು ವಂಚಿಸಿರುವುದು ಪೊಲೀಸರ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪೂರ್ಣಿಮಾ ಎಂಬಾಕೆಯಿಂದ 100 ಗ್ರಾಂ ಚಿನ್ನದ ಜೊತೆ 15 ಲಕ್ಷ ಹಣ ಪಡೆದು ಇಂದು ನಾಳೆ ವಾಪಸ್ಸು ಕೊಡುವೆ ಎಂದು ಸತಾಯಿಸಿ ಐಶ್ವರ್ಯ ವಂಚಿಸಿರುವುದು ಪತ್ತೆಯಾಗಿದೆ. ಅಲ್ಲದೇ ಹಣ ಪಡೆಯುವ ಮುನ್ನ ನಾನು ಡಿ. ಕೆ. ಸುರೇಶ್ ತಂಗಿ ಎಂದು ಐಶ್ವರ್ಯ ಪರಿಚಯ ಮಾಡಿಕೊಂಡ ಬಗ್ಗೆಯೂ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಲ್ಲದೇ ತನಗೆ ಹೆಚ್‌ಡಿಕೆ ಪತ್ನಿ ಅನಿತಾ ಕುಮಾರಸ್ವಾಮಿ ಹಾಗೂ ಪುತ್ರ ನಿಖಿಲ್ ಕುಮಾರಸ್ವಾಮಿಯೂ ಬಹಳಷ್ಟು ಪರಿಚಿತರು ಎಂದು ಕೂಡ ನಂಬಿಕೆ ಗಳಿಸಿಕೊಂಡಿದ್ದಾಳೆ. ಈ ಕುರಿತು ಐಶ್ವರ್ಯ ಗೌಡ ವಿರುದ್ಧ ಮಂಡ್ಯ ಪೂರ್ವ ಠಾಣೆಯಲ್ಲಿ ರವಿಕುಮಾರ್ ಹಾಗೂ ಪೂರ್ಣಿಮಾ ಸಲ್ಲಿಸಿರುವ ದೂರಿನಲ್ಲಿ ಉಲ್ಲೇಖವಾಗಿದೆ.

ಅನಿತಾ ಕುಮಾರಸ್ವಾಮಿ, ನಿಖಿಲ್ ಇಬ್ಬರೂ ಬಹಳಷ್ಟು ಪರಿಚಿತರು. ನಿಮಗೆ ಅವರ ಕಡೆಯಿಂದ ಸಹಾಯ ಬೇಕಿದ್ದರೆ ನನಗೆ ಹೇಳಿ, ನಾನು ಸಹಾಯ ಮಾಡಿಸಿಕೊಡುತ್ತೇನೆ ಎಂದು ಐಶ್ವರ್ಯ ಗೌಡ ಹೇಳಿ ನಮ್ಮನ್ನ ನಂಬಿಸಿ ನಮ್ಮ ಬಳಿ ಹಂತ ಹಂತವಾಗಿ 40 ಲಕ್ಷ ರೂ. ಹಾಗೂ ಪೂರ್ಣಿಮಾ ಬಳಿಯೂ ಹಣ, ಚಿನ್ನ ಪಡೆದಿದ್ದಳು. ಈಗ ಹಣ ವಾಪಸ್ಸು ನೀಡದೇ ಮೋಸ ಮಾಡಿದ್ದಾಳೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ನಡುವೆ ಮಹಿಳೆಯೊಬ್ಬರಿಗೆ 3.25 ಕೋಟಿ ರೂ ವಂಚಿಸಿರುವ ಪ್ರಕರಣವನ್ನು ತನಿಖೆಯನ್ನು ತೀವ್ರಗೊಳಿಸಿರುವ ರಾಜರಾಜೇಶ್ವರಿ ನಗರ ಪೊಲೀಸರು, ಸರ್ಚ್ ವಾರೆಂಟ್ ಪಡೆದು ನಿನ್ನೆ ಆರೋಪಿ ಐಶ್ವರ್ಯ ಗೌಡ ಮನೆಗೆ ತೆರಳಿ ಪರಿಶೀಲನೆ ನಡೆಸಿದ್ದಾರೆ.



3.25 ಕೋಟಿ ರೂ. ಹಾಗೂ 430 ಗ್ರಾಂ ಚಿನ್ನಾಭರಣ ವಂಚಿಸಿರುವುದಾಗಿ ಆರೋಪಿಸಿ ಶಿಲ್ಪಾ ಗೌಡ ಎಂಬವರು ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆದು ಐಶ್ವರ್ಯ ಗೌಡ ಮನೆ ಶೋಧಿಸಿ ಮಹತ್ವದ ದಾಖಲಾತಿಗಳನ್ನು ವಶಕ್ಕೆ ಪಡೆದು ವಿಚಾರಣೆಗೆ ಬರುವಂತೆ ತಿಳಿಸಿದ್ದಾರೆ.ಆರ್. ಆರ್. ನಗರದ ಶಿಲ್ಪಾ ಗೌಡ ಅವರಿಗೆ ವಂಚನೆ ಎಸಗಿದ ಸ್ಥಳ ತೋರಿಸಬೇಕು, ಸಾಕ್ಷಿದಾರರನ್ನು ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಇನ್ನೆರಡು ದಿನದೊಳಗೆ ಬಂದು ಹಾಜರುಪಡಿಸಲು ಪೊಲೀಸರು ನೋಟಿಸ್ ನೀಡಿದ್ದಾರೆ. ವಾರಾಹಿ ಜ್ಯೂವೆಲ್ಲರಿ ಶಾಪ್ ಮಾಲಕಿ ವನಿತಾ ಎಸ್. ಐತಾಳ್ ಎಂಬವರಿಗೆ 9.82 ಕೋಟಿ ರೂ ಮೌಲ್ಯದ 14.660 ಕೆ.ಜಿ ಚಿನ್ನಾಭರಣ ವಂಚಿಸಿರುವ ಪ್ರಕರಣದಲ್ಲಿ ಚಂದ್ರಾ ಲೇಔಟ್ ಪೊಲೀಸರು, ಐಶ್ವರ್ಯ ಗೌಡ ಪತಿ ಕೆ. ಎನ್. ಹರೀಶ್‌ನನ್ನು ಬಂಧಿಸಿದ್ದರು.

ಇದನ್ನು ಪ್ರಶ್ನಿಸಿ ಐಶ್ವರ್ಯ ದಂಪತಿ ಹೈಕೋರ್ಟ್ ಮೊರೆ ಹೋಗಿದ್ದರು. ಮಂಗಳವಾರ ವಿಚಾರಣೆ ನಡೆಸಿದ್ದ ನ್ಯಾಯಾಲಯ ಬಂಧನಕ್ಕೆ ಸಕಾರಣವನ್ನು ಲಿಖಿತವಾಗಿ ನೀಡದಿದ್ದಕ್ಕೆ ಆಕ್ಷೇಪಿಸಿ ಮಧ್ಯಂತರ ಜಾಮೀನು ನೀಡಿ ಕೂಡಲೇ ಆರೋಪಿತರನ್ನು ಬಿಡುಗಡೆ ಮಾಡುವಂತೆ ಪೊಲೀಸರಿಗೆ ಸೂಚನೆ ನೀಡಿತ್ತು.

# ಬಿಜೆಪಿಯವರಿಗೆ ಖರ್ಗೆ ಕಂಡರೆ ಆಗಲ್ಲ: ಈಶ್ವರ್ ಖಂಡ್ರೆ ಆರೋಪ

**ಬೆಂಗಳೂರು:** ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣವನ್ನು ಪ್ರತಿಪಕ್ಷ ಬಿಜೆಪಿ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ. ಬಿಜೆಪಿಯವರಿಗೆ ಪ್ರಿಯಾಂಕ್ ಖರ್ಗೆ ಅವರನ್ನು ಕಂಡರೆ ಆಗುವುದಿಲ್ಲ ಎಂದು ಸಚಿವ ಈಶ್ವರ್ ಖಂಡ್ರೆ ಆರೋಪಿಸಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಜೆಪಿ ಈ ವಿಚಾರದಲ್ಲಿ ಅನವಶ್ಯಕವಾಗಿ ರಾಜಕೀಯ ಮಾಡುತ್ತಿದೆ ಎಂದು ಗುಡುಗಿದರು.

"ಸಚಿನ್ ಪಾಂಚಾಳ ಆತ್ಮಹತ್ಯೆ ನಿಜಕ್ಕೂ ನೋವಿನ ಸಂಗತಿ. ಆದರೆ ಈ ಸೂಕ್ಷ್ಮ ವಿಚಾರವನ್ನು ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವುದನ್ನು ಬಿಜೆಪಿ ನಿಲ್ಲಿಸಬೇಕು. ಪ್ರಕರಣದಲ್ಲಿ ಅನಗತ್ಯವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೆಸರು ಎಳೆದು ತರುವುದನ್ನು ಸಮರ್ಥಿಸಲು ಸಾಧ್ಯವಿಲ್ಲ.." ಎಂದು ಈಶ್ವರ್ ಖಂಡ್ರೆ ಅಸಮಧಾನ ಹೊರಹಾಕಿದ್ದಾರೆ.

"ಬಿಜೆಪಿಯವರು ಆರೋಪಿಸುತ್ತಿರುವಂತೆ ಸಚಿನ್ ಡೆತ್ ನೋಟ್‌ನಲ್ಲಿ ಪ್ರಿಯಾಂಕ್ ಖರ್ಗೆ ಅವರ ಹೆಸರನ್ನು ಉಲ್ಲೇಖ ಮಾಡಲಾಗಿಲ್ಲ. ಹೀಗಾಗಿ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವ ಅವಶ್ಯಕತೆ ಇಲ್ಲ. ಬಿಜೆಪಿಯವರು ಪ್ರಿಯಾಂಕ್ ಖರ್ಗೆ ಅವರ ರಾಜೀನಾಮೆ ಕೇಳುವ ಮೊದಲು, ತಮ್ಮ ಅವಧಿಯಲ್ಲಾದ ಅನಾಹುತಗಳ ಇತಿಹಾಸದತ್ತ ಒಮ್ಮೆ ಕಣ್ಣು ಹಾಯಿಸುವುದು ಉತ್ತಮ.." ಎಂದು ಈಶ್ವರ್ ಖಂಡ್ರೆ ಕಿಡಿಕಾರಿದ್ದಾರೆ.

"ಬಿಜೆಪಿಯವರಿಗೆ ಪ್ರಿಯಾಂಕ್ ಖರ್ಗೆ ಅವರನ್ನು ಕಂಡರೆ ಹೊಟ್ಟೆಯುರಿ ಇದೆ. ಸಚಿವರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಿಯಾಂಕ್ ಖರ್ಗೆ ಅವರ ಹೆಸರಿಗೆ ಮಸಿ ಬಳಿಯಲು ಬಿಜೆಪಿ ಹವಣಿಸುತ್ತಿದೆ. ಆದರೆ ಬಿಜೆಪಿಯವರ ಸುಳ್ಳು ಆರೋಪಗಳನ್ನು ರಾಜ್ಯದ ಜನ ನಂಬುವುದಿಲ್ಲ..: ಎಂದು ಇದೇ ವೇಳೆ ಈಶ್ವರ್ ಖಂಡ್ರೆ ಭರವಸೆ ವ್ಯಕ್ತಪಡಿಸಿದರು.

ಗುತ್ತಿಗೆದಾರ ಸಚಿನ್ ಪಾಂಚಾಳ ಅವರ ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂಬ ಬಿಜೆಪಿ ಆಗ್ರಹ ಹಾಸ್ಯಾಸ್ಪದ. ಯಾವ ಆಧಾರದಲ್ಲಿ ಅವರು ಸಿಬಿಐ ತನಿಖೆಗೆ ಒತ್ತಾಯಿಸುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ. ರಾಜ್ಯದ ಸಿಐಡಿ ಈ ಪ್ರಕರಣದ ತನಿಖೆ ಮಾಡಲು ಸಶಕ್ತವಾಗಿದೆ.." ಎಂದು ಈಶ್ವರ್ ಖಂಡ್ರೆ ನುಡಿದರು.

ಬಿಜೆಪಿಗೆ ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಸಿಗಬೇಕು ಎಂಬ ನೈಜ ಕಾಳಜಿ ಇದ್ದರೆ, ಪ್ರಕರಣದ ತನಿಖೆ ಮುಗಿಯುವವರೆಗೂ ಈ ವಿಚಾರದಲ್ಲಿ ಸುಮ್ಮನಿರಬೇಕು. ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ ಸತ್ಯವನ್ನು ಬಯಸಲಿಗೆಳೆಯುವರೆಗೂ ತಾಳ್ಮೆಯಿಂದ ಕಾಯಬೇಕು ಎಂದು ಸಚಿವ ಈಶ್ವರ್ ಖಂಡ್ರೆ ಆಗ್ರಹಿಸಿದರು.

ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸುತ್ತಿರುವ ಪ್ರತಿಪಕ್ಷ ಬಿಜೆಪಿ, ಸಚಿವ ಪ್ರಿಯಾಂಕ್ ಖರ್ಗೆ ಅವರ ರಾಜೀನಾಮೆಗೆ ಪಟ್ಟು ಹಿಡಿದು ಕುಳಿತಿದೆ. ಅಲ್ಲದೇ ಈ ವಿಚಾರವಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೂ ಭೇಟಿ ಮಾಡಿ ಬಂದಿದ್ದಾರೆ.

ಆದರೆ ಸಿಬಿಐ ತನಿಖೆ ಅಗತ್ಯವಿಲ್ಲ ಎಂದು ಹೇಳಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಪ್ರಿಯಾಂಕ್ ಖರ್ಗೆ ತಮ್ಮ ಸಚವ ಸ್ಥಾನಕ್ಕೆ ರಾಜೀನಾಮೆ ನೀಡುವ ಅವಶ್ಯಕತೆ ಇಲ್ಲ ಎಂದು ಹೇಳಿದೆ. ಈ ಕುರಿತು ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ತನಿಖೆಯಿಂದ ಸತ್ಯಾಂಶ ಹೊರಬರಲಿದ್ದು ಅಲ್ಲಿಯವರೆಗೆ ಪ್ರತಿಪಕ್ಷಗಳು ತಾಳ್ಮೆವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಮೊದಲ ಪುಟದಿಂದ

### ಫೆ.28ರಿಂದ ಹಂಪಿ ಉತ್ಸವ

ಸಮಾರೋಪ ನಡೆಯಲಿದೆ. ಹಂಪಿ ಉತ್ಸವ ಕ್ಕೆ ಸಿದ್ಧತೆ ಮಾಡಿಕೊಳ್ಳಲು ಜಿಲ್ಲಾಧಿಕಾರಿ ದಿವಾಕರ್ ಅವರಿಗೆ ಉಸ್ತುವಾರಿ ಸಚಿವ ಜಮೀರ್ ಅಹಮದ್ ಖಾನ್ ಸೂಚನೆ ನೀಡಿದ್ದಾರೆ.

2024ರ ಹಂಪಿ ಉತ್ಸವ ಫೆಬ್ರವರಿ 2 ರಿಂದ 4ರವರೆಗೆ 3 ದಿನಗಳ ಕಾಲ ನಡೆದಿತ್ತು. ಸಿಎಂ ಸಿದ್ದರಾಮಯ್ಯ ಸೇರಿದಂತೆ ನಾಡಿನ ಗಣ್ಯರು ಭಾಗವಹಿಸಿದ್ದರು. ಕಳೆದ ವರ್ಷ ಹಲವು ಕಾರಣಗಳಿಗೆ ಸರಳವಾಗಿ ಆಚರಣೆ ಮಾಡಲಾಗಿತ್ತು. ಈ ಬಾರಿ ಅದ್ಧೂರಿಯಾಗಿ ಆಚರಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

### ನ್ಯಾಯಾಂಗ ತನಿಖೆಗೆ ಪಟ್ಟು

ತರಾಟೆಗೆ ತೆಗೆದುಕೊಂಡರು.

ಕಳಪೆ ಹೈವಿ ದ್ರಾವಣದಿಂದ ಬಾಣಂತಿಯರು ಸತ್ತಿದ್ದಾರೆ. ಆದರೆ ಆರೋಗ್ಯ ಸಚಿವರು ಇದನ್ನು ನಿರಾಕರಿಸುತ್ತಾರೆ. ನಾನು ಹೇಳಿದ್ದು ಮಾತ್ರ ಸತ್ಯ, ಏಕೆಂದರೆ ಕಳಪೆ ಔಷಧಿ ಬಗ್ಗೆ ಸರ್ಕಾರವೇ ನೋಟಿಸ್ ಕೊಟ್ಟಿದೆ. ಔಷಧಿ ಕಂಪೆನಿಯವರು ನ್ಯಾಯಾಲಯದಲ್ಲಿ ತಡೆ ತಂದಿದ್ದಾರೆ. ಕೋರ್ಟ್‌ನಲ್ಲಿ ಸಮರ್ಥವಾಗಿ ವಾದ ಮಾಡಲು ಈ ಸರ್ಕಾರದಿಂದ ಆಗುತ್ತಿಲ್ಲ ಎಂದು ಅವರು ಕಿಡಿಕಾರಿದರು.

ಬಾಣಂತಿಯರ ಸಾವನ್ನು ನಿಲ್ಲಿಸಲು ಸರ್ಕಾರ ಕೂಡಲೇ ಮುಂದಾಗಬೇಕು. ಇಲ್ಲದಿದ್ದರೆ ಮತ್ತೆ ನಾವು ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದರು.

### ರಾಜ್ಯಕ್ಕೂ ಬರಬಹುದು

ಸಾರಿಗೆ ಇಲಾಖೆಯ 4 ನಿಗಮಗಳಿಗೆ ಬಡ್ಡಿ ರಹಿತವಾಗಿ 2 ಸಾವಿರ ಕೋಟಿ ರೂ. ಸಾಲ ನೀಡಲು ಮುಂದಾಗಿದೆ.

ಗೃಹಜ್ಯೋತಿ ಯೋಜನೆಯ ನಷ್ಟವನ್ನು ಸರಿದೂಗಿಸಲು ವಾಣಿಜ್ಯ ಹಾಗೂ ಉತ್ಪಾದಕ ವಲಯದ ಮೇಲೆ ವಿದ್ಯುತ್ ದರ ಹೆಚ್ಚಿಸಿರುವುದರ ಪರಿಣಾಮ ಜನಸಾಮಾನ್ಯರು ಪರೋಕ್ಷವಾಗಿ ಇದರ ಬಿಸಿ ಅನುಭವಿಸುವಂತಾಗಿದೆ ಎಂದು ಅವರು ಹೇಳಿದ್ದಾರೆ. ಗೃಹಲಕ್ಷ್ಮೀ ಯೋಜನೆಗೆ ಹಣ ಹೊಂದಿಸಲಾಗದೆ ಚುನಾವಣಾ ಸಂದರ್ಭದಲ್ಲಿ ಮಾತ್ರ ಉಳಿಸಿಕೊಂಡಿರುವ ಬಾಕಿ ಕಂತುಗಳನ್ನು ಪಾವತಿಸಿ ಯೋಜನೆಯನ್ನು ಮತ ಬ್ಯಾಂಕ್ ಸೃಷ್ಟಿಸಿಕೊಳ್ಳಲು ಮಾತ್ರ ಬಳಸಿಕೊಳ್ಳಲಾಗುತ್ತಿದೆ ಎಂದು ದೂರಿರುವ ಅವರು. ಯುವನಿಧಿ ಯೋಜನೆ ಯುವಜನರ ಪಾಲಿಗೆ ಗಗನಕುಸುಮವಾಗಿಯೇ ಉಳಿದಿದೆ ಎಂದು ಟೀಕಿಸಿದ್ದಾರೆ.ಸಮಾಜದ ಹಾಗೂ ನಾಡನ್ನು ಕಟ್ಟುವ ಮಾನವ ಸಂಪನ್ಮೂಲದ ಪ್ರಮುಖ ಭಾಗವಾಗಿರುವ ರೈತಾಪಿ ವರ್ಗ, ಶ್ರಮಿಕರು, ಯುವಜನರು, ವಿದ್ಯಾರ್ಥಿಗಳು ಹಾಗೂ ಮಹಿಳೆಯರ ಭವಿಷ್ಯಕ್ಕಾಗಿ ಯಾವುದೇ ಯೋಜನೆ ರೂಪಿಸದೇ ರಾಜ್ಯದ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿ ಶೂನ್ಯ ಆಡಳಿತ ನೀಡುವ ಮೂಲಕ ತನ್ನ ಖಜಾನೆ ಬರಿದು ಮಾಡಿಕೊಂಡಿದೆ. ಇದು ನಾಡಿನ ಜನರಿಗೆ ತಿಳಿಯದ ವಿಷಯವೇನಲ್ಲ. ಇದರ ಪರಿಣಾಮವನ್ನು ತೆರಿಗೆದಾರರು ನಿತ್ಯ ಅನುಭವಿಸುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

### 50 ಬೈಕ್‌ಗಳು ಭಸ್ಮ

ಅಗ್ನಿ ಅವಘಡ ಸಂಭವಿಸಿದ ಶೋರೂಂ ಪಕ್ಕದಲ್ಲಿ ಮತ್ತೊಂದು ಶೋರೂಂ ಇದ್ದು, ಅಲ್ಲಿಗೂ ಬೆಂಕಿ ವ್ಯಾಪಿಸಿತ್ತು. ಅಲ್ಲಿನ ಬೈಕ್‌ಗಳನ್ನು ತಕ್ಷಣ ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ. ಅಗ್ನಿಶಾಮಕ ಸಿಬ್ಬಂದಿ ಬಳಿಕ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮಹದೇವಪುರ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.

### ರಾಜ್ಯಪಾಲರಾಗಿ ಪ್ರಮಾಣ

ಮತ್ತೊಂದೆಡೆ ಆರಿಫ್ ಮೊಹಮ್ಮದ್ ಖಾನ್ ಅವರು ಅರ್ಲೇಕರ್ ಅವರ ಜಾಗದಲ್ಲಿ ಬಿಹಾರ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ವಾಣಿಜ್ಯ ಪದವೀಧರರಾಗಿರುವ 70 ವರ್ಷದ ಅರ್ಲೇಕರ್ ಗೋವಾ ಮೂಲದವರು. ಬಿಹಾರದ ರಾಜ್ಯಪಾಲರಾಗಿ ನೇಮಕಗೊಳ್ಳುವ ಮೊದಲು ಅವರು ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿದ್ದರು. ಚಿಕ್ಕ ವಯಸ್ಸಿನಿಂದಲೂ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎ□□□ಸ್) ಮತ್ತು ಭಾರತೀಯ ಜನತಾ ಪಕ್ಷ (ಬಿಜೆಪಿ)ಗಳ ಸದಸ್ಯರಾಗಿ ಕೆಲಸ ಮಾಡಿರುವ ಅರ್ಲೇಕರ್ ಮಾಜಿ ಸಚಿವರೂ ಹೌದು. ಅವರು ಗೋವಾ ವಿಧಾನಸಭೆಯ ಸ್ಪೀಕರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಎರಡು ಬಾರಿ ರಾಜ್ಯ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅರ್ಲೇಕರ್ 2012ರಿಂದ 2015ರವರೆಗೆ ಸ್ಪೀಕರ್ ಆಗಿದ್ದರು ಮತ್ತು 2015ರಿಂದ 2017ರವರೆಗೆ ಗೋವಾದ ಅರಣ್ಯ ಮತ್ತು ಪರಿಸರ ಮತ್ತು ಪಂಚಾಯತ್ ಸಚಿವರಾಗಿದ್ದರು.

ಅರ್ಲೇಕರ್ ಅವರನ್ನು ಜುಲೈ 2021ರಲ್ಲಿ ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿ ಮತ್ತು ಫೆಬ್ರವರಿ 2023ರಲ್ಲಿ ಬಿಹಾರದ ರಾಜ್ಯಪಾಲರಾಗಿ ನೇಮಿಸಲಾಗಿತ್ತು. ಅರ್ಲೇಕರ್ ಅವರು ಅನಘಾ ಅರ್ಲೇಕರ್ ಅವರನ್ನು ವಿವಾಹವಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಇದಕ್ಕೂ ಮುನ್ನ, ನಿರ್ಗಮಿತ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ತಮ್ಮ ಅಧಿಕಾರಾವಧಿ ಕೊನೆಗೊಂಡ ಹಿನ್ನೆಲೆಯಲ್ಲಿ ಕೇರಳದ ಜನರಿಗೆ ಕೃತಜ್ಞತೆ ಸಲ್ಲಿಸಿದರು.

# ಗೋಮಾಳ ಜಮೀನನ್ನು ಮಂಜೂರು ಮಾಡಬಾರದು

**ನಂಗಲಿ:** ಕುರಿಗಾಹಿಗಳಿಗೆ ಮೀಸಲಿಟ್ಟಿರುವ ಗೋಮಾಳ ಜಮೀನನ್ನು ದರಖಾಸ್ತು ಸಮಿತಿ ಮೂಲಕ ಮಂಜೂರು ಮಾಡಬಾರದೆಂದು ತಾಲೂಕು ಆಡಳಿತಕ್ಕೆ ಕುರಿಗಾಹಿ ರಾಮಕೃಷ್ಣಪ್ಪ ಅವರು ಒತ್ತಾಯ ಮಾಡಿದರು.

ಗಡಿಭಾಗದ ಟಿ.ಕುರುಬರಹಳ್ಳಿಯಲ್ಲಿ ಗೋಪೂಜೆ ಮಾಡುವ ಮುಖಾಂತರ ಹೊಸ ವರ್ಷವನ್ನು ಕುರಿಗಾಹಿಗಳ ಜೊತೆ ಆಚರಣೆ ಮಾಡಿ ನಂತರ ಮಾತನಾಡಿದ ಅವರು, ಗಡಿಭಾಗಕ್ಕೆ ಹೊಂದಿಕೊಂಡಿರುವ ಟಿ.ಕುರುಬರಹಳ್ಳಿ ಸರ್ವೇ ನಂಬರ್ 36 ಹಾಗೂ 37ರಲ್ಲಿ 65 ಎಕರೆ ಗೋಮಾಳ ಜಮೀನನ್ನು ಸತತವಾಗಿ 2 ವರ್ಷಗಳ ಕಾಲ ಹೋರಾಟ ಮಾಡಿ 15 ಜನ ಕುರಿಗಾಹಿಗಳು ಈ ಭೂಮಿ ಉಳಿವಿಗಾಗಿ ಜೈಲುವಾಸವನ್ನೂ ಸಹ ಅನುಭವಿಸಿ ಬಂದು ನಮ್ಮ 10 ಸಾವಿರ ಕುರಿಗಳ ರಕ್ಷಣೆಗೆ ರೈತಸಂಘದ ಹೋರಾಟದ ಪ್ರತಿಫಲವಾಗಿ ಅಂದಿನ ತಹಸೀಲ್ದಾರ್ ಪ್ರವೀಣ್ ಅವರು ನಾಮಫಲಕವನ್ನು ಅಳವಡಿಸಿ ನೊಂದ ರೈತರ ಪರ ನ್ಯಾಯ ಒದಗಿಸಿಕೊಟ್ಟಿದ್ದಾರೆಂದು ಧನ್ಯವಾದ ಹೇಳಿದರು.

65 ಎಕರೆ ಗೋಮಾಳವನ್ನು ಕಾಪಾಡಿಕೊಂಡು ಬಂದಿರುವ ಕುರಿಗಾಹಿಗಳಿಗೆ ತಾಲೂಕು ಆಡಳಿತ ಕೂಡಲೇ ಪಹಣಿಯಲ್ಲಿ ಕುರಿಗಾಹಿಗಳಿಗೆ ಮೀಸಲು ಎಂದು ನಮೂದು ಮಾಡಬೇಕು. ಜೊತೆಗೆ ಈಗ ಹೊಸದಾಗಿ ರಚನೆಯಾಗಿರುವ ದರಖಾಸ್ತು ಕಮಿಟಿ ಮೂಲಕ ಯಾವುದೇ ಕಾರಣಕ್ಕೂ ಬಲಾಢ್ಯರಿಗೆ ಅರ್ಜಿ ನಮೂನೆ 57 ರಲ್ಲಿ ಮಂಜೂರು ಮಾಡಬಾರದೆಂದು ಒತ್ತಾಯಿಸಿದರು.



ರೈತಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಮಾತನಾಡಿ, ಹೊಸ ವರ್ಷವನ್ನು ಪ್ರತಿಯೊಬ್ಬರೂ ಆಚರಣೆ ಮಾಡುತ್ತಾರೆ. ಆದರೆ, ಗಡಿಭಾಗದ ಕುರುಬರಹಳ್ಳಿ ರೈತರು ಭೂಮಿ ಉಳಿವಿಗಾಗಿ ಆಚರಣೆ ಮಾಡುತ್ತಿರುವುದು ವಿಶೇಷವಾಗಿದೆ. ಅದರಲ್ಲೂ ನಮ್ಮ ಭೂಮಿ ತಾಯಿ ನಮ್ಮ ಮನೆ ಮಗಳಿದ್ದಂತೆ. ಕುರಿಗಳು ಕುಟುಂಬದ ಸದಸ್ಯರಿದ್ದಂತೆ ನಾವು ಹೊಸ ವರ್ಷವನ್ನು ಮೋಜು ಮಸ್ತಿಗಾಗಿ ಮಾಡದೆ ಕುರಿಗಳ ರಕ್ಷಣೆಗೆ ತಾಲೂಕು ಆಡಳಿತ ಪ್ರತಿ ಹಳ್ಳಿಯಲ್ಲೂ ಕನಿಷ್ಠ 10 ಎಕರೆ ಗೋಮಾಳ ಮಂಜೂರು ಮಾಡುವ ಮೂಲಕ ಜಾನುವಾರುಗಳ ರಕ್ಷಣೆ ಮಾಡಿದರೆ ಸಾವಿರಾರು ಗ್ರಾಮೀಣ ಪ್ರದೇಶದ ಬಡ ಕುಟುಂಬಗಳಿಗೆ ಸ್ವಾಭಿಮಾನದ ಬದುಕು ನೀಡಿದಂತೆಯೇಎಂದು ಸಲಹೆ ನೀಡಿದರು.

65 ಎಕರೆ ಗೋಮಾಳ ಕುರಿಗಾಹಿಗಳಿಗೆ ಮೀಸಲಿಟ್ಟಿರುವುದು ಇತಿಹಾಸ. ಬಲಾಢ್ಯರ ವಿರುದ್ಧ ಕುರಿಗಾಹಿಗಳು, ರೈತಸಂಘ ಮಾಡಿದ ಹೋರಾಟದ ಫಲವಾಗಿ ಇಂದು ಭೂಮಿ ಉಳಿದಿದೆ. ಆ ಭೂಮಿ ಮೇಲೆಊರಿನ ಕೆಲವು ಬಲಾಢ್ಯರು ಕಣ್ಣು ಹಾಕಿ ಕಂದಾಯ ಅಧಿಕಾರಿಗಳನ್ನು ದಿಕ್ಕು ತಪ್ಪಿಸಿಮಂಜೂರು ಮಾಡಿಸಿಕೊಳ್ಳಲು ತೆರೆ ಮರೆಯ ಪ್ರಯತ್ನ ನಡೆಸುತ್ತಿದ್ದಾರೆ. ಅದಕ್ಕೆ ಆ ವ್ಯಾಪ್ತಿಯ ಕಂದಾಯ ಗ್ರಾಮ ಲೆಕ್ಕಿಗರಾದ ಸಂತೋಷ್ ಅವರು ಕುಮ್ಮಕ್ಕು ನೀಡುತ್ತಿರುವುದು ಆ ಗ್ರಾಮಗಳ ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಈ ವಿಚಾರವನ್ನು ತಾಲೂಕು ಆಡಳಿತ ಗಂಭೀರವಾಗಿ ಪರಿಗಣಿಸಿ 65 ಎಕರೆಯಲ್ಲಿ ಯಾವುದೇ ವ್ಯಕ್ತಿಗೂ ಸಹ ಮಂಜೂರು ಮಾಡದಂತೆ ಆದೇಶ ಮಾಡಬೇಕು. ಇಲ್ಲವಾದರೆ ಹೊಸ ವರ್ಷದ ದಿನ ನಾವೂಸಹ ಪ್ರತಿಜ್ಞೆಯನ್ನು ಮಾಡುತ್ತಿದ್ದೇವೆ, ನಮ್ಮ ಕುರಿಗಾಹಿಗಳಿಗೆ ಮೀಸಲಿಟ್ಟಿರುವ ಗೋಮಾಳ ಜಮೀನು ತಂಟೆಗೆ ಬಂದರೆ ರೈತ ಕ್ರಾಂತಿಯಾಗುತ್ತದೆ ಎಂದು ಎಚ್ಚರಿಕೆಯೊಂದಿಗೆ ಸಮಸ್ತ ಬಡ ರೈತ ಕೂಲಿಕಾರ್ಮಿಕರಿಗೆ ಅಧಿಕಾರಿಗಳಿಗೆ ಹೊಸ ವರ್ಷದ ಶುಭಾಶಯಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಗಣೇಶ್, ಪ್ರಭಾಕರ್, ಹೆಬ್ಬಣಿ ಆನಂದರೆಡ್ಡಿ, ರಾಮಕೃಷ್ಣಪ್ಪ, ಶಿವಾರೆಡ್ಡಿ, ಜಿಲ್ಲಾಧ್ಯಕ್ಷ ಈಕಂಬಳ್ಳಿ ಮಂಜುನಾಥ. ಚನ್ನರಾಯಪ್ಪ. ರಡ್ಡೆಪ್ಪ. ನಾರಾಯಣಪ್ಪ.ವೆಂಕಟ ಪತಿ. ರವಿ.ನಾರೆಪ್ಪ. ಧರ್ಮ, ಸುಪ್ರೀಂಚಲ ಮುಂತಾದವರಿದ್ದರು.

# ಆರ್‌ಟಿಒ ಕಚೇರಿಯಲ್ಲಿ ಕಳವು

**ಚಿಕ್ಕಬಳ್ಳಾಪುರ:** ಕಳೆದು ಮೂರು ದಿನಗಳಿಂದ ಸರಕಾರಿ ಕಚೇರಿಗಳಿಗೆ ನಿರಂತರ ರಜೆ ನೀಡಲಾಗಿತ್ತು ಎಂದು ಆ ಅವಕಾಶವನ್ನೆ ಬಳಸಿಕೊಂಡ ಖತರ್ನಾಕ್ ಕಳ್ಳರು ಆರ್ ಟಿ ಒ ಕಚೇರಿಗೆ ನುಗ್ಗಿ ಕಂಪ್ಯೂಟರ್ ಗಳ ಕಳ್ಳತನ ಮಾಡಿದ್ದಾರೆ. ರಾತ್ರಿ ವೇಳೆ ಸೆಕ್ಯೂರಿಟಿ ವಾಚ್ ಮ್ಯಾನ್ ಗಳಿದ್ದರೂ ಕಳ್ಳತನ ನಡೆದಿರುವ ಬಗ್ಗೆ ಹಲವಾರು ಅನುಮಾಗಳಿಗೆ ಎಡೆ ಮಾಡಿಕೊಟ್ಟಿದೆ ಕಳೆದು ಹೋಗಿರುವ ಕಂಪ್ಯೂಟರ್ ಮತ್ತು ಸಿಪಿಯುಗಳಲ್ಲಿ ಕಚೇರಿಗೆ ಸಂಬಂದಿಸಿದ ಡಾಟಾ ಲೀಕ್ ಆಗಿರುವ ಚಾನ್ಸಸ್ ಇದ್ದು ಅದರಲ್ಲಿದ್ದ ಗೌಪ್ಯ ಮಾಹಿತಿ ಏನಿತ್ತು ಅನ್ನುವುದರ ಬಗ್ಗೆ ಆರ್ ಟಿ ಒ ಸ್ಪಷ್ಟಪಡಿಸಬೇಕಿದೆ.

ಕಳೆದ ಮೂರು ದಿನಗಳಿಂದ ನಿರಂತರವಾಗಿ ಸರ್ಕಾರಿ ರಜೆ ಇದ್ದ ಕಾರಣ ಕಚೇರಿಗಳ ಕಡೆ ಯಾರು ಬರೋದಿಲ್ಲ ಅನ್ನೋ ದೃಡವಾದ ನಂಬಿಕೆ ಮೇಲೆ ಕಳ್ಳರು ಕೈ ಚಳಕ ತೋರಿಸಿದ್ದಾರೆ. ಚಿಕ್ಕಬಳ್ಳಾಪುರ ಆರ್‌ಟಿಒ ಕಚೇರಿಯಲ್ಲಿ ನಿನ್ನೆ ರಾತ್ರಿ ಕಳ್ಳತನ ನಡೆದಿದ್ದು ಕದ್ದ ಕಳ್ಳರು ಕಚೇರಿಯಲ್ಲಿದ್ದ ಮೂರು ಸಿಪಿಯು ಮತ್ತು ಒಂದು ಮಾನಿಟರ್ ಕೊಂಡೋಯ್ದಿದ್ದಾರೆ. ಕಳುವಾಗಿರುವ ಮಾಲಿನ ಬೆಲೆ ಎಂಬತ್ತು ಸಾವಿರ ಇರಬಹುದೆಂದು ಅಂದಾಜಿಸಲಾಗಿದೆ.

ಕಚೇರಿಗೆ ರಾತ್ರಿ ಪಾಳಯ ಸೆಕ್ಯೂರಿಟಿ ಹೋಂಗಾರ್ಡ ಜಗದೀಶ್‌ನ್ನ ಕೇಳಿದರೆ ಕಳ್ಳತನವಾಗಿರುವ ಮಾಹಿತಿಯೆ ನನಗೆ ಗೊತ್ತಿಲ್ಲ ಇವತ್ತು ಒಂಬತ್ತು ಗಂಟೆ ವೇಳೆ ಕಚೇರಿ ಸಿಬ್ಬಂದಿ ಗಿರೀಶ್ ಎನ್ನುವವರು ದೂರವಾಣಿ ಕರೆ ಮಾಡಿದಾಗ ಮಾತ್ರ ಕಳ್ಳತನವಾಗಿರುವ ಮಾಹಿತಿ ನೀಡಿದ್ದಾರೆ. ನಾನು ಡ್ಯೂಟಿಯಲ್ಲಿ ರಾತ್ರಿ ಕಚೇರಿ ಸುತ್ತ ನೋಡಿ ನಂತರ ಮಾಮೂಲಿಯಂತೆ ಮಲಗಿ ಬಿಟ್ಟಿದ್ದೆ ಎಂದಿದ್ದಾರೆ.

ಇನ್ನು ಆರ್‌ಟಿಒ ಸಹ ಕಳ್ಳತನ ನಡೆದಿರುವ ಮಾಹಿತಿ ಬಗ್ಗೆ ತಿಳಿಸಿದ್ದು ಇಗಾಗಲೆ ಪೊಲೀಸರಿಗೆ ದೂರು ನೀಡಲಾಗಿದೆ ನಾವು ವಾಚ್ ಮ್ಯಾನ್ ಗಳ ವಿಚಾರಣೆ ಮಾಡಿಲ್ಲ ಪೊಲೀಸರೆ ಅವರನ್ನ ವಿಚಾರಣೆ ಮಾಡುತ್ತಾರೆ ಕಂಪ್ಯೂಟರ್ ನಲ್ಲಿ ಕಚೇರಿ ಮಹತ್ವದ ಡಾಟಾ ಏನಿರಲ್ಲ ಎಲ್ಲವೂ ಆನ್ ಲೈನ್ ನಲ್ಲೆ ಎಂಟ್ರಿಯಾಗೋದು ಹೆಚ್ಚಿನ ಮಾಹಿತಿಯನ್ನ ಹೇಳೊಕ್ಕಾಗಲ್ಲ ಎಲ್ಲವನ್ನೂ ಪೊಲೀಸರೆ ತನಿಖೆ ನಡೆಸುತ್ತಾರೆ ಎಂದರು.

ಕಚೇರಿಯಲ್ಲಿ ಕಂಪ್ಯೂಟರ್ ಹೊರತು ಪಡಿಸಿ ಬೇರೆ ಬೇರೆ ಬೆಲೆ ಬಾಳುವ ವಸ್ತುಗಳು ಇದ್ದವು ಆದ್ರೆ ಕಳ್ಳರು ಕೇವಲ ಕಂಪ್ಯೂಟರ್ ಸಿಪಿಯುಗಳನ್ನ ಮಾತ್ರ ಕದ್ದುಕೊಂಡು ಹೋಗಿರುವ ಉದ್ದೇಶವೇನು ಕಚೇರಿಗೆ ನಂಟಿರುವ ಯಾರಾದ್ರೂ ಈ ಕೆಲಸಮಾಡಿದ್ದಾರಾ ಅಥವಾ ಮಾಡಿಸಿದ್ದಾರಾ ಎನ್ನುವ ಹಲವು ಊಹಾ ಪೋಹಗಳಿಗೆ ದಾರಿ ಮಾಡಿಕೊಟ್ಟಿದೆ.




# ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಜಿಲ್ಲೆ ಮಾದರಿಯಾಗಿ ರೂಪುಗೊಳ್ಳಬೇಕು



**ಶಿಡ್ಲಘಟ್ಟ:** ವಿದ್ಯೆ ಎಂಬುದು ಯಾರ ಸ್ವತ್ತು ಅಲ್ಲ ಹಾಗೂ ಕದಿಯಲಾಗದ ವಸ್ತು ಆದ್ದರಿಂದ ವಿದ್ಯಾರ್ಥಿಗಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಜಿಲ್ಲೆಯಲ್ಲಿ ಮಾದರಿಯಾಗಿ ರೂಪುಗೊಳ್ಳಬೇಕು ಎಂದು ರಾಷ್ಟ್ರೀಯ ಕ್ರೀಡಾಪಟು ಜಯಂತಿಗ್ರಾಮ ನಾರಾಯಣಸ್ವಾಮಿ ತಿಳಿಸಿದರು.

ತಾಲ್ಲೂಕಿನ ದ್ಯಾವಪ್ಪನಗುಡಿ ಬಳಿಯ ಜಯಂತಿಗ್ರಾಮ ಸರ್ಕಾರಿ ಫ್ರೌಡ ಶಾಲೆಯಲ್ಲಿ ಹೊಸವರ್ಷದ ಮೊದಲ ದಿನದಂದು ವಿದ್ಯಾರ್ಥಿಗಳಿಗೆ ಮಾನವೀಕ ಮೌಲ್ಯಗಳು ಮತ್ತು ನೈತಿಕ ಶಿಕ್ಷಣದ ಕುರಿತು ಕಾರ್ಯಕ್ರಮದಲ್ಲಿ ಬಾಗವಹಿಸಿ ಇದೇ ವೇಳೆ 25 ಸಾವಿರ ರೂ.ಗಳ ಮೌಲ್ಯದ ಬ್ಯಾಂಡ್ ಸೆಟ್ ಕಿಟ್ ಕೊಡುಗೆಯಾಗಿ ವಿತರಿಸಿ ನಂತರ ಅವರು ಮಾತನಾಡಿದರು.

ಇತ್ತೀಚೆಗೆ ಶಾಲಾ ಕಾರ್ಯಕ್ರಮ ಒಂದರಲ್ಲಿ ದೈಹಿಕ ಶಿಕ್ಷಕಿ ಮಂಜುಳಾರವರು ಶಾಲೆಗೆ ಬ್ಯಾಂಡ್ ಸೆಟ್ ಕೊಡಿಸಬೇಕೆಂದು ನನ್ನಲ್ಲಿ ಮನವಿ ಮಾಡಿದ್ದರು, ಅದರಂತೆ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಗಳಿಗೆ ಪೂರಕವಾಗಲಿ ಎಂಬ ಆಶಯದಿಂದ ಬ್ಯಾಂಡ್ ಸೆಟ್ ವಿತರಿಸಿದ್ದೇನೆ ಎಂದು ಹೇಳಿದರು.

ಸರ್ಕಾರವು ಕಳೆದ ಮೂರು ವರ್ಷಗಳಿಂದ ತಾತ್ಕಾಲಿಕವಾಗಿ ತಡೆ ಹಿಡಿದಿರುವ ಶಾಲಾ ಮಕ್ಕಳಿಗೆ ಉಚಿತ ಸೈಕಲ್ ವಿತರಣೆಯನ್ನು ಪುನರಾರಂಭಿಸಬೇಕು ಎಂದು ಕೋರಿದರು.

ಶಾಲೆಗೆ ಪಕ್ಕದ ಹಳ್ಳಿಗಳಾದ ಗೊರಮಿಲ್ಲಹಳ್ಳಿ, ಕೋಟಹಳ್ಳಿ, ಬೈರಗಾನಹಳ್ಳಿ, ಮಲ್ಲಹಳ್ಳಿ, ಅಬ್ಲೂಡು,ಹನುಮಂತಪುರ ಹಾಗು ಚಿಕ್ಕಬಳ್ಳಾಪುರ ತಾಲ್ಲೂಕಿನ ಬದನಗಾನಹಳ್ಳಿ ಇನ್ನಿತರ ಗ್ರಾಮಗಳಿಂದ ವಿದ್ಯಾರ್ಥಿಗಳು ಬರುತ್ತಾರೆ,ಮಕ್ಕಳಿಗೆ ದಿನ ನಿತ್ಯ ಬಸ್ ಚಾರ್ಜ್ ಗಾಗಿ ಹಣ ಕೊಡುವುದು ಕೆಲ ಪೋಷಕರಿಗೆ ಆರ್ಥಿಕವಾಗಿ ಕಷ್ಟವಾಗಬಹುದು ಹಾಗು 6 ಕೀ.ಮೀ. ದೂರದ ಬದನಗಾನಹಳ್ಳಿಗೆ ಯಾವುದೇ ಬಸ್ ವ್ಯವಸ್ಥೆ ಕೂಡಾ ಇಲ್ಲದಿರುವುದು, ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಕಷ್ಟ ಸಾದ್ಯವಾಗಿದ್ದು ಸಂಬಂಧಿಸಿದ ಅಧಿಕಾರಿಗಳು ಹಾಗು ಜನಪ್ರಧಿನಿದಿಗಳು ಈ ಬಗ್ಗೆ ಗಮನ ಹರಿಸಿ ಸಮಸ್ಯೆಯನ್ನು ಪರಿಹರಿಸಬೇಕೆಂದು ಮನವಿ ಮಾಡಿದರು.

ಮುಖ್ಯ ಶಿಕ್ಷಕರಾದ ಸುರೇಶ್ ವಿದ್ಯಾರ್ಥಿಗಳಿಗೆ ಟ್ರ್ಯಾಕ್ ಸೂಟ್ ವಿತರಿಸಿ ಮಾತನಾಡಿ ತಾಲ್ಲೂಕಿನ ಇತರೆ ಶಾಲೆಗಳಿಗಿಂತ ನಮ್ಮ ಶಾಲೆಯ ವಿದ್ಯಾರ್ಥಿಗಳು ಎಲ್ಲಾ ರಂಗದಲ್ಲೂ ಮುಂದಿದ್ದು, ಶಾಲೆಯ ಬೆಳವಣಿಗೆಗೆ ಪೂರಕವಾದ ವಾತವರಣ ಹಾಗೂ ವಿದ್ಯಾರ್ಥಿಗಳ ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಪೂರಕವಾದ ವಾತವರಣ ನಿರ್ಮಿಸುವಲ್ಲಿ ಇಂಥಹ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಅಗತ್ಯವಿದೆ, ನಾರಾಯಣಸ್ವಾಮಿಯ ಹಾಗೆ ಮತ್ತಷ್ಟು ಜನ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸಹ ಶಿಕ್ಷಕ ರವಿಚಂದ್ರ ಮೌಳಿ, ದೈಹಿಕ ಶಿಕ್ಷಕಿ ಸಿಕೆ.ಮಂಜುಳಾ, ಶಿಕ್ಷಕಿಯರಾದ ವೇಣು, ಶೈಲಾ, ಗಾಯಿತ್ರಿ, ಯಶೋಧ ಮತ್ತಿತರರು ಭಾಗವಹಿಸಿದ್ದರು.

# ಎರಡು ಎಕರೆಯಲ್ಲಿ ಬೆಳೆದಿದ್ದ ಬದನೆಕಾಯಿ ಗಿಡ ನಾಶ

**ಶಿಡ್ಲಘಟ್ಟ:** ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಕೆ.ಜಿ.ಚಿಕ್ಕಬಲ್ಲ ಗ್ರಾಮದ ಟಿ.ಎಂ.ರಾಮಕೃಷ್ಣ ಎಂಬುವವರಿಗೆ ಸೇರಿದ ಎರಡು ಎಕರೆ ತೋಟದಲ್ಲಿ ಬೆಳೆದಿದ್ದ ಸುಮಾರು 300 ಚಪ್ಪರ ಬದನೆಕಾಯಿ ಗಿಡಗಳನ್ನು ದುಷ್ಕರ್ಮಿಗಳು ಕತ್ತರಿಸಿ ಹಾಕಿರುವ ಘಟನೆ ನಡೆದಿದೆ. ತೋಟದ ಮಾಲೀಕ ಎಂ.ರಾಮಕೃಷ್ಣ ಮಾತನಾಡಿ, ಕಳೆದ ಶನಿವಾರ ಮಧ್ಯರಾತ್ರಿ ತೋಟಕ್ಕೆ ನುಗ್ಗಿದ ದುಷ್ಕರ್ಮಿಗಳು ಕಾಯಿ ಬಿಡುವ ಹಂತದಲ್ಲಿದ್ದ ಸುಮಾರು 300 ಕ್ಕೂ ಹೆಚ್ಚು ಗಿಡಗಳನ್ನು ಕತ್ತರಿಸಿ ಹಾಕಿ ಹೋಗಿದ್ದಾರೆ.

ಇದರಿಂದ ನಮಗೆ ಸುಮಾರು 4 ರಿಂದ 5 ಲಕ್ಷ ರೂ.ಗಳು ನಷ್ಟ ಉಂಟಾಗಿದೆ,ಬೆಳೆ ನಾಶವಾಗಿರುವ ಸಂಬಂಧವಾಗಿ ಪೊಲೀಸರಿಗೆ ದೂರು ನೀಡಿದ್ದು, ರಕ್ಷಣೆ ಸೇರಿದಂತೆ ದುಷ್ಕರ್ಮಿಗಳನ್ನು ಪತ್ತೆಹಚ್ಚಿ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿರುವುದಾಗಿ ಅವರು ತಿಳಿಸಿದ್ದಾರೆ.

# ಕೆರೆಗೆ ಬಿದ್ದ ಕಾರು: ಇಬ್ಬರ ಸಾವು

ಚಾಮರಾಜನಗರ: ಮೈಸೂರಿನಿಂದ ಕಾರಿನಲ್ಲಿ ಪವಾಡ ಪುರುಷ ಮಲೆ ಮಹದೇಶ್ವರ ದರ್ಶನಕ್ಕೆ ತೆರಳುತ್ತಿದ್ದ ಸ್ನೇಹಿತರು ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ಬಿದ್ದ ಪರಿಣಾಮ ಇಬ್ಬರು ಸಾವನ್ನಪ್ಪಿದ ದುರ್ಘಟನೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಕೆರೆಯಲ್ಲಿ ಬುಧವಾರ ರಾತ್ರಿ ನಡೆದಿದೆ.

ಮೈಸೂರಿನಿಂದ ಕಾರಿನಲ್ಲಿ ಹೊಸ ವರ್ಷದ ದಿನದಂದು ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರನ ದರ್ಶನಕ್ಕೆ ತೆರಳುವಾಗ ಕೊಳ್ಳೇಗಾಲ ತಾಲ್ಲೂಕಿನ ಕುಂತೂರು ಬಳಿಚಾಲಕನ ನಿಯಂತ್ರಣ ತಪ್ಪಿದ ಪರಿಣಾಮ ಕಾರು ಕೆರೆಗೆ ನುಗ್ಗಿದೆ ಕೆರೆಯಲ್ಲಿ ನೀರಿದ್ದು, ನೀರಿನಲ್ಲಿ ಮುಳುಗಿ ಶುಭ ಮತ್ತು ಊರ್ಜಿತ್ ಸಾವನ್ನಪ್ಪಿದ್ದಾರೆ.

ಮತ್ತೊಬ್ಬ ಮನಿತ್ ನನ್ನು ಸ್ಥಳೀಯರು ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ. ಮೂವರು ಸ್ನೇಹಿತರು ಮೈಸೂರಿನಲ್ಲಿ ಟೆಲಿ ಕಾಲರ್ ಆಗಿ ಕೆಲಸ ಮಾಡುತ್ತಿದ್ದರು. ಚಾಮರಾಜನಗರ ಜಿಲ್ಲೆಯ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಿವಯ್ಯ ರಾಚಯ್ಯ ಚಿಕ್ಕಮಠ ನಿಧನ

**ಧಾರವಾಡ:** ತಾಲೂಕಿನ ಬಾಡ ಗ್ರಾಮದ ಶಿಕ್ಷಣ ಪ್ರೇಮಿ ಹಾಗೂ ಸಮಾಜ ಸೇವಕ ಶಿವಯ್ಯ ರಾಚಯ್ಯ ಚಿಕ್ಕಮಠ (60) ಇವರು ದಿನಾಂಕ: 26-12-2024 ರಂದು ಗುರುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರೂ ಪುತ್ರರು, ಇಬ್ಬರೂ ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಮಕ್ಕಳ ಸಂತೆಯಿಂದ ವ್ಯಾಪಾರ ಹಾಗೂ ಜೀವನದ ಅನುಭವದ ಅರಿವು

**ಶಿಡ್ಲಘಟ್ಟ:** ಮಕ್ಕಳಿಗೆ ವ್ಯಾಪಾರ ಹಾಗೂ ಜೀವನದ ಅನುಭವ ತಿಳಿಸಿಕೊಡುವ ಉದ್ದೇಶದಿಂದ ಮಕ್ಕಳ ಸಂತೆ ಆಯೋಜಿಸಲಾಗಿದೆ. ಹಿರಿಯರು ಅಗತ್ಯ ವಸ್ತುಗಳನ್ನು ಹೇಗೆ ತರುತ್ತಾರೆ, ಅವರ ಶ್ರಮ, ದುಡಿಮೆ ಮಕ್ಕಳಿಗೆ ಅರಿವಾಗಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದು ಮುಖ್ಯಶಿಕ್ಷಕ ಎಂ.ಸೀನಪ್ಪ ತಿಳಿಸಿದರು.

ತಾಲ್ಲೂಕಿನ ವೀರಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಸಂತೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಪಠ್ಯದ ಓದಿನ ಜತೆಯಲ್ಲಿ ಮಕ್ಕಳಿಗೆ ವ್ಯಾವಾಹಾರಿಕ ಜ್ಞಾನ ಬೆಳೆಸಲು ಮಕ್ಕಳ ಸಂತೆ ಪೂರಕ ವಾತಾವರಣ ಕಲ್ಪಿಸಲಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಭೂಮಿ ಕೇಶವ ಮಾತನಾಡಿ, ಮಕ್ಕಳಿಗೆ ವ್ಯವಹಾರದ ಜ್ಞಾನವಿದ್ದರೆ, ಪಾಲಕರು ಮಕ್ಕಳನ್ನು ಅಂಗಡಿಗೆ ಕಳುಹಿಸಿದರೆ ವ್ಯಾಪಾರ ಮಾಡಿ ಅಗತ್ಯ ವಸ್ತುಗಳನ್ನು ತರುವ ಶಕ್ತಿ ಬೆಳೆಸಿಕೊಳ್ಳುತ್ತಾರೆ. ಮಕ್ಕಳಲ್ಲಿ ಪ್ರಾಯೋಗಿಕವಾಗಿ ವ್ಯವಹಾರ ಜ್ಞಾನ ಬೆಳೆಸಲು ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು ಉತ್ತಮವಾಗಿದೆ ಎಂದರು.

ಈ ವೇಳೆ ಮಕ್ಕಳ ಸಂತೆಯಲ್ಲಿ ವಿವಿಧ ಬಗೆಯ ಸೊಪ್ಪು, ತರಕಾರಿ, ತೆಂಗಿನಕಾಯಿ, ತಿಂಡಿ, ತಿನಿಸುಗಳು ಸೇರಿ ಹಲವು ವಸ್ತುಗಳನ್ನು ಮಾರಾಟ ಮಾಡಲಾಯಿತು.

ಪರಸ್ಪರ ಸ್ಪರ್ಧಾ ಮನೋಭಾವದಿಂದ ಹೆಚ್ಚು ವ್ಯಾಪಾರ ಮಾಡಬೇಕೆಂದು ಛಲದಿಂದ ಮಕ್ಕಳು ಪಾಲಕರನ್ನು ಕರೆದು ಸಾಮಗ್ರಿ ಖರೀದಿಸುವಂತೆ ಒತ್ತಾಯಿಸುತ್ತಿದ್ದುದು ಸಹಜವಾಗಿ ಕಂಡುಬಂದಿತು. ಈ ಸಂದರ್ಭದಲ್ಲಿ ಶಿಕ್ಷಕರಾದ ಜಯಶ್ರೀದೇವಿ, ರಮಾದೇವಿ, ನಿರ್ಮಲಾ ಮುಂತಾದವರು ಹಾಜರಿದ್ದರು.



# ಸಂವಿಧಾನ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ





**ಮಾಲೂರು:** ಬಾಬಾ ಸಾಹೇಬ್ ಡಾ ಬಿ ಆರ್ ಅಂಬೇಡ್ಕರ್ ರವರು ಅದ್ಬುತವಾದ ಸಂವಿಧಾನ ರಚನೆ ಮಾಡಿ ಇತಿಹಾಸ ಸೃಷ್ಟಿಸಿ ಎಲ್ಲಾ ಸಮುದಾಯಗಳಿಗೆ ಹಕ್ಕುಗಳನ್ನು ದೊರಕಿಸಿಕೊಟ್ಟಿದ್ದಾರೆ ಈ ಸಂವಿಧಾನವನ್ನು ಕಾಪಾಡುವುದು ಮತ್ತು ಉಳಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ದಮನಿತರ ಸಂರಕ್ಷಣಾ ಸಮಿತಿ ಸಂಸ್ಥಾಪಕ ರಾಜ್ಯಾಧ್ಯಕ್ಷ ಪ್ರೇಂಡ್ಸ್ ಸಂತೋಷ್ ಹೇಳಿದರು.

ಜನವರಿ 1 ರಂದು ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ಉದ್ಯಾನವದಲ್ಲಿ 207 ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಕಾರ್ಯಕ್ರಮವನ್ನು ದಮನಿತರ ಸಂರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷ ಪ್ರೇಂಡ್ಸ್ ಸಂತೋಷ್ ನೇತೃತ್ವದಲ್ಲಿ ಸಂವಿಧಾನ ಶಿಲ್ಪಿ ಡಾ.ಆರ್.ಬಿ.ಆರ್ ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಭೀಮಾ ಕೋರೆಗಾವ್ ವಿಜಯೋತ್ಸವ ಇತಿಹಾಸ ಪುಟಗಳಲ್ಲಿ ದಾಖಲೆ ಸೃಷ್ಟಿಸಿದ ನೈಜ ಘಟನೆ ಈ ಇತಿಹಾಸವನ್ನು ಉಳಿಸಿಕೊಂಡು ಆಚರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ವಾಗಿದೆ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಅದ್ಬುತವಾದ ಸಂವಿಧಾನ ರಚನೆ ಮಾಡಿ ಇತಿಹಾಸ ಸೃಷ್ಟಿಸಿ ಎಲ್ಲರಿಗೂ ಹಕ್ಕುಗಳನ್ನು ದೊರಕಿಸಿಕೊಟ್ಟಿದ್ದಾರೆ. ಈ ಸಂವಿಧಾನವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಲ್ಲೋ ಒಂದು ಕಡೆ ಸಂವಿಧಾನ ತಿರುಚುವುದು ಮತ್ತು ವಿರುದ್ಧವಾಗಿ ನಡೆಯುತ್ತಿರುವುದು ನೋವು ಮತ್ತು ಭಯದ ವಾತಾವರಣದಲ್ಲಿ ನಾವುಗಳು ಇದ್ದೇವೆ, ಭಾರತ ದೇಶಕ್ಕೆ ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲ ಸಮುದಾಯದ ಶ್ರಮದಿಂದ ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಅದರಂತೆ ಸಂವಿಧಾನದಲ್ಲೂ ಸಹ ಎಲ್ಲ ಸಮುದಾಯಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಕದಸಂಸ ತಾಲ್ಲೂಕು ಸಂಚಾಲಕ ಎಸ್. ಎಂ. ವೆಂಕಟೇಶ್ ಮಾತನಾಡಿ, ಭಾರತ ದೇಶವು ಜಾತಿ ವ್ಯವಸ್ಥೆಯಿಂದ ಕೂಡಿರುವ ದೇಶವಾಗಿದೆ. ಜಾತಿಯ ಕಾರಣಕ್ಕಾಗಿ ವ್ಯಕ್ತಿಯನ್ನು ಕೆಟ್ಟದಾಗಿ ಕಾಣುವ ಪರಿಸ್ಥಿತಿ ಇದೆ. ಈ ನಾಡಿನ ಶೋಷಿತರಿಗೆ ಒಂದು ಬದುಕನ್ನು ಕಟ್ಟಿಕೊಟ್ಟವರು ಅಂಬೇಡ್ಕರ್ ಅವರು, ಅಂಬೇಡ್ಕರ್ ಅವರನ್ನು ನಾವು ಸ್ಮರಣೆ ಮಾಡಿಕೊಳ್ಳಬೇಕು. ಜ.1, 1818 ರಲ್ಲಿ ಮೊಟ್ಟ ಮೊದಲ ಬಾರಿಗೆ ಸ್ವಾಭಿಮಾನಕ್ಕಾಗಿ ಭೀಮಾ ಕೋರೆಗಾಂವ್ ಯುದ್ಧವು ನಡೆದಿದೆ. ಐನೂರು ಜನ ಮಹರ್ ಸೈನಿಕರು, 25,000 ಸಾವಿರ ಪೇಶ್ವೆಗಳ ವಿರುದ್ಧ ಯುದ್ಧ ಮಾಡಿ ಜಯಗಳಿಸಿದರು. ಇದನ್ನು ನಾವು ವಿಜಯೋತ್ಸವವಾಗಿ ದೇಶಾದ್ಯಂತ ಸಡಗರ ಸಂಭ್ರಮದಿಂದ ಆಚರಣೆ ಮಾಡುತ್ತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಕದಸಂಸ ಪ್ರೋ.ಕೃಷ್ಣಪ್ಪ ಬಣದ ಜಿಲ್ಲಾ ಸಂಘಟನಾ ಸಂಚಾಲಕ ಚವ್ವೇನಹಳ್ಳಿ ವಿಜಿ, ಸಂಪಂಗೆರೆ ಅಶೋಕ್, ಸೊಣ್ಣೂರು ಮುನಿರಾಜು, ಸೊಣ್ಣೂರು ಗೋವಿಂದ್ , ಲಕ್ಕೂರು ಸುರೇಶ ಬಾಬು, ಜಯಮಂಗಲ ನಾರಾಯಣಸ್ವಾಮಿ, ಮಾಸ್ತಿ ವೆಂಕಟೇಶಪ್ಪ , ಹಾರೋಹಳ್ಳಿ ರಾಜು,ಅಹನ್ಯ ಶಂಕರ್, ಗಾಂಧಿವೃತ್ತ ಬಾಬು, ಪುರ ಅಂಬರೀಶ್ , ಯಶವಂತಪುರ ಮುನಿರಾಜು, ತಿರುಮಲೇಶ್, ಭಾಗ್ಯಮ್ಮ, ಸೋಮಶೇಖರ್, ಇರ್ಷಾದ್ ಪಾಷ, ಚಂದ್ರಪ್ಪ, ಕಾಂತರಾಜ್ ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

# ನಕಲಿ ವೈದ್ಯರ ಹಾವಳಿ: ಅಧಿಕಾರಿಗಳ ಕುರುಡ ವರ್ತನೆ

**ಮಾಲೂರು:** ಡಿ ಗ್ರೂಪ್ ನೌಕರ ಪಶು ವೈದ್ಯ ಎಂದು ಅವಧಿ ಮುಗಿದಿರುವ ಔಷಧಿಗಳನ್ನು ಜಾನುವಾರುಗಳಿಗೆ ಚಿಕಿತ್ಸೆ ನೀಡುವಾಗ ಸಿಕ್ಕಿ ಬಿದ್ದಿದ್ದು. ನಕಲಿ ಪಶು ವೈದ್ಯರ ಹಾವಳಿ ಹೆಚ್ಚಾಗಿ ಹೈನುಗಾರಿಕೆಗೆ ಮಾರಕವಾಗಿದ್ದರೂ ಪಶು ಇಲಾಖೆ ಅಧಿಕಾರಿಗಳು ಮಾತ್ರ ಕಣ್ಣಿದ್ದು ಕುರುಡರಂತೆ ವರ್ತಿಸುತ್ತಿದ್ದಾರೆ ಎಂದು ಸ್ಥಳೀಯ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ,

ತಾಲ್ಲೂಕಿನ ರಾಜೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗೊಲ್ಲಹಳ್ಳಿ ಗ್ರಾಮದಲ್ಲಿ ಜಾನುವಾರುಗಳಿಗೆ ಚಿಕಿತ್ಸೆ ನೀಡಲು ತೆರಳಿದ್ದ ನಕಲಿ ಪಶು ವೈದ್ಯನನ್ನ ರೈತರು ಹಿಡಿದು ಔಷಧಿಗಳನ್ನು ಪರಿಶೀಲಿಸಿದಾಗ ನಕಲಿ ವೈದ್ಯ ಪರಾರಿಯಾಗಿರುವ ಘಟನೆ ನಡೆದಿದೆ,

ಮಾಲೂರು ತಾಲ್ಲೂಕಿನ ಹುಳಿದೇನಹನಲ್ಲಿ ಗ್ರಾಮದ ಪಶು ಆಸ್ಪತ್ರೆಯಲ್ಲಿ ಡಿ ಗ್ರೂಪ್ ನೌಕರನೊಬ್ಬ ನಿವೃತ್ತಿ ಹೊಂದು ಐದು ತಿಂಗಳಾಗಿದ್ದು ಪಶು ಆಸ್ಪತ್ರೆಯಿಂದ ಅವಧಿ ಮುಗಿದ ಔಷಧಿಗಳನ್ನು ತಂದು ಜಾನುವಾರುಗಳಿಗೆ ಚಿಕಿತ್ಸೆ ನೀಡುತ್ತಿದ್ದಾನೆ ಎಂಬ ದೂರುಗಳು ಕೇಳಿ ಬರುತ್ತಿದ್ದು ನಕಲಿ ವೈದ್ಯನನ್ನ ಗ್ರಾಮಸ್ಥರು ಹಿಡಿದಿರುವ ಘಟನೆ ನಡೆದಿದೆ,

ತಾಲ್ಲೂಕಿನಲ್ಲಿ ಸಕಾಲಕ್ಕೆ ಚಿಕಿತ್ಸೆ ನೀಡಲು ಪಶು ವೈದ್ಯರ ಕೊರತೆಯ ಜತೆಗೆ ಡಿ ಗ್ರೂಪ್ ನೌಕರರೇ ಜಾನುವಾರುಗಳಿಗೆ ಚಿಕಿತ್ಸೆ ನೀಡಿ ಜಾನುವಾರುಗಳ ಜೀವಕ್ಕೆ ಮಾರಕವಾಗುತ್ತಿದ್ದು, ಅವಧಿ ಮುಗಿದಿರುವ ಔಷಧಿಗಳನ್ನು ಪಶುಗಳಿಗೆ ಚಿಕಿತ್ಸೆ ನೀಡಿ ನಕಲಿ ಪಶು ವೆದ್ಯರ ಹಾವಳಿಯಿಂದ ಹೈನುಗಾರರನ್ನು ಇನ್ನಷ್ಟು ಸಂಕಷ್ಟಕ್ಕೆ ನೂಕುತ್ತಿದ್ದಾರೆ. ಪಶು ಇಲಾಖೆ ಡಾ.ವೀಣಾ ಮಾತ್ರ ನನ್ನಗೂ ನಕಲಿ ಪಸು ವೈದ್ಯರಿಗೆ ಸಂಬಂಧವಿಲ್ಲ ಎಂಬಂತೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ,


ಡಿ ಗ್ರೂಪ್ ನೌಕರ ನಕಲಿ ವೈದ್ಯರು ಹೈನುಗಾರರನ್ನು ಮೋಸ ಮಾಡುತ್ತಿರುವ ಬಗ್ಗೆ ಪಶುಸಂಗೋಪನಾ ಇಲಾಖೆಯ ಅಧಿಕಾರಿಗೆ ಗೊತ್ತಿದ್ದರೂ ಕಣ್ಣಿದ್ದು ಕುರುಡರಂತೆ ವರ್ತಿಸಿ ನಕಲಿ ವೈದ್ಯರ ಮೇಲೆ ಯಾವುದೇ ಕ್ರಮ ಕೈಗೊಳ್ಳವಲ್ಲಿ ವಿಫಲರಾಗಿದ್ದಾರೆ.

ಪಶು ವೈದ್ಯರು ಹೈನುಗಾರರಿಂದ ವಿಪರೀತ ಹಣ ವಸೂಲಿ ಮಾಡಲಾಗುತ್ತಿದೆ. ಇದು ಹೈನುಗಾರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದ್ದು, ಸಂಭದ ಪಟ್ಟ ಮೇಲಾಧಿಕಾರಿಗಳು ಸಚಿವರು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಜಾನುವಾರುಗಳ ಸಾಕಾಣಿಕೆದಾರರ ಒಕ್ಕೂಟ ತಾಲ್ಲೂಕು ಅಧ್ಯಕ್ಷ ನೀಲಕಂಠ ಅಗ್ರಹಾರ ಶಾಮಣ್ಣ ಒತ್ತಾಯಿಸಿದ್ದಾರೆ.





# ಜ.3–5ರವರೆಗೆ ಅಪರಮಿತ ಅವಕಾಶ ಸೃಷ್ಟಿಸುವ ಉದ್ಯಮಿ ಒಕ್ಕಲಿಗ ಎಫ್‌ಸಿ ಎಕ್ಸ್‌ಪೋ



**ಬೆಂಗಳೂರು:** ಫಸ್ಟ್ ಸರ್ಕಲ್ (ಎಫ್‌ಸಿ) ಉದ್ಯಮಿ ಒಕ್ಕಲಿಗ–ಎಫ್‌ಸಿ ಎಕ್ಸ್‌ಪೋ 2025 ಅನ್ನು ಬೆಂಗಳೂರು ನಗರದಲ್ಲಿ ಆಯೋಜಿಸುತ್ತಿದ್ದು, ಮೂರು ದಿನಗಳ ಕಾಲ ನಡೆಯಲಿರುವ ಈ ಎಕ್ಸ್‌ಪೋ ಅನ್ನು ಒಕ್ಕಲಿಗ ಉದ್ಯಮಿಗಳ ಬೆಳವಣಿಗೆ ಮತ್ತು ಯಶಸ್ಸಿಗಾಗಿ ರೂಪಿಸಿದೆ. ಈ ಕಾರ್ಯಕ್ರಮವು ಜನವರಿ 3 ರಿಂದ 5ರ ವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗಾಯತ್ರಿ ಗ್ರಾಂಡ್ ಮತ್ತು ಗಾಯತ್ರಿ ವೃಕ್ಷದಲ್ಲಿ ನಡೆಯಲಿದೆ. ಈ ಬೃಹತ್ ಕಾರ್ಯಕ್ರಮವು ಒಕ್ಕಲಿಗ ಸಮುದಾಯದ ಉದ್ಯಮಶೀಲತೆಗೆ ವೇದಿಕೆ ಒದಗಿಸುವುದರ ಜೊತೆಗೆ ಇನ್ನೊವೇಶನ್, ನೆಟ್‌ವರ್ಕಿಂಗ್ ಹಾಗೂ ಸಹಭಾಗಿತ್ವಕ್ಕೆ ನೆರವಾಗಲಿದೆ ಎಂದು ಫಸ್ಟ್ ಸರ್ಕಲ್ ನ ರಾಜ್ಯಾಧ್ಯಕ್ಷ ನಂದೀಶ್ ರಾಜೇಗೌಡ ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ನಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿ ಅವರು ಮುಂದಿನ ಪೀಳಿಗೆಗಾಗಿ ರೂಪಿಸಿರುವ ಆಲ್ ಇನ್ ಒನ್ ಆ್ಯಪ್ ಆಗಿರುವ ಎಫ್ ಸಿ ನೆಕ್ಸ್ಟ್ ಆ್ಯಪ್ ಮಾಡಲಾಗಿದೆ. ಇದು ಭವಿಷ್ಯದ ಪೀಳಿಗೆಗೆ ಉದ್ಯಮ ಸೇರಿದಂತೆ ಹಲವು ಕ್ಷೇತ್ರಗಳನ್ನೊಳಗೊಂಡತೆ ಸಿದ್ದಪಡಿಸಲಾಗಿದೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಆ್ಯಪ್ ಮೂಲಕ ನೊಂದಣಿ ಮಾಡಿಕೊಳ್ಳಬಹುದು. ಈ ಆ್ಯಪ್ ಮೂಲಕ ಮುಂದಿನ ಮೂರು ವರ್ಷಗಳಲ್ಲಿ ಅಂದಾಜು 7 ರಿಂದ 8 ಲಕ್ಷ ಉದ್ಯಮಿಗಳನ್ನ ಸೇರಿಸುವ ನಿರೀಕ್ಷೆಯಿದೆ. ಒಟ್ಟು 14 ಜಿಲ್ಲೆಗಳಿಂದ 143 ತಾಲ್ಲೂಕುಗಳಲ್ಲಿ ಒಕ್ಕಲಿಗ ಸಮುದಾಯದ ಅಧ್ಯಯನ ಕೈಗೊಂಡಿದ್ದು, ಮೊದಲ ವರ್ಷ 10 ಲಕ್ಷ, ಎರಡನೇ ವರ್ಷ 20 ಲಕ್ಷ ಹಾಗೂ ಮೂರನೇ ವರ್ಷ 30 ಲಕ್ಷ ಗ್ರಾಹಕರು ಹಾಗೂ ಅಂದಾಜು 7 ರಿಂದ 8 ಲಕ್ಷ ಒಕ್ಕಲಿಗ ಉದ್ಯಮಿಗಳ ಮಾಹಿತಿಯನ್ನು ಸಂಗ್ರಹಿಸುವ ಗುರಿ ಹೊಂದಿದ್ದೇವೆ ಎಂದರು. ನಾವು ಇಲ್ಲಿಯವರೆಗೆ 14 ವಲಯಗಳನ್ನು ಪ್ರಾರಂಭಿಸಿದ್ದು, ಬಿಸಿನೆಸ್ ಕನೆಕ್ಟ್ ಫೀಚರ್, ಬಳಕೆದಾರರು ಡಿಜಿಟಲಿ ಮೀಟಿಂಗ್‌ಗಳನ್ನ ವೀಕ್ಷಿಸುವ ಅವಕಾಶ, ವಿಚಾರಣೆಗಳನ್ನು ಟ್ರ್ಯಾಕ್ ಮಾಡಲು ಮತ್ತು ವ್ಯವಹಾರವನ್ನು ಮೇಲ್ವಿಚಾರಣೆ ಮಾಡಲು ಹಾಗೂ ಇ–ಲೆಡ್ಜರ್ ವೈಶಿಷ್ಟ್ಯತೆಯನ್ನು ಸಹ ಹೊಂದಿದೆ. ಇಲ್ಲಿಯವರೆಗೆ ರೂ. 2,500 ಕೋಟಿ ವ್ಯವಹಾರ ನಡೆಸಲಾಗಿದೆ. ಕೆಲವು ಅಸಂಘಟಿತ ವ್ಯವಹಾರಗಳು, ಕಿರು ಉದ್ಯಮಗಳು, ಸಣ್ಣ ಉದ್ಯಮಗಳನ್ನು ಬೆಳೆಯಲು ಮಾರ್ಗದರ್ಶನ ನೀಡುವ ಕಾರ್ಯ ಮಾಡಲಾಗುತ್ತದೆ. 123 ತಾಲ್ಲೂಕುಗಳಲ್ಲಿ ಎಲ್ಲಾ 24 ವಲಯಗಳ ಸಂಯೋಜಕರು ಮತ್ತು 24 ಮಹಿಳಾ ಉದ್ಯಮಿಗಳಿದ್ದಾರೆ. ನಾವು ಈ ಮುಂಚೆ ಮಾಹಿತಿಯನ್ನು ಸಂಗ್ರಹಿಸಿರಲಿಲ್ಲ ಆದರೆ ಈಗ ಮಾಹಿತಿಯನ್ನು ಸಂಗ್ರಹಣೆಯನ್ನು ಆರಂಭಸಿದ್ದು, ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಿದ್ದೇವೆ ಎಂದರು.

ಬರುವ ದಿನಗಳಲ್ಲಿ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಸಿಗುವ ನಿಟ್ಟಿನಲ್ಲಿ ವಿಶೇಷ ಆದ್ಯತೆ ವಹಿಸುತ್ತಿದ್ದೇವೆ. ಪ್ರತಿ ಋತುವಿನಲ್ಲಿಯೂ ಯಾವ ಬೆಲೆಯನ್ನ ಎಷ್ಟು ಪ್ರಮಾಣದಲ್ಲಿ ಬೆಳೆದರೆ ರೈತರಿಗೆ ಲಾಭ ದೊರೆಯಲಿದೆ ಎಂಬುದರ ಸಂಪೂರ್ಣ ಮಾಹಿತಿಯನ್ನು ನೀಡುವ ಉದ್ದೇಶ ಹೊಂದಿದ್ದೇವೆ. ನಾವೇ ಬೆಂಬಲ ಬೆಲೆ ನೀಡಿ ಕೊಂಡುಕೊಳ್ಳುವ ವ್ಯವಸ್ಥೆ ಕೂಡಾ ಎಫ್‌ಸಿ ನೆಕ್ಸ್ಟ್‌ಅಪ್ಲಿಕೇಷನ್ ಮುಖಾಂತರ ಸಾಧ್ಯವಾಗಲಿದೆ. ಅಷ್ಟೇ ಅಲ್ಲ ರೈತ ಬೆಳೆದ ಬೆಳೆಗಳನ್ನ ಸುಲಭವಾಗಿ ಮಾರುಕಟ್ಟೆಗೆ ತಲುಪಿಸಲು ಸಾರಿಗೆ ವ್ಯವಸ್ಥೆ ಕೂಡಾ ಮಾಡುವ ಯೋಜನೆ ಹೊಂದಿದ್ದೇವೆ.ಒಟ್ಟಾರೆಯಾಗಿ ರೈತರ ಆರ್ಥಿಕ ಸಬಲೀಕರಣಕ್ಕೆ ಸೂಕ್ತ ವ್ಯವಸ್ಥೆ ಹಾಗೂ ಯೋಜನೆ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜನವರಿಯಲ್ಲಿ ನಡೆಯುವ ಎಕ್ಸ್‌ಪೋ ಮೂರನೇ ಆವೃತ್ತಿಯ ಕಾರ್ಯಕ್ರಮ ಇದಾಗಿದ್ದು, ಮೂರು ದಿನಗಳ ಕಾಲ ಕಾರ್ಯಕ್ರಮ ನಡೆಯಲಿದೆ. ಎರಡನೇ ಆವೃತ್ತಿಯಲ್ಲಿ 15,000 ಹಾಜರಿದ್ದರು, ಆದರೆ ಈ ಬಾರಿ ಗ್ರಾಹಕರನ್ನು ಒಳಗೊಂಡಂತೆ 1 ಲಕ್ಷ ಜನರನ್ನು ನಿರೀಕ್ಷಿಸುತ್ತಿದ್ದೇವೆ. ಅಪ್ಲಿಕೇಶನ್ ಡೌನ್‌ಲೋಡ್ ಮಾಡುವವರಿಗೆ ಉಚಿತ ಪ್ರವೇಶ ಸಿಗಲಿದೆ. ನಮ್ಮಲ್ಲಿ ರೈತರ ಸಂತೆ, ಗಂಗರು, ಹೊಯ್ಸಳರು, ಕೆಂಪೇಗೌಡರ ಆಳ್ವಿಕೆ ಮತ್ತು ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಶ್ರೀಮಂತ ಪರಂಪರೆಯನ್ನು ಪ್ರದರ್ಶಿಸಲು ಮ್ಯೂಸಿಯಂ ಮಾದರಿಯನ್ನು ಪ್ರದರ್ಶಿಸಲಾಗುತ್ತಿದೆ. ಎಕ್ಸ್‌ಪೋದಲ್ಲಿ ಉತ್ಪನ್ನಗಳು ಮತ್ತು ವ್ಯಾಪಾರದ 200 ಮಳಿಗೆಗಳು ಇರುತ್ತವೆ. ಅದರಲ್ಲಿ ಜಿಲ್ಲೆಯ ಪ್ರತಿನಿಧಿಗಳು ತಮ್ಮ ಸ್ಥಳೀಯ ವ್ಯವಹಾರಗಳ ಬಗ್ಗೆ ಚರ್ಚಿಸಲು ನಾವು ಸಮಯವನ್ನು ನಿಗದಿಪಡಿಸಿದ್ದೇವೆ.ಈ ಚರ್ಚೆಯಲ್ಲಿ ಹನ್ನೊಂದರ ಜೊತೆಗೆ ಕೃಷಿ ಕ್ಷೇತ್ರವನ್ನು ಪ್ರಮುಖವಾಗಿ ತೆಗೆದುಕೊಂಡು ಆಯಾ ಕ್ಷೇತ್ರಗಳ ಬಗೆಗೆ ಒತ್ತು ನೀಡಲಾಗುತ್ತದೆ ಎಂದರು.

ಮಂಜುಳಾ ಪ್ರಕಾಶ್ ಮಾತನಾಡಿ, 'ಮಹಿಳಾ ಉದ್ಯಮಿಗಳು ಸೇರಿದಂತೆ ಎಲ್ಲರಿಗೂ ಇದೊಂದು ಉತ್ತಮ ವೇದಿಕೆಯಾಗಿದ್ದು, ಇದರಲ್ಲಿ ಭಾಗವಹಿಸುವ ಎಲ್ಲರಿಗೂ ಅನುಕೂಲವಾಗಲಿದೆ' ಎಂದರು.

ಚಂದ್ರಪ್ಪ ಮಾತನಾಡಿ, 2022ರಲ್ಲಿ ಫಸ್ಟ್ ಸರ್ಕಲ್ ಆರಂಭಿಸಿದಾಗ ಐವರು ಸದಸ್ಯರಿದ್ದರು, ಇಂದು 1200 ಮಂದಿ ಇದ್ದಾರೆ. 2022ರಲ್ಲಿ 5 ಕೋಟಿ ರೂ. ವಹಿವಾಟು ನಡೆದಿದೆ. ಕಳೆದ ವರ್ಷ 2 ಸಾವಿರ ಕೋಟಿ ರೂ, ಆರು ತಿಂಗಳ ಹಿಂದೆ ನಾವು ಮೈಸೂರಿನಲ್ಲಿ ಹೂಡಿಕೆದಾರರ ಸಭೆಯನ್ನು ಕೂಡ ಆಯೋಜಿಸಿದ್ದೆವು ಮತ್ತು ಅದು ಯಶಸ್ವಿಯಾಗಿ ಜರುಗಿತು. ಈ ಬಾರಿ ನಾವು 200 ಸ್ಟಾಲ್‌ಗಳನ್ನು ಹೊಂದಿದ್ದು, ಆರೋಗ್ಯ, ಶಿಕ್ಷಣ, ಎಂಎಸ್‌ಎಂಇ, ಆಹಾರ ಮತ್ತು ಆತಿಥ್ಯ ಸೇರಿದಂತೆ ಇನ್ನೂ ಹಲವಾರು ವಲಯಗಳು ಒಂದೇ ಸೂರಿನಡಿ ಆಯೋಜಿಸಿದ್ದೇವೆ ಎಂದು ತಿಳಿಸಿದರು.

ಅಮರೇಶ್.ಎಂ ಮಾತನಾಡಿ, 'ಹಿಂದಿನ ಎಕ್ಸ್‌ಪೋನಲ್ಲಿ ಬೆಂಗಳೂರು ನಗರಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು, ಈ ಬಾರಿ 123 ತಾಲ್ಲೂಕುಗಳಿಗೆ ವಿಸ್ತರಿಸಿದ್ದು, ಈ ಪ್ರದೇಶದ ಉದ್ಯಮಿಗಳು ಮತ್ತು ಗ್ರಾಹಕರು ಎಕ್ಸ್‌ಪೋ ದಲ್ಲಿ ಭಾಗವಹಿಸಲಿದ್ದಾರೆ. ಕಳೆದ ಬಾರಿ ನಾವು ಉದ್ಯಮಿಗಳನ್ನು ಮಾತ್ರ ಆಹ್ವಾನಿಸಿದ್ವಿ, ಆದರೆ ಈ ಬಾರಿ ಸುಮಾರು 1 ಲಕ್ಷ ಗ್ರಾಹಕರನ್ನು ಆಹ್ವಾನಿಸುತ್ತಿದ್ದೇವೆ ಎಂದು ಹೇಳಿದರು.

ಭುವನ ಸುರೇಶ್ ಮಾತನಾಡಿ, ಒಕ್ಕಲಿಗರು ಉದ್ಯಮಿಗಳಾಗಿ ಹೊರಹೊಮ್ಮಲು ಇದೊಂದು ಪರಿಪೂರ್ಣ ವೇದಿಕೆಯಾಗಿದ್ದು, ಪ್ರಮುಖ ಕ್ಷೇತ್ರವಾದ ಕೃಷಿಗೆ ವಿಶೇಷ ಆದ್ಯತೆ ನೀಡಲಾಗಿದೆ. ನಾವು ಕೃಷಿಗೆ ಮೌಲ್ಯವರ್ಧಿತ ಸೇವೆಗಳನ್ನು ನೀಡುತ್ತಿದ್ದೇವೆ ಮತ್ತು ತಂತ್ರಜ್ಞಾನವು ಹೇಗೆ ಸುಧಾರಿಸುತ್ತಿದೆ ಎಂಬುದನ್ನು ತಿಳಿಸುವ ಪ್ರಯತ್ನ ಮಾಡುತ್ತಿದ್ದೇವೆ. ರೈತ ಉತ್ಪಾದಕ ಸಂಸ್ಥೆಗಳು ಮತ್ತು ಕಾಟೇಜ್ ಇಂಡಸ್ಟ್ರಿಗಳ ಜೊತೆಗೆ ಹಾರ್ಟಿಕಲ್ಚರ್ ಅನ್ನು ಉತ್ತೇಜಿಸಲಾಗುವುದು. ಒಕ್ಕಲಿಗ ಸಮುದಾಯದಲ್ಲಿರುವ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಮುಂತಾದ ಕ್ಷೇತ್ರಗಳ ವೃತ್ತಿಪರರ ಜೊತೆಗೆ ಸಂಸ್ಥೆಗಳು ಮತ್ತು ಗುಡಿ ಕೈಗಾರಿಕೆಗಳನ್ನು ಸೇರಿಸಲಾಗುವುದು ಮತ್ತು ನಾವು ಅವರಿಗೆ ವಿಶೇಷವಾಗಿ ಸೆಷನ್‌ಗಳನ್ನು ಕೈಗೊಳ್ಳಲಿದ್ದೇವೆ ಎಂದು ಮಾಹಿತಿ ನೀಡಿದರು. ಈ ಸಂಧರ್ಭದಲ್ಲಿ ಜಯರಾಂ ರೈಪುರ, ನಾಗರಾಜ್ ಗೌಡ, ಪದ್ಮಾವತಿ.ಜಿ, ಕಾವ್ಯ, ಅರುಣಾ.ಬಿ.ಎಸ್ ಮತ್ತು ಇತರರು ಉಪಸ್ಥಿತರಿದ್ದರು.

## ನಾಳೆಯಿಂದ ಎಕ್ಸ್‌ಪೋ: 2025 ಉದ್ದಮಿ ಒಕ್ಕಲಿಗ

**ಶಿಡ್ಲಘಟ್ಟ:** ನಾಳೆಯಿಂದ ಮೂರು ದಿನಗಳ ಕಾಲ ಬೆಂಗಳೂರಿನ ಅರಮನೆ ಮೈದಾನದಲ್ಲಿ ಎಕ್ಸ್‌ಪೋ– 2025 ಉದ್ದಮಿ ಒಕ್ಕಲಿಗ ಬೃಹತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲ್ಲೂಕು ಒಕ್ಕಲಿಗ ಸಂಘ ತಿಳಿಸಿದೆ

ಒಕ್ಕಲಿಗರು ಯಶಸ್ವಿ ಉದ್ಯಮಿಗಳಾಗಲು ಎಲ್ಲಾ ವಿಧವಾದ ನೆರವು ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಎಪ್.ಸಿ.ಉದ್ಯಮಿ ಒಕ್ಕಲಿಗ ಜಿಲ್ಲಾ ಸಂಯೋಜಕ ಟಿ.ವಿ. ಪ್ರಭಾಕರರೆಡ್ಡಿ ಒಕ್ಕಲಿಗ ಸಂಘದ ಅಧ್ಯಕ್ಷ ಬಿ.ನಾರಾಯಣಸ್ವಾಮಿ, ಎಫ್.ಸಿ.ಸರ್ಕಲ್ ಅಧ್ಯಕ್ಷ ಬಿ.ಕೆ. ಚೇತನ್. ಉಪಾದ್ಯಕ್ಷ ಎಸ್.ಪ್ರಕಾಶ್, ಮಳ್ಳೂರು ಹರೀಶ್ ಅವರುಗಳು ತಿಳಿಸಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಎಕ್ಸ್‌ಪೋನಲ್ಲಿ ಭಾಗವಹಿಸಿ ಕಾರ್ಯಕ್ರಮದ ಉಪಯೋಗಗಳನ್ನು ಪಡೆದುಕೊಳ್ಳಬೇಕುಂದು ಕೋರಲಾಗಿದೆ. ಚಿಕ್ಕಬಳ್ಳಾಪುರ ಜಿಲ್ಲಾ ಉದ್ಯಮಿ ಒಕ್ಕಲಿಗ ಹಾಗು ಶಿಡ್ಲಘಟ್ಟ ಶಾಖೆಯಿಂದ ತಾಲ್ಲೂಕಿನ ಎಲ್ಲಾ ಉದ್ಯಮಿ ಒಕ್ಕಲಿಗರು ಜ.3, 4 ಮತ್ತು 5ರಂದು ಗೇಟ್ ಸಂಖ್ಯೆ 4 ಗಾಯಿತ್ರಿ ಗ್ರೌಂಡ್ ಮತ್ತು ಗಾಯಿತ್ರಿ ವೃಕ್ಷ, ಆರಮನೆ ಮೈದಾನ ಬೆಂಗಳೂರು ಇಲ್ಲಿ ನಡೆಯುವ ಫಸ್ಟ್ ಸರ್ಕಲ್ "ಉದ್ಯಮಿ ಒಕ್ಕಲಿಗ ಎಕ್ಸ್‌ಪೋ–2025" ರಲ್ಲಿ ಪಾಲ್ಗೊಳ್ಳುವಂತೆ ಶಿ ಸಭೆಯಲ್ಲಿ ತಾಲ್ಲೂಕಿನ ಒಕ್ಕಲಿಗ ಭಾಂದವರಿಗೆ ಕರೆ ನೀಡಲಾಯಿತು. ಸಭೆಯಲ್ಲಿ ಶಿಡ್ಲಘಟ್ಟ ಒಕ್ಕಲಿಗರ ಸಂಘದ ಅದ್ಯಕ್ಷರಾದ ಬಿ.ನಾರಾಯಣಸ್ವಾಮಿ, ಕಾರ್ಯದರ್ಶಿಗಳಾದ ಎಸ್.ಪ್ರಕಾಶ್, ಪದಾಧಿಕಾರಿಗಳಾದ ಜೆ.ವಿ.ಸುರೇಶ್, ಬಿ.ಕೆ.ಚೇತನ್, ಕೃಷಿಪಂಡಿತರಾದ ಹೆಚ್.ಜಿ.ಗೋಪಾಲಗೌಡ, ಪತ್ರಕರ್ತರಾದ ಬೆಳ್ಳೂಟಿ ಕೆ.ವಿ.ಮುನೇಗೌಡ, ಚೌಡಸಂದ್ರ ಈ.ಕರಗಪ್ಪ, ವ್ಯಾಪಾರಿಗಳಾದ ಅಬ್ಲೂಡು ರಮೇಶ್ (ಮಾಸ್ಟರ್), ಅಂಬರೀಶ್, ಮಳ್ಳೂರು ಹರೀಶ್, ಹೀರೋ ಬೈಕ್ ಶೋ ರೂಂ ಮಾಲಿಕರಾದ ಬಿ.ಲಕ್ಷ್ಮಿನಾರಾಯಣ, ಎ.ಜಿ.ಸುಧಾಕರ್, ಚೀಮನಹಳ್ಳಿ ಉಮೇಶ್, ವಿವೇಕ್, ಮುಂತಾದವರು ಹಾಜರಿದ್ದರು.



# ಸಂದೀಪ್ ರೆಡ್ಡಿ ಸಮಾಜ ಸೇವೆ ನಮಗೆ ಪ್ರೇರಣೆ: ಅರವಿಂದ್



**ಚಿಕ್ಕಬಳ್ಳಾಪುರ:** ಹಲವಾರು ವರ್ಷಗಳಿಂದ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸಮಾಜಸೇವೆ ಮುಖಾಂತರ ಜನರ ಮೆಚ್ಚುಗೆಗೆ ಪಾತ್ರರಾಗಿರುವ ಭಗತ್‌ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್.ಬಿ ರೆಡ್ಡಿ ಅವರು ಯುವಕರಿಗೆ ಸಮಾಜ ಸೇವೆಯಲ್ಲಿ ತೊಡಗಿಸಲು ಪ್ರೇರಣೆಯಾಗುತ್ತಿದ್ದಾರೆ.

ತಾಲ್ಲೂಕಿನ ಶ್ರೀರಾಮಪುರ ಗ್ರಾಮದ ಯುವ ಮುಖಂಡ ರಾದ ಅರವಿಂದ್, ಶಿವನಾಗ್, ಶಶಿ ಕುಮಾರ್ ರವರು ಸಂದೀಪ್ ರೆಡ್ಡಿ ಅವರ ಸಮಾಜಸೇವೆಯನ್ನು ಪ್ರೇರಣೆ ಯಾಗಿ ತಮ್ಮ ಗ್ರಾಮ ದಲ್ಲಿನ ಆಶಾ ಕಾರ್ಯಕರ್ತೆ ಯರು, ಅಂಗನವಾಡಿ ಕಾರ್ಯಕರ್ತೆಯರು, ವಾಟರ್ ಮೆನ್ ಗಳಿಗೆ ಸನ್ಮಾನ ಉಡುಗೊರೆ ಹಾಗೂ ಗ್ರಾಮದ ಪ್ರತಿಭಾವಂತ 60 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಿಸಲು ಮುಂದಾಗಿದ್ದು ಇಂದು ಗ್ರಾಮದಲ್ಲಿ ಸರಳ ಕಾರ್ಯಕ್ರಮದಲ್ಲಿ ಭಗತ್ ಸಿಂಗ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸನ್ಮಾನ ಗೌರವ ವೇತನ ವಿತರಣೆಯನ್ನು ಟ್ರಸ್ಟ್ ಅಧ್ಯಕ್ಷ ಸಂದೀಪ್.ಬಿ ರೆಡ್ಡಿ ರವರ ಉಪಸ್ಥಿತಿಯಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮದ ಯುವ ಮುಖಂಡ ಅರವಿಂದ್ ಸಮಾಜಸೇವೆ ಮಾಡಲು ನಮಗೆ ಸಂದೀಪ್ ರೆಡ್ಡಿ ಪ್ರೇರಣೆ, ಅವರ ಸಾಮಾಜಿಕ ಕಳಕಳಿ,ಸಮಾಜ ಸೇವೆ ಜನರಿಗೆ ಮುಟ್ಟುತ್ತಿದ್ದು ನಮ್ಮಂತಹ ಯುವಕರಿಗೆ ಅವರ ಕಾರ್ಯ ಸ್ಫೂರ್ತಿ ತುಂಬುತ್ತಿದೆ,ಇನ್ನು ಮುಂದಿನ ದಿನಗಳಲ್ಲಿ ಸಂದೀಪ್. ಬಿ ರೆಡ್ಡಿ ರವರ ನೇತೃತ್ವದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರ ನೆರವಿಗಾಗಿ ಮುಂದಾಗುತ್ತೇವೆ ಎಂದ ಅವರು ಇನ್ನು ಎರಡು ತಿಂಗಳಿಗೊಮ್ಮೆ ಸಾಮಾಜಿಕ ಕಾರ್ಯಕ್ರಮ ನಡೆಸಲು ತಯಾರಿ ನಡೆಸಿದ್ದು ನಮ್ಮ ಗ್ರಾಮದ ಅಂಗವಿಕಲ ಕುಟುಂಬಕ್ಕೆ ಸೂರು ಕಲ್ಪಿಸುವ ನಿಟ್ಟಿನಲ್ಲಿ ಸಮಾನ ಮನಸ್ಕರ ಸ್ನೇಹಿತರು ಚಿಂತಿಸಿದ್ದು ಕೆಲವೇ ತಿಂಗಳಲ್ಲಿ ಆ ಕುಟುಂಬಕ್ಕೆ ಮನೆ ಹಸ್ತಾಂತರಿಸಲಾಗುವುದು. ಅದರ ಉದ್ಘಾಟನೆ ಸಮಾಜ ಸೇವಕ ಸಂದೀಪ್.ಬಿ ರೆಡ್ಡಿ ರವರ ಕೈಯಲ್ಲಿ ಮಾಡಿಸುತ್ತೇವೆ ಎಂದರು.

## ಮನೆಮಂದಿಗೆಲ್ಲ ಚಾಕು ಇರಿತ

**ಚಾಮರಾಜನಗರ:** ಕೋಪೋದ್ರಿಕ್ತ ವ್ಯಕ್ತಿ ತನ್ನ ಮನೆಮಂದಿಗೆಲ್ಲ ಮನ ಬಂದಂತೆ ಚಾಕುವಿನಿಂದ ಇರಿದ ಘಟನೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದ ಈದ್ಗಾ ಮೊಹಲ್ಲಾದಲ್ಲಿ ಬುಧವಾರ ರಾತ್ರಿ ನಡೆದಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಪಟ್ಟಣದ ಈದ್ಗಾ ಮೊಹಲ್ಲಾದಲ್ಲಿ ನಡೆದ ಚಾಕು ಇರಿತಕ್ಕೊಳಗಾದ ಐಮಾನ್ ಬಾನು(26) ಸ್ಥಳದಲ್ಲೇ ಮೃತಪಟ್ಟರೆ, ಸೈಯದ್(60) ಮತ್ತು ತಸ್ಲಿಮಾ ತಾಜ್(25) ಗಂಭೀರವಾಗಿ ಗಾಯಗೊಂಡು ಚಾಮರಾಜನಗರ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜ್ವರ ಬಂದಿದ್ದ ಮಗುವಿಗೆ ಸೌತೆಕಾಯಿ ತಿನ್ನಿಸಬೇಡ ಎಂದಿದ್ದೇ ಕಲಹಕ್ಕೆ ಕಾರಣ. ಇದರಿಂದ ಕೋಪಗೊಂಡ ವ್ಯಕ್ತಿ ಎಲ್ಲರಿಗೂ ಚಾಕುವಿನಿಂದ ಇರಿದಿರುವುದಾಗಿ ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಚಾಕು ಇರಿದ ಫರ್ಮಾನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಫರ್ಮಾನ್ ತನ್ನ ಅಣ್ಣನ ಮಗಳಿಗೆ ಸೌತೆಕಾಯಿ ತಿನ್ನಿಸುತ್ತಿದ್ದಾಗ ಸಹೋದರಿ ಐಮಾನ್ ಬಾನು, ಜ್ವರ ಬಂದಿರುವ ಮಗುವಿಗೆ ಸೌತೆಕಾಯಿ ಏಕೆ ತಿನ್ನಿಸುತ್ತಿದ್ದಿಯಾ ಎಂದು ಪ್ರಶ್ನಿಸಿದ್ದಾರೆ. ನಂತರ ಮಾತಿಗೆ ಮಾತು ಬೆಳೆದು ಐಮಾನ್ ಅವರಿಗೆ ಚಾಕುವಿನಿಂದ ಕುತ್ತಿಗೆಗೆ ಇರಿದಿದ್ದಾನೆ. ಬಳಿಕ, ತಂದೆ ಸೈಯದ್ ಮತ್ತು ಅತ್ತಿಗೆಗೂ ಇರಿದಿದ್ದಾನೆ. ಗಲಾಟೆಯಲ್ಲಿ ಸೈಯದ್ ಅವರ ಕೈ ಕೂಡಾ ಮುರಿದಿದೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಪಟ್ಟಣ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಆರೋಪಿಯನ್ನು ಬಂಧಿಸಿದ್ದಾರೆ.

## ಪುರುಷ ಕಾಣೆ: ಸುಳಿವಿಗೆ ಸಹಕರಿಸಲು ಮನವಿ

**ಚಾಮರಾಜನಗರ:** ಚಾಮರಾಜನಗರ ತಾಲೂಕಿನ ಕಾವುದವಾಡಿ ಗ್ರಾಮದ ಸಿದ್ದರಾಜು ಎಂಬುವವರು ಕಾಣೆಯಾಗಿದ್ದು ಇವರ ಪತ್ತೆಗೆ ಸಹಕರಿಸುವಂತೆ ಕೋರಲಾಗಿದೆ.

46 ವರ್ಷದ ಸಿದ್ದರಾಜು 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಬಣ್ಣ, ಕಪ್ಪು ತಲೆಗೂದಲು ಹೊಂದಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ.

ಇವರ ಸುಳಿವು ದೊರೆತಲ್ಲಿ ಸಂತೇಮರಹಳ್ಳಿ ಪೊಲೀಸ್ ಠಾಣೆ ದೂ.ಸಂ 08226–240250, ಪಿ.ಎಸ್.ಐ ಮೊ.ಸಂ 9480804650, ಜಿಲ್ಲಾ ನಿಸ್ತಂತು ಕೊಠಡಿ ದೂ.ಸಂ 08226–222383 ಸಂಪರ್ಕಿಸುವಂತೆ ಸಂತೇಮರಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ತಿಳಿಸಿದ್ದಾರೆ.

## ಬಾಣಂತಿ ಸಾವು: ಕ್ರಮಕ್ಕೆ ಹಾಲಪ್ಪ ಆಚಾರ್ ಆಗ್ರಹ



**ಕುಕನೂರು:** ರಾಜ್ಯದಲ್ಲಿ ಬಾಣಂತಿಯರ ಸಾವು ಕಳವಳ ಮೂಡಿಸಿದ್ದು ರಾಜ್ಯ ಸರ್ಕಾರ ಕೂಡಲೇ ಎಚ್ಚತ್ತುಕೊಳ್ಳಬೇಕು, ರಾಜ್ಯದಲ್ಲಿ ಅರೋಗ್ಯ ಸಚಿವರು ಇದ್ದರೋ ಇಲ್ಲವೋ ಎನ್ನುವಂತಹ ಪರಸ್ಥಿತಿ ನಿರ್ಮಾಣವಾಗಿದೆ ಎಂದು ಮಾಜಿ ಸಚಿವ ಹಾಲಪ್ಪ ಆಚಾರ್ ಹೇಳಿದ್ದಾರೆ.

ಕುಕನೂರು ತಾಲೂಕಿನ ಅಡೂರು ಗ್ರಾಮದ ಬಾಣಂತಿ ಮಹಿಳೆ ರೇಣುಕಾ ಪ್ರಕಾಶ್ ಹಿರೇಮನಿ ಮತ್ತು ಹಸುಗೂಸು ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಸಾವನ್ನಪ್ಪಿರುವ ಘಟನೆ ತಿಳಿದು ಮೃತ ಮಹಿಳೆಯ ಕುಟುಂಬವರಿಗೆ ಸಾಂತ್ವನ ಹೇಳಿ ಹಾಲಪ್ಪ ಆಚಾರ್ ಮಾತನಾಡಿದರು.

ರಾಜ್ಯದಲ್ಲಿ ಬಾಣಂತಿಯರ ಸಾವಿನ ಸರಣಿ ಕೊಪ್ಪಳ ಜಿಲ್ಲೆಗೂ ವ್ಯಾಪಿಸಿದ್ದು ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯತನದಿಂದ ಸೂಕ್ತ ಚಿಕಿತ್ಸೆ ಸಿಗದೇ ಅಡೂರು ಗ್ರಾಮದ ಮಹಿಳೆ ಮತ್ತು ಹಸು ಗೂಸು ಮೃತಪಟ್ಟ ಘಟನೆ ನಡೆದಿದೆ. ಇದರಲ್ಲಿ ವೈದ್ಯರ ನಿರ್ಲಕ್ಷ್ಯ ಮತ್ತು ಸೂಕ್ತ ಚಿಕಿತ್ಸೆ ನೀಡುವಲ್ಲಿ ಆಸ್ಪತ್ರೆ ವೈದ್ಯರು ವಿಫಲರಾಗಿದ್ದು ತಪ್ಪಿತಸ್ತರಿಗೆ ಕಠಿಣ ಕ್ರಮ ಆಗಬೇಕು. ಅಲ್ಲದೇ ರಾಜ್ಯ ಸರ್ಕಾರ ಪ್ರತೀ ಜಿಲ್ಲೆಯ ಆಸ್ಪತ್ರೆಗಳಿಗೆ ಅಗತ್ಯ ಸಿಬಂದಿ, ಔಷದಿ, ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು ಎಂದು ಅಗ್ರಹಿಸಿದ್ದಾರೆ.

ತಾವೂ ಕೂಡಾ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಕೆಲಸ ಮಾಡಿದ್ದೇವೆ, ಆದರೆ ನಮ್ಮ ಅವಧಿಯಲ್ಲಿ ಈ ತರಹದ ಯಾವ ಅಹಿತಕರ ಘಟನೆಗಳು ನಡೆಯಲಿಲ್ಲ, ರಾಜ್ಯ ಕಾಂಗ್ರೆಸ್ ಸರ್ಕಾರದ ಅರೋಗ್ಯ ಸಚಿವರು, ಮಹಿಳಾ ಮಕ್ಕಳ ಕಲ್ಯಾಣ ಸಚಿವರು ಮಹಿಳೆ ಮತ್ತು ಮಕ್ಕಳ ಅರೋಗ್ಯ ಮತ್ತು ರಕ್ಷಣೆಯಲ್ಲಿ ವಿಫಲರಾಗಿದ್ದಾರೆ.

ಬಳ್ಳಾರಿ, ರಾಯಚೂರು, ಕೊಪ್ಪಳ ಸೇರಿದಂತೆ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಬಾಣಂತಿಯರ ಸಾವು ಅವರಿಗೆ ಕಾಣುತ್ತಿಲ್ಲ, ಈಗಲಾದರೂ ಸರ್ಕಾರ ಎಚ್ಚೆತ್ತುಕೊಂಡು ಮಹಿಳೆ ಮತ್ತು ಬಾಣಂತಿಯರ ಆರೋಗ್ಯದ ಕಾಳಜಿ ವಹಿಸಬೇಕು ಎಂದು ಹಾಲಪ್ಪ ಆಚಾರ್ ಹೇಳಿದ್ದಾರೆ.

# ವಿಶ್ವದಲ್ಲೇ ಭಾರತ ಶ್ರೀಮಂತ ವಾಸ್ತು ಶಿಲ್ಪಕ್ಕೆ ಕೊಡುಗೆ ಕಾರಣ ಅಮರಶಿಲ್ಪಿ ಜಕಣಾಚಾರಿ

**ನಾಗಮಂಗಲ:** ವಿಶ್ವದಲ್ಲೇ ಭಾರತ ಶ್ರೀಮಂತ ವಾಸ್ತುಶಿಲ್ಪಕ್ಕೆ ಎಲ್ಲರ ಗಮನ ಸೆಳೆಯಲು ಕಾರಣ ಮಹಾನ್ ಶಿಲ್ಪಿ ಅಮರಶಿಲ್ಪಿ ಜಕಣಾಚಾರಿ ಎಂಬುದನ್ನು ಯಾರು ಮರೆಯಬಾರದು ಎಂದು ತಾಲೂಕು ದಂಡಾಧಿಕಾರಿಗಳಾದ ಜಿ. ಆದರ್ಶ್ ತಿಳಿಸಿದರು.

ನಾಗಮಂಗಲ ತಾಲ್ಲೂಕು ಆಡಳಿತ ಆಯೋಜನೆ ಮಾಡಿದ್ದ ಅಮರಶಿಲ್ಪಿ ಜಕಣಚಾರಿ ಸಂಸ್ಮರಣೆ ದಿನಾಚರಣೆ ಕಾರ್ಯಕ್ರಮ ಅವರು ಉದ್ಘಾಟಿಸಿ ಮಾತನಾಡಿದರು.

ವಿಶ್ವದಲ್ಲಿಯೇ ಭಾರತದ ಶ್ರೀಮಂತ ವಾಸ್ತುಶಿಲ್ಪ ಗಮನಸೆಳೆಯುತ್ತದೆ. ಅದರಿಂದಾಗಿ ಭಾರತ ವಿಶ್ವದೆದುರು ಸಾಂಸ್ಕೃತಿಕ ದೇಶವೆಂದು ಗುರುತಿಸಿಕೊಂಡಿದ್ದು, ಅದಕ್ಕೆ ಅಮರಶಿಲ್ಪಿ ಜಕಣಾಚಾರಿ ಅವರು ನೀಡಿದ ಕೊಡುಗೆಯೇ ಕಾರಣ ಅಭಿಪ್ರಾಯಪಟ್ಟರು. ಅಮರಶಿಲ್ಪ ಜಕಣಾಚಾರ್ಯರು ಹಳೆಬೀಡು, ಪಟ್ಟದಕಲ್ಲು, ಐಹೊಳೆ ಸೇರಿ ಹಲವು ಪ್ರದೇಶಗಳಲ್ಲಿ ಜಕಣಾಚಾರಿ ಅವರು ಮೂಡಿಸಿದ ಶಿಲ್ಪಕಲೆಯು ಜಗತ್ತನ್ನು ಸೆಳೆಯುತ್ತಿದೆ.ಅವರು ರೂಪಿಸಿದ ಅದ್ಭುತ ಕಲಾಕೃತಿಗಳು ಇಂದಿಗೂನಮ್ಮನ್ನು ಬೆರಗುಗೆಣಟಿಜಜಜಿುಟಿಜಜಳಿಸುತ್ತವೆ. ಇಂತಹ ಕಲೆ ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಜಗತ್ತಿನ ಅದ್ಭುತ ಶಿಲ್ಪಗಳ ಸಾಲಿನಲ್ಲಿ ನಿಲ್ಲುವ ಜಕಣಾಚಾರಿ ಅವರು ಬೇಲೂರು ಮತ್ತು ಹಳೆಬೀಡು ಸೇರಿದಂತೆ ಇತರ ಸ್ಥಳಗಳಲ್ಲಿ ಕಲ್ಲಿನಲ್ಲಿ ಕೆತ್ತಿದ ಕಲಾಕೃತಿಗಳನ್ನು ನೋಡುವುದೇ ಒಂದು ಸೌಭಾಗ್ಯ. ಮಾಡುವ ಕೆಸದ ಬಗ್ಗೆ ತಿಳಿವಳಿಕೆ, ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಲ್ಲಿ ಯಶಸ್ಸು ಲಭಿಸುತ್ತದೆ. ನಮ್ಮೊಳಗಿನ ಕಲೆಯನ್ನು ನಾವು ಗುರುತಿಸಿದರೆ ಮಾತ್ರ ಸಮಾಜ ನಮ್ಮನ್ನು ಗುರುತಿಸುತ್ತದೆ. ಸಾಧಕರನ್ನು ಸ್ಮರಣೆ ಮಾಡಿದರಷ್ಟೇ ಸಾಲದು. ಅವರ ಗುಣ ಮತ್ತುಬೆಳೆದು ಬಂದ ಪರಿಶ್ರಮದ ಘಟನೆಗಳನ್ನ ತಿಳಿದು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತೀ ಮುಖ್ಯ ಎಂದು ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಕೃಷ್ಣಾಚಾರ್ ಅಭಿಪ್ರಾಯ ಪಟ್ಟರು.


ಅಮರ ಶಿಲ್ಪಿ ಜಕಣಾಚಾರಿ ಅವರನ್ನು ನಾವು ಇಂದು ನೆನೆಯುವ ಹಾಗೆ ಉತ್ತಮ ಜ್ಞಾನ ಮತ್ತು ಕಲಾತ್ಮಕ ಪ್ರವೃತ್ತಿ ರೂಢಿಕೊಂಡಿದ್ದೆ ಆದರೆ ಸಮಾಜ ನಮ್ಮನ್ನು ಸ್ಮರಿಸುವಂತಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಅಶೋಕ್, ರಾಜು, ಉಮೇಶ್, ಅಭಿಷೇಕ್, ಪ್ರಕಾಶ್, ನಾಗೇಶ್, ಮಹಿಳಾ ಮಣಿಗಳಾದ ಚಂದ್ರಕಲಾ, ನಂದಿನಿ, ಮಮತಾ ಇನ್ನು ಮುಂತಾದ ಸದಸ್ಯರು ಭಾಗವಹಿಸಿದರು



# ಮಲೈ ಮಾದಪ್ಪನ ಸನ್ನಿಧಿಯಲ್ಲಿ ಹೊಸ ವರ್ಷಾಚರಣೆ

**ರಾತ್ರಿ ಚಿನ್ನದ ತೇರು: ಬೆಳಗ್ಗೆ ಬೆಳ್ಳಿ ರಥೋತ್ಸವದಲ್ಲಿ ಭಕ್ತಾದಿಗಳು ಭಾಗಿ**



ಹನೂರು: ತಾಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಹೊಸ ವರ್ಷಾಚರಣೆ ಸಂಭ್ರಮಕ್ಕೆ ಭಕ್ತರ ಸಾಗರವೇ ಹರಿದು ಬಂದು ಹೊಸ ವರ್ಷಾಚರಣೆ ದಿನದ ವಿಶೇಷವಾಗಿ ಮಲೆ ಮಾದಪ್ಪನ ದರ್ಶನ ಪಡೆದು ವಿಶೇಷ ಪೂಜೆ ಹರಕೆ ಸಲ್ಲಿಸಿದ್ದಾರೆ.

ಶ್ರೀ ಮಲೆ ಮಹದೇಶ್ವರ ಬೆಟ್ಟದ ಮಾದಪ್ಪನ ಸನ್ನಿಧಿಯಲ್ಲಿ ಹೊಸ ವರ್ಷಾಚರಣೆಗೆ ಬೆಳಗ್ಗೆಯಿಂದಲೇ ಅರ್ಚಕರಿಂದ ಸ್ವಾಮಿಗೆ ಪಂಚಾಮೃತ ಅಭಿಷೇಕವನ್ನು ನೆರವೇರಿಸಿ ಮಹಾಮಂಗಳಾರತಿ ಬೆಳಗಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ಮಲೆ ಮಾದಪ್ಪನ ಸನ್ನಿಧಿಯಲ್ಲಿ ವಿವಿಧ ಬಗೆಯ ಪುಷ್ಪ, ತಳಿರು–ತೋರಣಗಳಿಂದ ಸಿಂಗರಿ. ದೇವಸ್ಥಾನದ ಹೊರ ಆವರಣ, ಒಳ ಆವರಣ, ರಾಜಗೋಪುರ, ಬಸ್ ನಿಲ್ದಾಣ, ಇನ್ನಿತರ ಕಡೆಗಳಲ್ಲಿ ವಿದ್ಯುತ್ ದೀಪಾಲಂಕಾರ ಕಂಗೊಳಿಸುವಂತೆ ಮಾಡಲಾಗಿತ್ತು.

ಮಂಗಳವಾರ ರಾತ್ರಿ 7:30ರ ವೇಳೆಗೆ ನಡೆದ ಚಿನ್ನದ ರಥೋತ್ಸವದಲ್ಲಿ ಭಕ್ತಾದಿಗಳು ಭಾಗಿಯಾಗಿ ಹರಕೆ ಹೊತ್ತು ಭಕ್ತರು ಹೇಗುಲದ ಸುತ್ತ ಕಣ್ಣಿನ ಕೋಲು ಮತ್ತು ಪ್ರದಕ್ಷಿಣೆ ಹಾಕಿ ಉಗೆ ಮಾದಪ್ಪ ಎಂದು ಜೈಕಾರ ಹಾಕುತ್ತಾ ಹರಕೆ ಪೂಜೆ ಸಲ್ಲಿಸಿದರು. ಬುಧವಾರ ಬೆಳಿಗ್ಗೆ 8 ಗಂಟೆಗೆ ನಡೆದ ಬೆಳ್ಳಿ ರಥೋತ್ಸವ, ಹುಲಿವಾಹನ, ರುದ್ರಾಕ್ಷಿ ಮಂಟಪ, ಬಸವ ವಾಹನ, ರಾತ್ರಿ ಚಿನ್ನದ ರಥೋತ್ಸವದಲ್ಲಿ ಸಾವಿರಾರು ಭಕ್ತಾದಿಗಳು ಪಾಲ್ಗೊಂಡರು. ಹರಕೆ ಹೊತ್ತ ಭಕ್ತರು ದೇಗುಲದ ಸುತ್ತ ದಂಡಿನ ಕೋಲು ಹೊತ್ತು ಪ್ರದಕ್ಷಿಣೆ ಹಾಕಿದರು. ಸಾವಿರಾರು ಭಕ್ತರು ಮುಡಿ ಸೇವೆ, ಉರುಳು ಸೇವೆ, ಪಂಜಿನ ಸೇವೆ ಹಾಗೂ ರಜಾ ಹೊಡೆಯುವ ಸೇವೆಗಳಲ್ಲಿ ಹರಕೆ ಪೂಜೆ ಸಲ್ಲಿಸಿದರು. ಸರತಿ ಸಾಲಿನಲ್ಲಿ ತೆರಳಿ ದೇವರ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸಿ ಮಲೆ ಮಾದಪ್ಪನ ಕೃಪೆಗೆ ಪಾತ್ರರಾದರು.

# ಸನ್ಯಾಸಿ ಚಿನ್ಮಯ್ ಕೃಷ್ಣ ದಾಸ್ ಜಾಮೀನು ಅರ್ಜಿ ವಿಚಾರಣೆ

**ಢಾಕಾ:** ದೇಶದ್ರೋಹ ಪ್ರಕರಣದಲ್ಲಿ ಬಂಧಿತರಾಗಿ ಜೈಲಿನಲ್ಲಿರುವ ಹಿಂದೂ ಸನ್ಯಾಸಿ ಹಾಗೂ ಬಾಂಗ್ಲಾದೇಶ ಸಮ್ಮಿಲಿತ್ ಸನಾತನ ಜಾಗರಣ ಜೋಟೆಯ ವಕ್ತಾರ ಚಿನ್ಮಯ್ ಕೃಷ್ಣ ದಾಸ್ ಅವರ ಜಾಮೀನು ಅರ್ಜಿ ವಿಚಾರಣೆ ಇಂದು ಚಿತ್ತಗಾಂಗ್ ನ್ಯಾಯಾಲಯದಲ್ಲಿ ನಡೆಯಲಿದೆ.

ನವೆಂಬರ್ 25ರಂದು ಢಾಕಾದ ಹಜರತ್ ಶಹಜಲಾಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಾಸ್ ಅವರನ್ನು ಬಂಧಿಸಲಾಗಿತ್ತು.

ಢಾಕಾ ಮತ್ತು ಚಿತ್ತಗಾಂಗ್‌ನ 20 ವಕೀಲರು ಬೆಂಬಲಿಸಿದ ಜಾಮೀನು ಅರ್ಜಿಯಲ್ಲಿ ಚಿನ್ಮಯ್ ಕೃಷ್ಣ ದಾಸ್ ಅವರ ವಿರುದ್ಧ ಸುಳ್ಳು ಮತ್ತು ಕಪೋಲಕಲ್ಪಿತ ಆರೋಪಗಳನ್ನು ಹೊರಿಸಲಾಗಿದೆ ಎಂದು ಹೇಳಲಾಗಿದೆ. ಮಧುಮೇಹ ಮತ್ತು ಉಸಿರಾಟದ ಸಮಸ್ಯೆಗಳಂತಹ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ದಾಸ್ ಅವರನ್ನು ಬಂಧನದಲ್ಲಿಟ್ಟಿರುವುದು ಕಾನೂನುಬಾಹಿರ ಎಂದು ಅವರ ವಕೀಲರು ವಾದಿಸಿದ್ದಾರೆ. ದಾಸ್ ಅವರ ಪ್ರಾಥಮಿಕ ವಕೀಲ ರವೀಂದ್ರ ಘೋಷ್ ಅವರನ್ನು ಈ ಹಿಂದೆ ನಿರೀಕ್ಷಣಾ ಜಾಮೀನು ಅರ್ಜಿ




ಸಲ್ಲಿಸದಂತೆ ನಿರ್ಬಂಧಿಸಲಾಗಿತ್ತು.

ಚಿತ್ತಗಾಂಗ್ ನ್ಯಾಯಾಲಯದಲ್ಲಿ ಇಂದು ನಿಷ್ಪಕ್ಷಪಾತದಿಂದ ವಿಚಾರಣೆ ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಕೋಲ್ಕತಾದ ಇಸ್ಕಾನ್ ಸಂಸ್ಥೆ ವಕ್ತಾರ ರಾಧಾರಾಮ್ ದಾಸ್, ಚಿನ್ಮಯ್ ಕೃಷ್ಣ ದಾಸ್ ಮತ್ತು ಬಾಂಗ್ಲಾದೇಶದ ಇತರ ಧಾರ್ಮಿಕ ಅಲ್ಪಸಂಖ್ಯಾತರಿಗೆ ಬೆಂಬಲಿಸುವುದನ್ನು ವ್ಎಎಂದ್ಎವ್ರಿಸ್ಎವ್ರದಾಗಿ ಪುನರುಚ್ಚರಿಸಿದ್ದಾರೆ.

ಬಾಂಗ್ಲಾದೇಶದ ಹಿಂದೂಗಳ ಸುರಕ್ಷತೆಗಾಗಿ ಮತ್ತು ಅವರಿಗೆ ನ್ಯಾಯ ಸಿಗಲಿ ಎಂದು ಸಂಸ್ಥೆ ಪ್ರಾರ್ಥನೆಗಳನ್ನು ನಡೆಸುತ್ತಿದೆ.

ಡಿಸೆಂಬರ್ 11ರಂದು ಬಾಂಗ್ಲಾದೇಶದ ನ್ಯಾಯಾಲಯವು ತಾಂತ್ರಿಕ ಲೋಪಗಳನ್ನು ಉಲ್ಲೇಖಿಸಿ ದಾಸ್ ಅವರ ಆರಂಭಿಕ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ಕಾನೂನಾತ್ಮಕ ಪವರ್ ಆಫ್ ಅಟಾರ್ನಿ ಮತ್ತು ವಕೀಲರ ಪ್ರಾತಿನಿಧ್ಯದ ಅನುಪಸ್ಥಿತಿಯ ಕಾರಣದಿಂದ ಜಾಮೀನು ಅರ್ಜಿ ತಿರಸ್ಕೃತವಾಗಿತ್ತು ಎಂದು ವರದಿಗಳು ಹೇಳಿವೆ.

ದಾಸ್ ಅವರ ವಕೀಲರಲ್ಲಿ ಒಬ್ಬರಾದ ಸುಭಾಷ್ ಶರ್ಮಾ ಅವರು ಭದ್ರತಾ ಕಾರಣಗಳಿಂದಾಗಿ ಡಿಸೆಂಬರ್ 3ರಂದು ನಡೆದ ವಿಚಾರಣೆಗೆ ಗೈರು ಹಾಜರಾಗಿದ್ದರು. ಸರಿಯಾದ ದಾಖಲೆಗಳು ಮತ್ತು ಕಾನೂನು ಪ್ರಾತಿನಿಧ್ಯದ ಅನುಪಸ್ಥಿತಿಯಿಂದ ಕಾನೂನಾತ್ಮಕ ಪ್ರಕ್ರಿಯೆಗಳಿಗೆ ಅಡ್ಡಿಯಾಗಿದೆ ಎಂದು ಪ್ರಾಸಿಕ್ಯೂಟರ್ ಮೊಫಿಜುಲ್ ಹಕ್ ಭುಯಿಯಾನ್ ಹೇಳಿದ್ದಾರೆ.

ಏತನ್ಮಧ್ಯೆ, ಭಾರತವು ನ್ಯಾಯಯುತ ಮತ್ತು ಪಾರದರ್ಶಕ ವಿಚಾರಣೆಗೆ ಕರೆ ನೀಡಿದ್ದು, ಪ್ರಕರಣದಲ್ಲಿ ಹೆಸರಿಸಲಾದ ಎಲ್ಲರ ಕಾನೂನು ಹಕ್ಕುಗಳನ್ನು ಗೌರವಿಸುವ ಅಗತ್ಯವನ್ನು ಒತ್ತಿಹೇಳಿದೆ. ದಾಸ್ ಅವರ ಕ್ಷೀಣಿಸುತ್ತಿರುವ ಆರೋಗ್ಯ ಮತ್ತು ಇಲ್ಲಿಯವರೆಗೆ ಪ್ರಕರಣದಲ್ಲಿ ಕಂಡು ಬಂದಿರುವ ಕಾರ್ಯವಿಧಾನದ ಅಕ್ರಮಗಳನ್ನು ಪರಿಗಣಿಸಿ ನ್ಯಾಯಾಲಯ ಜಾಮೀನು ನೀಡಬಹುದು ಎಂದು ವಕೀಲರು ಮತ್ತು ಬೆಂಬಲಿಗರು ಭರವಸೆ ವ್ಯಕ್ತಪಡಿಸಿದ್ದಾರೆ.

# ಉಪವಾಸ ಸತ್ಯಾಗ್ರಹಕ್ಕೆ ಮುಂದಾದ ಪ್ರಶಾಂತ್ ಕಿಶೋರ್



**ನವದೆಹಲಿ:** ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅಖಾಡ ಸಿದ್ಧಪಡಿಸಿಕೊಳ್ಳುತ್ತಿರುವ ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್, ಅಮರಣಾಂತ ಉಪವಾಸ ಕೈಗೊಳ್ಳಲು ಮುಂದಾಗಿದ್ದಾರೆ. ಬಿಹಾರ ಲೋಕಸೇವಾ ಆಯೋಗ (ಬಿಪಿಎಸ್‌ಸಿ)ದಿಂದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಅವರಿಗೆ ನ್ಯಾಯ ದೊರಕಿಸುವ ಸಲುವಾಗಿ ನಮ್ಮ ಹೋರಾಟ ಸಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಡಿ.13ರಂದು ನಡೆದ 70ನೇ ಬಿಪಿಎಸ್‌ಸಿ ಪ್ರಿಲಿಮಿನರಿ ಪರೀಕ್ಷೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ವಿರುದ್ಧ ಅಭ್ಯರ್ಥಿಗಳ ಹೋರಾಟ ಮುಂದುವರೆದ ಬೆನ್ನಲ್ಲೇ ಪ್ರಶಾಂತ್ ಕಿಶೋರ್ ಪ್ರತಿಭಟನೆ ನಡೆಸಲು ಸಜ್ಜಾಗಿದ್ದಾರೆ. ಬಿಹಾರ ಸರ್ಕಾರಕ್ಕೆ 48 ಗಂಟೆಗಳ ಗಡುವು ನೀಡಿರುವ ಅವರು, ಪ್ರತಿಭಟನಾನಿರತ ವಿದ್ಯಾರ್ಥಿಗಳ ಬೇಡಿಕೆಯಂತೆ, ಈಗಾಗಲೇ ನಡೆದ ಪರೀಕ್ಷೆ ರದ್ದು ಮಾಡಿ, ಹೊಸ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಮಾಧ್ಯಮದೊಂದಿಗೆ ಮಾತನಾಡುತ್ತಾ ಪ್ರಶಾಂತ್ ಕಿಶೋರ್, ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಅವರಿಗೆ ಬಲ ತುಂಬಲು ನಾವು ಅವರ ಜೊತೆ ನಿಲ್ಲುತ್ತೇವೆ ಎಂದಿದ್ದಾರೆ.

**ಏನಿದು ಪರೀಕ್ಷಾ ಅಕ್ರಮ:** ಬಿಪಿಎಸ್‌ಸಿ 2,031 ಹುದ್ದೆಗಳ ಭರ್ತಿಗೆ ಪರೀಕ್ಷೆ ನಡೆಸಿತ್ತು. ಇದರಲ್ಲಿ 200 ಉಪ ವಿಭಾಗ ಮ್ಯಾಜಿಸ್ಟ್ರೇಟರ್ ಹಾಗೂ 136 ಡಿಎಸ್‌ಪಿ ಹುದ್ದೆಗಳಿದ್ದವು. ರಾಜ್ಯದಲ್ಲಿ ಇತ್ತೀಚಿಗೆ ನಡೆದ ಮಹತ್ವದ ಪರೀಕ್ಷೆಗಳಲ್ಲಿ ಇದು ಪ್ರಮುಖವಾಗಿತ್ತು. ಆದರೆ ಪರೀಕ್ಷೆಯಲ್ಲಿ ಕೇಳಲಾದ ಪರೀಕ್ಷೆಗಳು ಗುಣಮಟ್ಟದ್ದಾಗಿರಲಿಲ್ಲ. ಅಲ್ಲದೇ ಈ ಪ್ರಶ್ನೆಗಳು ಕೋಚಿಂಗ್ ಸಂಸ್ಥೆಯೊಂದು ನೀಡಿದ್ದ ಮಾದರಿ ಪತ್ರಿಕೆಯನ್ನು ಹೋಲುತ್ತಿತ್ತು ಎಂಬ ಆರೋಪ ಕೇಳಿಬಂದಿತ್ತು.

ಭಾನುವಾರ ಪಟ್ನಾದ ಗಾಂಧಿ ಮೈದಾನದಲ್ಲಿ ವಿದ್ಯಾರ್ಥಿಗಳ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಕಿಶೋರ್, ಪ್ರತಿಭಟನೆಗೆ ಪ್ರಚೋದನೆ ನೀಡಿದ್ದಾರೆ ಎಂಬ ಆರೋಪದ ಮೇಲೆ ಅವರ ವಿರುದ್ಧ ಹಾಗೂ 700 ಅಭ್ಯರ್ಥಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಬಿಪಿಎಸ್‌ಸಿ ಅಧ್ಯಕ್ಷ ರವಿ ಮನು ಬಾಯ್ ಪರ್ಮಾರ್ ಸೋಮವಾರ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಭೇಟಿಯಾಗಿದ್ದು, ಈ ಕುರಿತು ಚರ್ಚಿಸಿದ್ದಾರೆ. ಆದರೆ, ಪರೀಕ್ಷೆ ರದ್ದು ಮಾಡಲಾಗಿದೆಯೇ ಅಥವಾ ಮರು ಪರೀಕ್ಷೆ ನಡೆಸಲಾಗುತ್ತದೆಯೇ ಎಂಬ ಕುರಿತು ಸ್ಪಷ್ಟನೆ ಸಿಕ್ಕಿಲ್ಲ.

# ಮೇಲಕ್ಕೆತ್ತಿದರೂ ಬದುಕುಳಿಯಲಿಲ್ಲ ಚೇತನಾ

ರಾಜಸ್ಥಾನ: ಬೋರ್‌ವೆಲ್‌ನಲ್ಲಿ ಸಿಲುಕಿದ್ದ ಬಾಲಕಿ ಚೇತನಾ ಮೃತಪಟ್ಟಿದ್ದಾಳೆ ಎಂದು ವೈದ್ಯರು ಘೋಷಿಸಿದ್ದಾರೆ.

150 ಅಡಿ ಆಳದಲ್ಲಿ ಸಿಲುಕಿದ್ದ ಚೇತನಾಳನ್ನು 10 ದಿನಗಳ ಸತತ ಕಾರ್ಯಾಚರಣೆ ಬಳಿಕ ಬೋರ್ ವೆಲ್ ನಿಂದ ಮೇಲಕ್ಕೆ ತರಲಾಗಿತ್ತು. ಆದರೆ, ಮೂರು ವರ್ಷದ ಬಾಲಕಿಯನ್ನು ಜೀವಂತವಾಗಿ ಉಳಿಸಿಕೊಳ್ಳುವಲ್ಲಿ ರಕ್ಷಣಾ ಪಡೆಗಳು ಸಫಲವಾಗಲಿಲ್ಲ.

ಬುಧವಾರ ಸಂಜೆ ಬಾಲಕಿಯನ್ನು ಬೋರ್‌ವೆಲ್‌ನಿಂದ ಹೊರತೆಗೆದ ತಕ್ಷಣ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಬಾಲಕಿಯನ್ನು ಪರೀಕ್ಷಿಸಿದ ವೈದ್ಯರು ಅವಳು ಸಾವನ್ನಪ್ಪಿದ್ದಾಳೆ ಎಂದು ಘೋಷಣೆ ಮಾಡಿದರು.

ಚೇತನಾ ಅವರ ಸಾವನ್ನು ಖಚಿತಪಡಿಸಿರುವ ಪಿಎಂಒ ಡಾ.ಚೈತನ್ಯ ರಾವತ್, ಮರಣೋತ್ತರ ಪರೀಕ್ಷೆಯ ನಂತರವೇ ಮೃತದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗುವುದು ಎಂದು ಹೇಳಿದ್ದಾರೆ. ಸದ್ಯ ಚೇತನಾಳ ಮೃತದೇಹವನ್ನು ಶವಾಗಾರದಲ್ಲಿ ಇರಿಸಲಾಗಿದ್ದು, ಇಂದು ರಾತ್ರಿಯೇ ಆಕೆಯ ಮರಣೋತ್ತರ ಪರೀಕ್ಷೆ ನಡೆಯಲಿದೆ. ಮೂವರು ಹಿರಿಯ ವೈದ್ಯರ ಮಂಡಳಿಯು ಈ ಮರಣೋತ್ತರ ಪರೀಕ್ಷೆಯ ಮೇಲ್ವಿಚಾರಣೆ ನಡೆಸಲಿದೆ. ಡಿಸೆಂಬರ್ 23 ರಂದು, ಮೂರು ವರ್ಷದ ಚೇತನಾ ಆಟವಾಡುವಾಗ ಜಾರಿಬಿದ್ದು 150 ಅಡಿ ಆಳದ ಬೋರ್‌ವೆಲ್‌ಗೆ ಬಿದ್ದಿದ್ದಳು. ಬಾಲಕಿ ಬೋರ್‌ವೆಲ್‌ಗೆ ಬಿದ್ದಿರುವ ಬಗ್ಗೆ ಮಾಹಿತಿ ಪಡೆದ ತಕ್ಷಣ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.



ಕಾರ್ಯಾಚರಣೆ ಬಗ್ಗೆ ಡಿಸಿ ಹೇಳಿದ್ದಿಷ್ಟು: ಇದಕ್ಕೂ ಮುನ್ನ ಮಾತನಾಡಿದ್ದ ಜಿಲ್ಲಾಧಿಕಾರಿ ಕಲ್ಪನಾ ಅಗರ್ವಾಲ್, ಕಳೆದ ಹತ್ತು ದಿನಗಳಿಂದ ಚೇತನಾಳನ್ನು ಮೇಲೆ ತರಲು ನಿರಂತರ ಕಾರ್ಯಾಚರಣೆ ಕೈಗೊಂಡಿದ್ದೆವು. ಆದರೆ, ಕಾರ್ಯಾಚರಣೆ ಹಂತದಲ್ಲಿ ಕಲ್ಲುಗಳು ಅಡ್ಡಿಯಾಗಿದ್ದರಿಂದ ತುಸು ವಿಳಂಬವಾಗಿತ್ತು. ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯಕೀಯ ಪರೀಕ್ಷೆಯ ನಂತರವೇ ಈ ಬಗ್ಗೆ ಸ್ಪಷ್ಟ ಚಿತ್ರಣ ಹೊರಬರಲಿದೆ ಎಂದು ಅವರು ಹೇಳಿದ್ದರು. ಇದೀಗ ಈ ಬಗ್ಗೆ ವೈದ್ಯರು ಬಾಲಕಿ ಮೃತಪಟ್ಟಿದ್ದಾಳೆ ಎಂದು ಘೋಷಿಸಿದ್ದಾರೆ.

**ಐದು ಬಾರಿ ವಿಫಲ ಯತ್ನ:** ಬುಧವಾರ ಸುಮಾರು 170 ಅಡಿ ಆಳದಲ್ಲಿ ಸುರಂಗ ಕೊರೆಯುತ್ತಿದ್ದ ತಂಡಗಳು ಚೇತನಾ ಇರುವ ಸ್ಥಳವನ್ನು ಪತ್ತೆ ಹಚ್ಚಿದ್ದವು. ಬಳಿಕ ಅವರನ್ನು ಹೊರತರಲು ಕೊನೆಯ ಸುತ್ತಿನ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಯಿತು. ಆಂಬ್ಯುಲೆನ್ಸ್ ಮತ್ತು ಪೊಲೀಸ್ ಪಡೆಯನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು. ಇದಕ್ಕೂ ಮುನ್ನ ಚೇತನಾಳನ್ನು ಬೋರ್‌ವೆಲ್‌ನಿಂದ ಹೊರತರಲು 5ಕ್ಕೂ ಹೆಚ್ಚು ಬಾರಿ ನಡೆಸಿದ ಪ್ರಯತ್ನ ವಿಫಲವಾಗಿತ್ತು. ಇದರಲ್ಲಿ ಸ್ವದೇಶಿ ನಿರ್ಮಿತ ಜುಗಾಡ್ ಬಳಸಿ ನಾಲ್ಕು ಬಾರಿ ಪ್ರಯತ್ನ ಮಾಡಲಾಗಿತ್ತು.

# ದೆಹಲಿ ಚುನಾವಣಾ ಕಣಕ್ಕಿಳಿದ ಬಿಎಸ್‌ಪಿ, ಎಎಪಿಗೆ ಶಾಕ್

**ನವದೆಹಲಿ:** ದೆಹಲಿ ವಿಧಾನಸಭೆ ಚುನಾವಣಾ ಕಣ ರಂಗೇರುತ್ತಿದೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ಅಸ್ತಿತ್ವ ಸಮಸ್ಯೆ ಎದುರಿಸುತ್ತಿರುವ, ಒಂದು ಕಾಲದಲ್ಲಿ ಉತ್ತರ ಪ್ರದೇಶದಲ್ಲಿ ಅಧಿಕಾರ ನಡೆಸಿದ್ದ ಬಹುಜನ ಸಮಾಜ ಪಕ್ಷ (ಬಿಎಸ್ಪಿ) ಇದೀಗ ದೆಹಲಿ ವಿಧಾನಸಭೆ ಚುನಾವಣೆ ಅಖಾಡಕ್ಕೆ ಧುಮುಕುವ ಮುನ್ಸೂಚನೆ ಕೊಟ್ಟಿದೆ. ಇದರಿಂದಾಗಿ ಆಮ್ ಆದ್ಮಿ ಪಕ್ಷದ ಪಾಳೇಯದಲ್ಲಿ ದಿಗಿಲು ಕಾಣಿಸಿಕೊಂಡಿದೆ.

ದೆಹಲಿ ವಿಧಾನಸಭೆಗೆ ಫೆಬ್ರವರಿಯಲ್ಲಿ ಚುನಾವಣೆ ನಡೆಯಲಿದೆ. ದೆಹಲಿ ವಿಧಾನಸಭೆಯು 70 ಸೀಟುಗಳನ್ನು ಹೊಂದಿದ್ದು, 70 ಕ್ಷೇತ್ರಗಳಲ್ಲಿ ಬಿಎಸ್ಪಿ ಸ್ಪರ್ಧೆ ಮಾಡುವ ಸಾಧ್ಯತೆ ಇದೆ. ಬಿಎಸ್ಪಿಯು ಬಿಜೆಪಿ ಹಾಗೂ ಕಾಂಗ್ರೆಸ್ನಿಂದ ಸಮಾನ ಅಂತರ ಕಾಪಾಡಿಕೊಂಡಿದೆ. ಜನವರಿ ಎರಡನೇ ವಾರದಲ್ಲಿ ಬಿಎಸ್ಪಿ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡುವ ಸಾಧ್ಯತೆ ಇದೆ. ಪಕ್ಷ ದೆಹಲಿಯನ್ನು ಐದು ವಲಯಗಳನ್ನಾಗಿ ವಿಂಗ್ಡಿಸಿಕ್ಊಂಡಿದ್ಎ. ವಲಯವಾರು ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಚಿಂತನೆ ನಡೆದಿದೆ.

ಆಮ್ ಆದ್ಮಿ ಪಾರ್ಟಿಯು ಇಲ್ಲಿ ಕಳೆದ ಎರಡು ಅವಧಿಯಿಂದ ಇಲ್ಲಿ ಅಧಿಕಾರದಲ್ಲಿ ಇದೆ. ಆದರೆ, ಮದ್ಯ ನೀತಿ ಹಗರಣದಲ್ಲಿ ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕ್ರೇಜಿವಾಲ್ ಅವರು ಸೇರಿದಂತೆ ಹಲವು ಪ್ರಮುಖ ಸಚಿವರೇ ಜೈಲು ಸೇರಿದ್ದರಿಂದ ಈ ಬಾರಿ ಎಎಪಿ ಕೊಂಚ ಕಳೆಗುಂದಿಸಿಕೊಂಡಿದೆ.


# ಜನರ ಮೇಲೆ ಹರಿದ ವಾಹನ: 15 ಸಾವು, ಉಗ್ರರ ದಾಳಿ ಶಂಕೆ

**ನ್ಯೂ ಆರ್ಲಿನ್ಸ್:** ಇಲ್ಲಿನ ಬೌರ್ಬನ್ ರಸ್ತೆಯಲ್ಲಿ ಹೊಸ ವರ್ಷದ ಸಂಭ್ರಮದಲ್ಲಿದ್ದ ಜನರ ಗುಂಪಿನ ಮೇಲೆ ಟ್ರಕ್ ಹರಿದು 15 ಜನ ಸಾವನ್ನಪ್ಪಿದ್ದು, 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಜನರ ಮೇಲೆ ನುಗ್ಗಿದ ವಾಹನದ ಮೇಲೆ ಇಸ್ಲಾಮಿಕ್ ಸ್ಟೇಟ್(ಐಎಸ್) ಭಯೋತ್ಪಾದಕ ಸಂಘಟನೆಯ ಧ್ವಜ ಕಂಡುಬಂದಿದ್ದು, ಎಫ್‌ಬಿಐ ತನಿಖೆ ಚುರುಕುಗೊಳಿಸಿದೆ. ಘಟನೆಯ ಹಿಂದೆ ಯಾವುದಾದರೂ ಭಯೋತ್ಪಾದಕ ಗುಂಪಿನ ಕೈವಾಡವಿದೆಯೇ ಎಂಬ ಕುರಿತು ತನಿಖೆ ತೀವ್ರಗೊಳಿಸಿದೆ.

ಇದುವರೆಗೂ ಯಾವುದೇ ಸಂಘಟನೆ ದಾಳಿಯ ಹೊಣೆ ಹೊತ್ತಿಲ್ಲ. ಸುಧಾರಿತ ಸಾಧನ, ಕಂಟ್ರಿ ಬಾಂಬ್‌ಗಳು ವಾಹನದಲ್ಲಿ ಪತ್ತೆಯಾಗಿವೆ. ವಾಹನದಲ್ಲಿ ಚಾಲಕ ಮಾತ್ರ ಇದ್ದ ಎಂದು ಎಫ್‌ಬಿಐ ಮಾಹಿತಿ ನೀಡಿದೆ.

ಫ್ರೆಂಚ್ ಕ್ವಾರ್ಟರ್‌ನ ಆರ್ಲಿನ್ಸ್‌ನ ಐತಿಹಾಸಿಕ ಕೇಂದ್ರದ ಸಮೀಪ ಹೊಸ ವರ್ಷ 2025ರ ಸಂಭ್ರಮಾಚರಣೆಯಲ್ಲಿದ್ದ ಸಂದರ್ಭದಲ್ಲಿ ಬೆಳಗಿನ ಜಾವ ಸುಮಾರು 3 ಗಂಟೆಗೆ ಘಟನೆ ನಡೆದಿದೆ. ಓಪನ್




ಏರ್ ಕನ್ಸರ್ಟ್‌ನಲ್ಲಿ ಸೇರಿದ್ದ ಜನರ ಮೇಲೆ ವಾಹನ ಹರಿದಿದೆ. 'ಆಲ್‌ಸ್ಟೇಟ್ ಶುಗರ್ ಬೌಲ್'ಗಾಗಿ ನಗರಕ್ಕೆ ಬರುತ್ತಿದ್ದ ಕಾಲೇಜು ಫುಟ್‌ಬಾಲ್ ಅಭಿಮಾನಿಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ. ಶುಗರ್ ಬೌಲ್ ಅಮೆರಿಕದೆಲ್ಲೆಡೆ ನಡೆಯುವ ವಾರ್ಷಿಕ ಕಾಲೇಜು ಫುಟ್ಬಾಲ್ ಆಟವಾಗಿದೆ.

ಆರ್ಲೆನ್ಸ್ ಪೊಲೀಸ್ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯಿಸಿ, "ಸಂಭ್ರಮಾಚಾರಣೆಗಾಗಿ ನಾವು ಶೇ 100ರಷ್ಟು ಸಿಬ್ಬಂದಿಗಳನ್ನು ನಿಯೋಜಿಸಿದ್ದೆವು. ಇನ್ನೂ ಹೆಚ್ಚುವರಿಯಾಗಿ 300ಕ್ಕೂ ಹೆಚ್ಚು ಅಧಿಕಾರಿಗಳನ್ನು ಕಾನೂನು ಜಾರಿ ಸಂಸ್ಥೆಯಿಂದ ಎರವಲು ಪಡೆದಿದ್ದೆವು" ಎಂದು ತಿಳಿಸಿರ್ಎವ್ರದಾಗಿ ಸಿಎನ್‌ಎನ್ ವರದಿ ಮಾಡಿದೆ.

ನಗರದೆಲ್ಲೆಡೆ ಸ್ಥಳೀಯ, ರಾಜ್ಯ ಮತ್ತು ಫೆಡರಲ್ ಸಹಭಾಗಿತ್ವದಲ್ಲಿ ಬಿಗಿ ಭದ್ರತೆ ಒದಗಿಸಲಾಗಿತ್ತು. ಪೊಲೀಸ್ ವಾಹನಗಳ ಜೊತೆಗೆ ಕಾಲ್ನಡಿಗೆ, ಬೈಕ್ ಹಾಗೂ ಕುದುರೆಗಳ ಮೇಲೆಯೂ ಕೂಡ ಪೊಲೀಸರು ಗಸ್ತು ತಿರುಗುತ್ತಿದ್ದರು. ಈ ನಡುವೆಯೂ ಘಟನೆ ಸಂಭವಿಸಿದೆ.

'ಎಕ್ಸ್' ಜಾಲತಾಣದ ಮೂಲಕ ಸಾರ್ವಜನಿಕರಿಗೆ ನ್ಯೂ ಆರ್ಲಿನ್ ತುರ್ತು ಸಿದ್ಧತಾ ಪ್ರಚಾರ(ಎನ್‌ಒಎಲ್‌ಎ) ಸಂದೇಶ ರವಾನಿಸಿ, "ಕ್ಯಾನೆಲ್ ಮತ್ತು ಬೌರ್ಬನ್ ಸ್ಟ್ರೀಟ್‌ನಲ್ಲಿ ಸಾಮೂಹಿಕ ಅಪಾಯದ ಘಟನೆ ಸಂಭವಿಸಿದೆ. ಈ ಪ್ರದೇಶದಿಂದ ದೂರವಿರಿ" ಎಂದು ಎಚ್ಚರಿಸಿದೆ.

# ಭೋಪಾಲ್ ದುರಂತ: 40 ವರ್ಷಗಳ ಬಳಿಕ ತ್ಯಾಜ್ಯ ಸ್ಥಳಾಂತರ

ಭೋಪಾಲ್ (ಮ. ಪ್ರ.): ಭಾರತದ ಇತಿಹಾಸದಲ್ಲಿ ಭೋಪಾಲ್ ಅನಿಲ ದುರಂತವನ್ನು ಎಂದಿಗೂ ಮರೆಯಲಾಗದು. 5,500 ಜನರನ್ನು ಬಲಿಪಡೆದ ಈ ಘೋರ ದುರಂತದ 377 ಟನ್ ತ್ಯಾಜ್ಯವನ್ನು ಈಗ ವಿಲೇವಾರಿ ಮಾಡಲಾಗಿದೆ. ಹೈಕೋರ್ಟ್ ತ್ಯಾಜ್ಯ ವಿಲೇವಾರಿ ಮಾಡದ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ಡಿಸೆಂಬರ್ 3 ರಿಂದ 4 ವಾರಗಳಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಖಡಕ್ ಆದೇಶವನ್ನು ನೀಡಿತ್ತು. ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು 100 ಕಾರ್ಮಿಕರು 30 ನಿಮಿಷಗಳಲ್ಲಿ 12 ಲಾರಿಗಳಲ್ಲಿ ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ಹಾನಿಕಾರಕ 377 ಟನ್ ತ್ಯಾಜ್ಯವನ್ನು ಸಂಗ್ರಹ ಮಾಡಿ, ಸ್ಥಳಾಂತರ ಮಾಡಿದ್ದಾರೆ. ಈ ಕಾರ್ಯಾಚರಣೆಯನ್ನು ಭೋಪಾಲ್ ಅನಿಲ ದುರಂತ



ಪರಿಹಾರ ಮತ್ತು ಪುನರ್ವಸತಿ ಇಲಾಖೆಯ ನಿರ್ವಹಣೆ ಮಾಡಿದೆ. ಸದ್ಯ ಕೆಲಸ ನಿಲ್ಲಿಸಿರುವ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ ಅನಿಲ ದುರಂತ ನಡೆದ 40 ವರ್ಷಗಳ ಬಳಿಕ ತ್ಯಾಜ್ಯಗಳನ್ನು ಸ್ಥಳಾಂತರ ಮಾಡಲಾಗಿದೆ. ಈ ತ್ಯಾಜ್ಯಗಳನ್ನು ಸೀಲ್ ಮಾಡಿ ಭೋಪಾಲ್ನಿಂದ ಸುಮಾರು 250 ಕಿ.ಮೀ. ದೂರದಲ್ಲಿರುವ ದಾರ್ ಜಿಲ್ಲೆಗೆ ಸ್ಥಳಾಂತರ ಮಾಡಲಾಗಿದೆ.

1984ರ ಡಿಸೆಂಬರ್ 2ರ ಮಧ್ಯರಾತ್ರಿ ಭೋಪಾಲ್ನ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ ಮೀಥೈಲ್ ಐಸೂಸೈನೇಟ್ ಎಂಬ ವಿಷಾನಿಲ ಸೋರಿಕೆಯಾಗಿತ್ತು. ಈ ಭೀಕರ ದುರಂತದಲ್ಲಿ 5,500 ಜನರು ಸಾವನ್ನಪ್ಪಿದ್ದರು. ಇಂದಿಗೂ ಸಹ ವಿಶ್ವದ ಮಹಾ ದುರಂತದಲ್ಲಿ ಭೋಪಾಲ್ ಅನಿಲ ದುರಂತ ಸ್ಥಾನವನ್ನು ಪಡೆದಿದೆ.

ಈ ದುರಂತದ ಬಳಿಕ ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಆದರೆ 40 ವರ್ಷಗಳು ಕಳೆದರೂ ಸಹ ಕಾರ್ಖಾನೆಯಿಂದ ತ್ಯಾಜ್ಯವನ್ನು ಸ್ಥಳಾಂತರ ಮಾಡಿರಲಿಲ್ಲ. ಈ ಕುರಿತು ಮಧ್ಯ ಪ್ರದೇಶ ಹೈಕೋರ್ಟ್, ಸುಪ್ರೀಂಕೋರ್ಟ್ಗೆ ಸಹ ಅರ್ಜಿಗಳನ್ನು ಸಲ್ಲಿಕೆಯಾಗಿದ್ದವು.

ಈ ತ್ಯಾಜ್ಯ ಸ್ಥಳಾಂತರ ಮಾಡುವ ಕುರಿತು ಸುಪ್ರೀಂಕೋರ್ಟ್ ಹಲವು ನಿರ್ದೇಶನ ನೀಡಿತ್ತು. ಆದರೆ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈ ಬಗ್ಗೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಮತ್ತೊಂದು ದುರಂತ ಸಂಭವಿಸುವ ಮೊದಲು ತ್ಯಾಜ್ಯ ವಿಲೇವಾರಿ ಮಾಡಬೇಕು ಎಂದು ಸೂಚನೆ ನೀಡಿತ್ತು. ಡಿಸೆಂಬರ್ 3 ರಿಂದ 4 ವಾರಗಳಲ್ಲಿ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ ತ್ಯಾಜ್ಯ ಸ್ಥಳಾಂತರವಾಗಬೇಕು. ಈ ಕುರಿತು ಕೋರ್ಟ್ಗೆ ವರದಿಯನ್ನು ಸಲ್ಲಿಸಬೇಕು ಎಂದು ಹೈಕೋರ್ಟ್ ಆದೇಶಿಸಿತ್ತು.

ಇಂದಿಗೂ ಸಹ ಈ ದುರಂತದ ಅಡ್ಡ ಪರಿಣಾಮಗಳು ಜನರ ಮೇಲೆ ಆಗುತ್ತಿವೆ. ಈ ದುರಂತದಲ್ಲಿ ಬದುಕಿದ ಹಲವು ಜನರು ಈಗಲೂ ಗಂಭೀರ ಆರೋಗ್ಯ ಸಮಸ್ಯೆಗೆ ಸಿಲುಕಿದ್ದಾರೆ.

# ವಿಮಾನಗಳಲ್ಲೂ ಸಿಗಲಿದೆ ಫ್ರೀ ವೈಫೈ ಸೌಲಭ್ಯ

**ಮುಂಬೈ:** ಹೊಸ ವರ್ಷದಲ್ಲಿ ದೇಶದ ವಿಮಾನ ಯಾನದಲ್ಲಿ ಮಹತ್ವದ ಬದಲಾವಣೆಯಾಗಿದೆ: ವಿಮಾನಗಳಲ್ಲೂ ಇನ್ಮುಂದೆ ವೈಫೈ ಸಿಗಲಿದೆ. ಇದರಿಂದಾಗಿ ಇನ್ನು ವಿಮಾನಗಳಲ್ಲಿ ಮೊಬೈಲ್ ಬಳಸಲು ಅಡ್ಡಿಯಿಲ್ಲ. ಆದರೆ ಈ ಸೇವೆ ಎಲ್ಲಾ ವಿಮಾನಗಳಲ್ಲೂ ಇರಲ್ಲ. ಸದ್ಯ ಟಾಟಾ ಗ್ರೂಪ್ ಸಮೂಹದ ಏರ್ ಇಂಡಿಯಾದಲ್ಲಿ ಮಾತ್ರ ಈ ಸೇವೆ ಸಿಗಲಿದೆ.

ಈ ಮೂಲಕ ದೇಶದ ವಿಮಾನಗಳಲ್ಲಿ ಮೊಟ್ಟ ಮೊದಲ ಬಾರಿ ವೈ-ಫೈ ಇಂಟರ್ನೆಟ್ ಸೌಲಭ್ಯ ಕೊಡುತ್ತಿರುವ ವಿಮಾನ ಸಂಸ್ಥೆ ಎನ್ನುವ ಹೆಗ್ಗಳಿಕೆಗೆ ಏರ್ ಇಂಡಿಯಾ ಪಾತ್ರವಾಗಿದೆ.

ಇದೀಗ ದೇಶೀಯ ಮಾರ್ಗಗಳ ವಿಮಾನದಲ್ಲಿ ಇನ್ಫ್ಲೈಟ್ ವೈಫೈ ಸೇವೆಯನ್ನು ಏರ್ ಇಂಡಿಯಾ ಶುರು ಮಾಡಿದೆ. ಡಿಜಿಟಲ್ ಬದಲಾವಣೆಗಳಿಗೆ ತಕ್ಕಂತೆ ಸೇವೆ ಕೊಡುತ್ತಿರುವುದಾಗಿ ಹೇಳಿದೆ. ಏರ್ ಇಂಡಿಯಾ ಪ್ರಯಾಣಿಕರಿಗೆ ಹೊಸ ವರ್ಷದ ಮೊದಲ ದಿನದಿಂದಲೇ





(ಜ.1) ದೇಶೀಯ ವಿಮಾನಗಳಲ್ಲಿ ವೈಫೈ ಸೇವೆ ಶುರುವಾಗಿದೆ. ಈ ವೈಫೈ ಸೇವೆಯು ಲ್ಯಾಪ್ಟಾಪ್‌ಗಳು, ಟ್ಯಾಬ್ಲೆಟ್‌ಗಳು ಮತ್ತು ಆಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಿಗೆ ಕನೆಕ್ಟ್ ಆಗಲಿದೆ. ಅಲ್ಲದೆ ವಿಮಾನದಲ್ಲಿ ಹಲವು ಸಾಧನಗಳಿಗೆ ಏಕಕಾಲಕ್ಕೆ ವೈ-ಫೈ ಬಳಸಿಕೊಳ್ಳಬಹುದಾಗಿದೆ ಎಂದು ಹೇಳಲಾಗಿದೆ.

ದೇಶದಲ್ಲೇ ಮೊದಲ ಬಾರಿ ವಿಮಾನಗಳಲ್ಲಿ ವೈಫೈ ಸೇವೆಯನ್ನು ಏರ್ ಇಂಡಿಯಾ ಪರಿಚಯಿಸಿದೆ. ಹೀಗಾಗಿ ಹೊಸದಾಗಿ ಪ್ರಾರಂಭಿಸಿರುವ ಉದ್ದೇಶದಿಂದ ವೈಫೈ ಸೇವೆ ಉಚಿತವಾಗಿರಲಿದೆ, ಪ್ರಯಾಣದ ಸಮಯದಲ್ಲಿ ಜನರಿಗೆ ಅನುಕೂಲವಾಗಲಿ ಎನ್ನುವುದು, ಡಿಜಿಟಲ್ ಜಗತ್ತಿಗೆ ತೆರೆದುಕೊಳ್ಳುವುದು ಹಾಗೂ ಹೊಸ ಅನುಭವವನ್ನು ಕೊಡುವುದು ಇದರ ಉದ್ದೇಶವಾಗಿದೆ ಎಂದು ಏರ್ ಇಂಡಿಯಾ ಹೇಳಿದೆ. ಮುಂದಿನ ದಿನಗಳಲ್ಲಿ ಇದಕ್ಕೆ ನಿರ್ದಿಷ್ಟ ಮೊತ್ತ ನಿಗದಿ ಮಾಡುವ ಸಾಧ್ಯತೆ ಇದೆ.

ದೇಶದಲ್ಲಿ ವಿಮಾನಗಳಲ್ಲಿ ವೈಫೈ ಸೇವೆ ಎನ್ನುವುದು ಇದೇ ಮೊದಲು. ಹೀಗಾಗಿ, ಇದನ್ನು ಬಳಸುವುದು ಹೇಗೆ ಹಾಗೂ ಇದು ಯಾವ ರೀತಿ ಕೆಲಸ ಮಾಡುತ್ತದೆ ಎನ್ನುವ ಕುತೂಹಲ ಇದ್ದೇ ಇದೆ. ಸಾಮಾನ್ಯವಾಗಿ ವೈಫೈ ಬಳಸುವ ರೀತಿಯಲ್ಲೇ ವಿಮಾನದಲ್ಲೂ ವೈಫೈ ಸೇವೆ ಬಳಸಬಹುದಾಗಿದೆ. ವೈಫೈ ಆಪ್ಷನ್ ಆನ್ ಮಾಡಿದ ಮೇಲೆ ಏರ್ ಇಂಡಿಯಾ ವೈಫೈ ಎನ್ನುವ ನೆಟ್ವರ್ಕ್ ಆಯ್ಕೆಯ ಮೇಲೆ ಕ್ಲಿಕ್ ಮಾಡಬೇಕು. ಮುಂದುವರಿದು ಏರ್ಲೈನ್ನ ಪೋರ್ಟಲ್ಗೆ ಇದು ಕನೆಕ್ಟ್ ಆಗಲಿದೆ. ಕೊನೆಯದಾಗಿ ಪಿಎನ್‌ಆರ್ ಸಂಖ್ಯೆ ಮತ್ತು ಲಾಸ್ಟ್ ನೇಮ್ ನಮೂದಿಸಬೇಕು. ಈ ರೀತಿ ಮಾಡಿದರೆ ವೈಫೈ ಕನೆಕ್ಟ್ ಆಗಲಿದೆ.

# ಜ.6ರ ವರೆಗೆ ಭಾರಿ ಮಳೆ ಮುನ್ಸೂಚನೆ

**ನವದೆಹಲಿ:** ಇದೀಗ ಕೊರೆಯುವ ಚಳಿಯ ನಡುವೆಯೂ ದೇಶದ ಹಲವೆಡೆ ಮಳೆ ಮುಂದುವರೆದಿದೆ. ಹಾಗೆಯೇ ಮುಂದಿನ ಒಂದು ವಾರ ದೇಶದ ಹಲವೆಡೆ ಭಾರೀ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಮುಂದಿನ ಒಂದು ವಾರ ಹಿಮಾಲಯ ತಪ್ಪಲು ಪ್ರದೇಶದಲ್ಲಿ ಭೀಕರ ಚಳಿಯ ನಡುವೆಯೂ ಮಳೆಯಾಗುವ ಸಾಧ್ಯತೆಯಿದೆ.

ಜನವರಿ 3ರ ವರೆಗೆ ಪಶ್ಚಿಮ ಹಿಮಾಲಯದ ತಪ್ಪಲಿನಲ್ಲಿ ಅಲ್ಲಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಜನವರಿ 4ರಿಂದ ಜನವರಿ 6ರ ವರೆಗೆ ವಾಯುವ್ಯ ಭಾರತದ ಪ್ರತ್ಯೇಕ ಭಾಗಗಳಲ್ಲಿ ಅಲ್ಲಲ್ಲಿ ಚದುರಿದಂತೆ ಮಳೆಯಾಗಬಹುದು. ಜನವರಿ 5ರಂದು ಜಮ್ಮು-ಕಾಶ್ಮೀರ, ಮುಜಫರಾಬಾದ್, ಗಿಲ್ಗಿಟ್ ಮತ್ತು ಬಾಲ್ಟಿಸ್ತಾನ್ನಲ್ಲಿ ದಟ್ಟ ಮಂಜಿನ ನಡುವೆ ಮಳೆಯಾಗುವ ಸಾಧ್ಯತೆಯಿದೆ.

ಹಿಮಾಚಲ ಪ್ರದೇಶ, ಪಂಜಾಬ್, ಪೂರ್ವ ಉತ್ತರ ಪ್ರದೇಶ ಮತ್ತು ಚಂಡೀಗಢದ ಪ್ರತ್ಯೇಕ ಪ್ರದೇಶಗಳಲ್ಲಿ ಚಳಿಯ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ಇದೇ ವೇಳೆ ಉತ್ತರ ಪ್ರದೇಶದ



ಹಲವು ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನವು 5 ಡಿಗ್ರಿ ಸೆಲ್ಸಿಯಸ್ಗಿಂತ ಕಡಿಮೆಯಾಗುವ ಸಾಧ್ಯತೆಯಿದೆ.

ಜನವರಿ 5 ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬ್, ಉತ್ತರಾಖಂಡ, ರಾಜಸ್ಥಾನ, ಚಂಡೀಗಢ, ಹರಿಯಾಣ ಮತ್ತು ಇತರ ಈಶಾನ್ಯ ರಾಜ್ಯಗಳಲ್ಲಿ ದಟ್ಟ ಮಂಜು ಆವರಿಸುವ ಸಾಧ್ಯತೆಯಿದೆ. ನಗರದಲ್ಲಿ ಮಂಜಿನ ಜೊತೆ ಮೋಡ ಕವಿದ ವಾತಾವರಣ ಮುಂದುವರೆಯುವ ಸಾಧ್ಯತೆಯಿದೆ.

ಈ ಬಾರಿ ಅಂದರೆ 2024ರಲ್ಲಿ ಮುಂಗಾರು ಮೊದಲು ಕೇರಳಕ್ಕೆ ಎಂಟ್ರಿ ಕೊಟ್ಟು ಬಳಿಕ ಕರ್ನಾಟಕಕ್ಕೆ ಆಗಮಿಸಿತು. ಬಳಿಕ ದೇಶಾದ್ಯಂತ ಆವರಿಸಿ ಅವಾಂತರಗಳನ್ನೇ ಸೃಷ್ಟಿಸಿತು.



# ‘ಪ್ರೀತಿ, ಮದ್ವೆ’; ಮೆಚ್ಯೂರಿಟಿ ಇರಲಿಲ್ಲ

90ರ ದಶಕದಲ್ಲಿ ತೆಲುಗು ಚಿತ್ರರಂಗದಲ್ಲಿ ಮಿಂಚಿದ್ದ ಹೀರೋಯಿನ್ಸ್‌ಗಳಲ್ಲಿ ನಟಿ ಮೀನಾ ಕೂಡ ಒಬ್ಬರು. ಮೀನಾ ತೆಲುಗಲ್ಲಿ ವೆಂಕಟೇಶ್, ನಾಗಾರ್ಜುನ, ಚಿರಂಜೀವಿ, ಬಾಲಕೃಷ್ಣ, ಶ್ರೀಕಾಂತ್, ರಾಜೇಂದ್ರ ಪ್ರಸಾದ್ ತರ ಹೀರೋಗಳ ಜೊತೆ ನಟಿಸಿದ್ದಾರೆ. ಅವರು ಜಾಸ್ತಿ ಸ್ಕ್ರೀನ್ ನಟ ವೆಂಕಟೇಶ್ ಜೊತೆ ಶೇರ್ ಮಾಡ್ಕೊಂಡಿದ್ದಾರೆ.

ಚಂಟಿ, ಸುಂದರಕಾಂಡ, ಸೂರ್ಯವಂಶಂ, ಅಬ್ಬಾಯಿಗಾರು, ದೃಶ್ಯಂ, ದೃಶ್ಯಂ 2 ಹೀಗೆ ಇವರಿಬ್ಬರೂ ತುಂಬಾ ಸಿನಿಮಾಗಳಲ್ಲಿ ನಟಿಸಿದ್ದಾರೆ. ಮೀನಾ 2009ರಲ್ಲಿ ಮದ್ವೆ ಆದ್ರು. ವಿದ್ಯಾಸಾಗರ್ ಅನ್ನೋರ ಜೊತೆ ಮೀನಾ ಮದ್ವೆ ಆಯ್ತು. ಇವರಿಗೆ ಒಬ್ಬ ಮಗಳು ಇದ್ದಾಳೆ. 2022ರಲ್ಲಿ ವಿದ್ಯಾಸಾಗರ್ ಅನಾರೋಗ್ಯದಿಂದ ತೀರಿಕೊಂಡಿದ್ದು ನಿಮ್ಗೆಲ್ಲ ಗೊತ್ತೇ ಇದೆ.

ಮೀನಾ ಒಂದು ಇಂಟರ್‌ವ್ಯೂನಲ್ಲಿ ಪ್ರೀತಿ-ಪ್ರೇಮ, ಮದ್ವೆ ಬಗ್ಗೆ ಮಾತಾಡಿದ್ದಾರೆ. ಚಿತ್ರರಂಗದಲ್ಲಿ ತುಂಬಾ ಲವ್ ಮ್ಯಾರೇಜಸ್ ಆಗ್ತಿದೆ. ಜೊತೆ ನಟಿಸಿದ ಹೀರೋ-ಹೀರೋಯಿನ್ಸ್ ಪ್ರೀತಿಲಿ ಬೀಳ್ತಿದ್ದಾರೆ. ನೀವು ಯಾವ ಹೀರೋನ ಪ್ರೀತಿಸಿಲ್ಲ ಅಂತ ಆ್ಯಂಕರ್ ಮೀನಾನ ಕೇಳಿದ್ರು. ಇದಕ್ಕೆ ಮೀನಾ ಉತ್ತರ ಕೊಟ್ರು. ತುಂಬಾ ಚಿಕ್ಕ ವಯಸ್ಸಲ್ಲಿ ನಾನು ಹೀರೋಯಿನ್ ಆಗಿಬಿಟ್ಟೆ. ಚಂಟಿ ಮೂವಿ ಮಾಡುವಾಗ ನನ್ನ ವಯಸ್ಸು 15 ವರ್ಷ. ಚಿಕ್ಕ ವಯಸ್ಸಲ್ಲೇ ಚಿರಂಜೀವಿ, ಬಾಲಕೃಷ್ಣ, ವೆಂಕಟೇಶ್ ತರ ಹೀರೋಗಳ ಜೊತೆ ತುಂಬಾ ಸಿನಿಮಾ ಮಾಡಿದೆ. ಅಷ್ಟು ಚಿಕ್ಕ ವಯಸ್ಸಲ್ಲಿ ನನಗೆ ಪ್ರೀತಿ, ಮದ್ವೆ ಬಗ್ಗೆ ಮೆಚ್ಯೂರಿಟಿ ಇರಲಿಲ್ಲ. ಮತ್ತೆ ನಾನು ನಟಿಸಿದ ಹೀರೋಗಳೆಲ್ಲ ನನಗಿಂತ ವಯಸ್ಸಲ್ಲಿ ದೊಡ್ಡವರು. ಕೆಲವರಿಗೆ ಮದ್ವೆ ಕೂಡ ಆಗಿತ್ತು. ಹಾಗಾಗಿ ಪ್ರೀತಿಗೆ ಅವಕಾಶ ಇರಲಿಲ್ಲ. ಚಿರಂಜೀವಿ, ವೆಂಕಟೇಶ್, ನಾಗಾರ್ಜುನ ಎಲ್ಲರೂ ಪ್ರೊಫೆಷನಲ್ ಆಗಿ ಇರ್ತಿದ್ರು. ನಾನು ಕೂಡ ಸೈಲೆಂಟ್, ಜಾಸ್ತಿ ಮಾತಾಡ್ತಿರಲಿಲ್ಲ. ಬಾಲಕೃಷ್ಣ ಮಾತ್ರ ಚೆನ್ನಾಗಿ ಮಾತಾಡ್ತಾ ಇರ್ತಿದ್ರು. ಮೋಹನ್ ಬಾಬು ಸರದಾರ್ ಮಾತಾಡಿದ್ರೂ ಭಯ ಆಗ್ತಿತ್ತು ಅಂತ ಮೀನಾ ನಗುತ್ತಾ ಹೇಳಿದ್ರು. ಬಾಲನಟಿಯಾಗಿ ಸಿನಿಮಾರಂಗಕ್ಕೆ ಬಂದ ಮೀನಾ, ಟೀನೇಜ್‌ನಲ್ಲೇ ಹೀರೋಯಿನ್ ಆಗಿಬಿಟ್ರು. ಸೀತಾ ರಾಮಯ್ಯ ಗಾರಿ ಮನವರಾಳು ಚಿತ್ರ ಮೀನಾಗೆ ನಟಿಯಾಗಿ ತೆಲುಗಲ್ಲಿ ಮೊದಲ ಬಾರಿಗೆ ಒಳ್ಳೆ ಹೆಸರು ತಂದುಕೊಟ್ಟಿತು.



# ನಿರ್ದೇಶಕಿಯಾದ ರಂಜನಿ ರಾಘವನ್

‘ಕನ್ನಡತಿ’ ಎಂಬ ಜನಪ್ರಿಯ ಧಾರಾವಾಹಿ ಮೂಲಕ ಹೆಸರು ಸಂಪಾದಿಸಿದ ನಟಿ ರಂಜನಿ ರಾಘವನ್ ಹಿರಿತೆರೆಯಲ್ಲೂ ಕಮಾಲ್ ಮಾಡಿದ್ದಾರೆ. ಇದೀಗ ನಿರ್ದೇಶಕಿಯಾಗಿ ಹೊಸ ಪಯಣದತ್ತ ಪ್ರಾರಂಭಿಸಿದ್ದಾರೆ.

ಹೊಸ ವರ್ಷದಂದು ಈ ವಿಷಯವನ್ನು ತಮ್ಮ ಅಭಿಮಾನಿಗಳೊಂದಿಗೆ ಹಂಚಿಕೊಂಡಿದ್ದಾರೆ. ಭಾರತೀಯ ಚಿತ್ರರಂಗದ ಸಂಗೀತ ಮಾಂತ್ರಿಕ ಇಳಯರಾಜರಿಗೂ ಕಥೆ ಹಿಡಿಸಿರೋದು ಹೆಮ್ಮೆಯ ವಿಚಾರ.

ರಂಜನಿ ರಾಘವನ್ ಪೋಸ್ಟ್‌ನಲ್ಲೇನಿದೆ? ”ಹೊಸ ವರ್ಷದ ದಿನ ನನ್ನ ಹೊಸ ಕೆಲಸದ ಬಗ್ಗೆ ಹೇಳಿಕೊಳ್ಳಲು ಭಯ, ಉತ್ಸಾಹ ಎರಡೂ ಇದೆ. ಈ ಹಿಂದೆ ಬರವಣಿಗೆ ಮತ್ತು ನಟನೆಯ ಮೂಲಕ ಕಥೆಗಳನ್ನು ತಲುಪಿಸೋ ಪ್ರಯತ್ನ ಮಾಡಿದ್ದೇನೆ. ಇದೀಗ ಮೊದಲ ಬಾರಿಗೆ ಕಥೆಯೊಂದನ್ನು ದೊಡ್ಡ ಪರದೆಯ ಮೇಲೆ ನಿಮಗೆ ತೋರಿಸುವತ್ತ ಕೆಲಸ ನಡೆದಿದೆ.

ಹೊಸ ಕೆಲಸ ಅನ್ನುವುದಕ್ಕಿಂತ ಸಿನಿಮಾ ನಿರ್ದೇಶಕಿ ಆಗಬೇಕೆಂಬ ಕನಸು ಹೊತ್ತು ಬಹಳ ವರ್ಷಗಳೇ ಸರಿದಿದೆ. ಈ ಕಥೆ ಹುಟ್ಟಿ ಎರಡು ವರ್ಷಗಳಾಗಿವೆ. ಒಂದೂವರೆ ವರ್ಷದಿಂದ ಇದರ ಚಿತ್ರಕಥೆಯನ್ನು ಬರೆದು ತಿದ್ದಿದ್ದೇನೆ. ಚಿತ್ರರಂಗದ ಹಲವಾರು ಜನರ ಸಹಾಯ, ಪ್ರೋತ್ಸಾಹದಿಂದ ನಮ್ಮ ನಿರ್ಮಾಪಕರಾದ ಡಾ.ಆನಂದ್ ಮತ್ತು ರಾಮಕೃಷ್ಣ ಸುಬ್ರಮಣ್ಯಂ ಅವರ ಸಹಕಾರದಿಂದ ನಮ್ಮ ಸಿನಿಮಾ ಬಗ್ಗೆ ಮಾತನಾಡುವ ಧೈರ್ಯ ಬಂದಿದೆ”.

”ಈ ಪಯಣದಲ್ಲಿ ಮುಖ್ಯವಾಗಿ ನನಗೆ ಶಕ್ತಿಯಾಗಿರುವವರು ಒಚಿಢಣಡಿಂ ಇಸೈಜ್ಞಾನಿ ಇಳಯರಾಜ ಸರ್. 1,000ಕ್ಕೂ ಹೆಚ್ಚು ಚಿತ್ರಕ್ಕೆ ಸಂಗೀತ ನೀಡಿರುವವರು ನನ್ನ ಕಥೆಯನ್ನು ಮೆಚ್ಚಿ ಜೊತೆಗೆ ನಿಂತಿದ್ದಾರೆ. ಸೆಪ್ಟೆಂಬರ್ 13, 2024ರಂದು ಅವರನ್ನು ಭೇಟಿ ಆಗಿ ಕಥೆ ಹೇಳುವ ಅದೃಷ್ಟ ಸಿಕ್ಕಾಗ ‘ಚೆನ್ನೈಗೆ ಹೋಗಿ ಅವರನ್ನು ಭೇಟಿ ಆಗಿ, ಕಾಲಿಗೆ ಬಿದ್ದು ಒಂದು ಫೋಟೋ ತೆಗೆಸಿಕೊಂಡು ಬಂದ್ರೆ ಅದೇ ದೊಡ್ಡದು’ ಅಂತಷ್ಟೇ ಅಂದುಕೊಂಡಿದ್ದು!

ಕನ್ನಡದಲ್ಲಿ ಕಥೆ ಹೇಳಮ್ಮ, ಕನ್ನಡ ನನಗೆ ಚೆನ್ನಾಗಿ ಬರುತ್ತೆ ಕೊಲ್ಲೂರು ಮೂಕಾಂಬಿಕೆ ನನ್ನವ್ವ ಎಂದು ಮಾತು ಶುರು ಮಾಡಿದವರು ಮೂರೇ ದಿನದಲ್ಲಿ ಕಥೆ ನನ್ನ ಮನಸ್ಸಿಗೆ ಬಹಳ ಹತ್ತಿರವಾಗಿದೆ ಎಂದು ತಿಳಿಸಿ ನಮ್ಮ ಸಿನಿಮಾದ ಭಾಗವಾಗಿ, ಇವತ್ತಿಗೆ ಇಳಯರಾಜ ಸರ್ ನಮಗೆ ’ಒನ್ ಕಾಲ್ ಅವೇ’ ಅನ್ನೋ ಜಂಭ ಹುಟ್ಟಿಸಿದ್ದಾರೆ”.

”ಹೋದ ವರ್ಷ, 2024 ಜನವರಿ ಒಂದು ನನ್ನ ಹೊಸ ಕನಸಿನ ಬಗ್ಗೆ ಪೋಸ್ಟ್ ಹಾಕಿದ್ದರೂ, ಅದೇನೆಂದು ಹೇಳಲು 2025 ಬರಬೇಕಾಯಿತು! ಸಿನಿಮಾ ಮಾಡುವಾಗ ಎಲ್ಲವೂ ಅಂದುಕೊಂಡಂತೆ ನಡೆಯುವುದಿಲ್ಲ ಅನ್ನುವುದು ಇಲ್ಲಿಯ ತನಕ ಕಲಿತ ಪಾಠವಾದರೂ ಒಳ್ಳೆಯ ಸಿನಿಮಾ ಆಗಲು ಅದಕ್ಕೇನು ಬೇಕೋ ಅದೇ ಪಡೆದುಕೊಳ್ಳುತ್ತದೆ ಅನ್ನೋ ನಂಬಿಕೆಯೂ ಅಚಲವಾಗಿದೆ. ಕನ್ನಡಿಗರ ಅಶೀರ್ವಾದ, ಸಹಕಾರವನ್ನ ಬೇಡುತ್ತಾ ಮುನ್ನಡೆಯುತ್ತಿದ್ದೇನೆ. ನಿಮ್ಮೆಲ್ಲರಿಗೂ ರಾಶಿ ಪ್ರೀತಿ” ಎಂದು ಬರೆದುಕೊಂಡಿದ್ದಾರೆ. ತಮ್ಮ ಸಿನಿಮಾಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ನಟಿ ರಂಜನಿ ಶೀಘ್ರವೇ ಹಂಚಿಕೊಳ್ಳಲಿದ್ದಾರೆ.

# ‘ಅಕೇಲಿ’

## ಯುದ್ಧ ಭೂಮಿಯಲ್ಲಿ ಸಿಲುಕಿದ ಯುವತಿಯ ಕಥೆ

ಪ್ರಣಯ್ ಮೆಶ್ರಾಮ್ ಅವರ ನಿರ್ದೇಶನದ ಅಕೇಲಿ (ಏಕಾಂಗಿ) ಎಂಬ ಚಿತ್ರ ಜಿಯೋ ಸಿನಿಮಾದಲ್ಲಿ ಸ್ಟ್ರೀಂ ಆಗುತ್ತಿದೆ. ನಿರ್ದೇಶಕರು ಹೇಳುವಂತೆ ಇದು ಮಧ್ಯ ಪ್ರಾಚ್ಯ ದೇಶದಲ್ಲಿ ನಡೆದ ಒಂದು ನೈಜಘಟನೆಯಿಂದ ಪ್ರೇರಿತರಾಗಿ ಈ ಚಿತ್ರಕಥೆ ಬರೆದರಂತೆ. ನುಸ್ರತ್ ಭರೂಚ ಮುಖ್ಯ ಪಾತ್ರದಲ್ಲಿ ಇರುವ ಈ ಚಿತ್ರ ಇರಾಕ್ ನ ಯುದ್ಧ ಘಟನೆಗಳ ಕಥಾವಸ್ತು ಹೊಂದಿದೆ.

ಜ್ಯೋತಿ ಒಬ್ಬ ಸಾಮಾನ್ಯ ಯುವತಿ. ತಾಯಿ ಮತ್ತು ಸೋದರ ಸೊಸೆಯೊಡನೆ ಇರುವ ಆಕೆ ಏರ್‌ಪೋರ್ಟಿನಲ್ಲಿ ನೌಕರಿ ಮಾಡುತ್ತಿರುತ್ತಾಳೆ. ಅವಳೊಬ್ಬಳ ಸಂಬಳವೇ ಮನೆಗೆ ಆಧಾರ. ಸಾಲಗಳು ಬಹಳಷ್ಟು ಇರುತ್ತದೆ. ಯಾರಿಗೋ ಸಹಾಯ ಮಾಡಲು ಹೋಗಿ ವಿಮಾನ ನಿಲ್ದಾಣದ ತನ್ನ ಕೆಲಸವನ್ನು ಕಳೆದು ಕೊಳ್ಳುತ್ತಾಳೆ. ಈಗ ಅವಳಿಗೆ ಎಲ್ಲಿಯಾದರೂ ಕೆಲಸ ಮಾಡಲೇ ಬೇಕಾದ ಅನಿವಾರ್ಯತೆ. ಹೊರದೇಶಕ್ಕಾದರೂ ಹೋಗಿ ಒಂದೆರಡು ವರ್ಷ ಚೆನ್ನಾಗಿ ಸಂಪಾದಿಸಿ ಬಂದು ಬಿಡ ಬೇಕೆಂದು ಯೋಚಿಸುತ್ತಾಳೆ.

ಇರಾಕ್‌ನ ಒಂದು ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಸೂಪರ್‌ವೈಸರ್ ಕೆಲಸ ಖಾಲಿ ಇದೆಯೆಂದು ಅಲ್ಲಿಗೆ ಹೋಗುವುದಾದರೆ ತಾನು ಏರ್ಪಾಡು ಮಾಡುವೆನೆಂದು ನೌಕರಿ ಕೊಡಿಸುವ ದಲ್ಲಾಳಿ ಹೇಳುತ್ತಾನೆ. ಮನೆಯಲ್ಲಿದ್ದ ಅಷ್ಟಿಷ್ಟು ಒಡವೆ ಮಾರಿ, ಟಿಕೆಟ್‌ಗೆ ಹಣ ಹೊಂದಿಸಿ ಇರಾಕ್‌ನ ಮೊಸೂಲ್ ಗೆ ಪ್ರಯಾಣಿಸುತ್ತಾಳೆ. ಇವಳ ತಾಯಿಗೆ ಇವಳು



ಯುದ್ಧ ದೇಶವಾದ ಇರಾಕ್ ಗೆ ಹೋಗುವುದು ಇಷ್ಟವಿಲ್ಲದಿದ್ದರೂ ಆ ದಲ್ಲಾಳಿ ’ಇರಾಕ್ ಈಗ ಯುದ್ಧವಿಲ್ಲದೆ ಶಾಂತವಾಗಿದೆ,’ ಎಂದು ಹೇಳಿದ ಮಾತನ್ನು ನಂಬಿ ಅರೆ ಮನಸ್ಸಿನಿಂದ ಮಗಳನ್ನು ಕಳಿಸುತ್ತಾಳೆ.

ಇರಾಕ್‌ನ ಮೊಸೂಲ್ ನಗರಕ್ಕೆ ಬಂದಿಳಿದ ಅವಳನ್ನು ಅವಳು ಕೆಲಸ ಮಾಡುವ ಸಂಸ್ಥೆಯ ಮ್ಯಾನೇಜರ್ ರಫೀಕ್ ವಿಮಾನ ನಿಲ್ದಾಣಕ್ಕೆ ಬಂದು ಫ್ಯಾಕ್ಟರಿಗೆ ಕರೆದು ಕೊಂಡು ಹೋಗುತ್ತಾನೆ. ಫ್ಯಾಕ್ಟರಿಗೆ ಹೋಗುವಾಗಲೇ ಒಬ್ಬ ಬಾಲಕಿಗೆ ಬಾಂಬ್ ಫಿಕ್ಸ್ ಮಾಡಿರುವ ದೃಶ್ಯ ಕಂಡು ಬರುತ್ತದೆ. ಇರಾಕ್ ಆ್ಯಂಟಿ ಬಾಂಬ್ ಸ್ಕ್ವಾಡ್ ಆ ಬಾಲಕಿಯನ್ನು ಬಾಂಬಿನಿಂದ ಬಿಡಿಸಲು ವಿಫಲರಾಗುತ್ತಾರೆ. ಜ್ಯೋತಿ ಕಣ್ಣ ಮುಂದೆಯೇ ಆ ಬಾಲಕಿ ಬಾಂಬ್ ಸಿಡಿದು ಸತ್ತು ಹೋಗುತ್ತಾಳೆ. ಜ್ಯೋತಿಗೆ ಆಘಾತವಾಗುತ್ತದೆ. ರಫೀಕ್ ಅವಳಿಗೆ ಸಮಾಧಾನ ಹೇಳುತ್ತಾ, ಕಾರನ್ನು ವೇಗವಾಗಿ ಓಡಿಸಿಕೊಂಡು ಫ್ಯಾಕ್ಟರಿಗೆ ಕರೆ ತರುತ್ತಾನೆ. ಅವಳ ಬಾಸ್ ಒಬ್ಬ ಮಹಿಳೆ. ಇವಳಿಗೆ ಸಮಾಧಾನ ಹೇಳಿ, ಹಾಸ್ಟೆಲ್‌ನಲ್ಲಿ ಇಳಿದುಕೊಳ್ಳಲು ವ್ಯವಸ್ಥೆ ಮಾಡಿ ನಾಳೆಯಿಂದ ಕೆಲಸ ಶುರು ಮಾಡು ಎಂದು ಹೇಳುತ್ತಾಳೆ.

ಫ್ಯಾಕ್ಟರಿ ಮಾಲಕಿ ಹಾಗೂ ರಫೀಕ್, ಮತ್ತೊಬ್ಬ ಸಹಾಯಕ ಅವರನ್ನು ಮಾತನಾಡಲು ನಿಲ್ಲುತ್ತಾರೆ. ಉಗ್ರರು ಯಾವ ಮಾತಿಗೂ ಅವಕಾಶ ಕೊಡದೆ ಮಾಲಕಿನ್ ಳನ್ನು ಒಂದೇ ಗುಂಡಿಗೆ ಉಡಾಯಿಸಿ ಬಿಡುತ್ತಾರೆ. ಫ್ಯಾಕ್ಟರಿ ಸುತ್ತ ಕವರ್ ಮಾಡಿ ಬೇಸ್‌ಮೆಂಟಿನಲ್ಲಿರುವ ಎಲ್ಲರನ್ನೂ ಹೊರಗೆ ಕರೆಸಿ ಹೆಂಗಸರನ್ನೆಲ್ಲ ತಮ್ಮ ವ್ಯಾನಿಗೆ ಹತ್ತಿಸಿಕೊಂಡು ಗಂಡಸರನ್ನು ಶೂಟ್ ಮಾಡಿ ಕೊಲ್ಲುತ್ತಾರೆ. ಒಂದಿಬ್ಬರನ್ನು ಮಾತ್ರ ಬಿಟ್ಟು ಬಿಡುತ್ತಾರೆ. ಹಾಗೆ ಬಿಡುಗಡೆಯಾದವರಲ್ಲಿ ರಫೀಕ್ ಇರುತ್ತಾನೆ. ಬೇರೆ ಮಾತಿಗೆ ಅವಕಾಶ ಕೊಡದಂತೆ ಹೆಂಗಸರನ್ನೆಲ್ಲ ಹೊತ್ತೊಯ್ಯುತ್ತಾರೆ. ಅವರನ್ನೆಲ್ಲ ಲೈಗಿಕ ಗುಲಾಮರನ್ನಾಗಿ ಮಾಡಿಕೊಳ್ಳುವ ಯೋಜನೆ ಅವರದು. ಜ್ಯೋತಿಯೂ ಅವರೊಂದಿಗೆ ಹೋಗುತ್ತಾಳೆ. ಅಲ್ಲಿ ಅವರ ಕೋಟೆಯಂಥ ಸಂಸ್ಥಾನಕ್ಕೆ ಕರೆದುಕೊಂಡು ಹೋಗಿ ನೆಲಮಾಳಿಗೆಯಲ್ಲಿ ಕೂಡಿ ಹಾಕುತ್ತಾರೆ. ಅಲ್ಲಿರುವ ಗಂಡಸರೆಲ್ಲ ಇವರನ್ನು ನೋಡಿ ಬೇಕಾದವರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಹೆಂಗಸರ ರೋದನೆಗೆ, ಕಿರಿಚಾಟ,ಕ್ಕೆ ಪ್ರತಿಭಟನೆಗೆ ಕಿಲುಬು ಕಾಸಿನ ಬೆಲೆಯೂ ಇರುವುದಿಲ್ಲ. ಪ್ರತಿಭಟಿಸಿದರೆ ಮುಖಮೂತಿ ನೋಡದೆ ಹೊಡೆಯುತ್ತಾರೆ. ಹಿಂಸಿಸುತ್ತಾರೆ. ಹೆಣ್ಣು ಎಂದರೆ ಮುಗಿಯಿತು ಮಕ್ಕಳೇ ವಯಸ್ಕರೇ, ಮುದುಕರೇ ಎಂದು ಏನೂ ನೋಡುವುದಿಲ್ಲ. ಅವರ ಲೈಂಗಿಕ ತೃಷೆಗೆ ಬಳಸಿಕೊಳ್ಳುತ್ತಾರೆ.

ಜ್ಯೋತಿಯನ್ನು ಸಹ ಒಬ್ಬ ಎಳೆದುಕೊಂಡು ಕೋಣೆಗೆ ಕರೆದೊಯ್ಯುತ್ತಾನೆ. ಅವಳೆಷ್ಟೇ ಪ್ರತಿಭಟಿಸಿದರೂ ಬಿಡುವುದಿಲ್ಲ. ಅವಳನ್ನು ಸ್ನಾನ ಮಾಡಲು ಹೇಳಿ ತಾನೂ ಸ್ನಾನದ ಕೋಣೆಗೆ ಬಂದು ಅವಳನ್ನು ಹಿಡಿದು ಕೊಳ್ಳುತ್ತಾನೆ. ಈ ತಳ್ಳಾಟದಲ್ಲಿ ಆ ಉಗ್ರ ಕೆಳಗೆ ಬಿದ್ದು ಸ್ನಾನದ ಕೋಣೆ ತೊಟ್ಟಿಗೆ ತಲೆ ಬಡಿದು ರಕ್ತಸ್ರಾವವಾಗಿ ತಕ್ಷಣ ಸತ್ತು ಹೋಗುತ್ತಾನೆ. ಅವನು ಬಿದ್ದಾಗ ಕಿರಿಚುವ ಶಬ್ದ ಕೇಳಿ ಇತರೆ ಉಗ್ರರು ಓಡಿ ಬರುತ್ತಾರೆ. ಜ್ಯೋತಿ ಅವರಿಂದ ತಪ್ಪಿಸಿಕೊಂಡು ಓಡುತ್ತಾಳೆ. ಆದರೆ ಹೋಗುವುದಾದರೂ ಎಲ್ಲಿಗೆ? ಉಗ್ರರು ಅವಳನ್ನು ಹಿಡಿದು ತಮ್ಮ ಕಮಾಂಡರ್ ಅಸಾದನಿಗೆ ಒಪ್ಪಿಸುತ್ತಾರೆ. ಅಸಾದನಿಗೆ ಅಲ್ಲಿ ಒಂದು ಪ್ರತ್ಯೇಕ ಮನೆ ಇರುತ್ತದೆ. ಅಲ್ಲಿ ತಂದು ಅವಳನ್ನು ಕೂಡಿ ಹಾಕುತ್ತಾರೆ. ಅಲ್ಲಿ ಇನ್ನೂ ಇಬ್ಬರು ಎಳೆಯ ಹುಡುಗಿಯರಿರುತ್ತಾರೆ. ಮಹಿರಾ ಮತ್ತು ಅಫ್ರಾ. ಇವರಿಬ್ಬರೂ ಅಸಾದನಿಗೆ ಲೈಂಗಿಕ ತೃಷೆ ತೀರಿಸುವ ಗುಲಾಮರು. ಅವರಿಬ್ಬರೂ ಭಯದಿಂದ ನೋವಿನಿಂದ ಅಳುತ್ತಿರುತ್ತಾರೆ. ಜ್ಯೋತಿ ಅವರನ್ನಪ್ಪಿಕೊಂಡು ತಾನೂ ಅಳುತ್ತಾಳೆ. ಮಾರನೇ ದಿನ ಜ್ಯೋತಿಯನ್ನು ಅಸಾದನ ಶಯ್ಯಾಗಾರಕ್ಕೆ ಕಳಿಸಲಾಗುತ್ತದೆ. ಅಲ್ಲಿ ಅಸಾದ ಅವಳ ಮಾನ ಹರಣ ಮಾಡಿಯೇ ಬಿಡುತ್ತಾನೆ.

ಮಾರನೇ ದಿನ ಅವಳಿಗೆ ಎಚ್ಚರವಾದಾಗ ಅಸಾದ ನಿದ್ರಿಸುತ್ತಿರುತ್ತಾನೆ. ಅವಳು ಮೆಲ್ಲಗೆ ಎದ್ದು ಸುತ್ತಲೂ ಕಣ್ಣಾಡಿಸುತ್ತಾಳೆ. ಅವಳಿಗೆ ಒಂದು ಕೈ ಕೋಳ ಮತ್ತು ಲೋಡೆಡ್ ಪಿಸ್ತೂಲು ಕಾಣಿಸುತ್ತದೆ. ಮಲಗಿದ್ದ ಅಸಾದನ ಕೈ ಗಳಿಗೆ ಬೇಡಿ ಹಾಕಿ ಲಾಕ್ ಮಾಡಿಬಿಡುತ್ತಾಳೆ. ಅಷ್ಟರಲ್ಲಿ ಅಸಾದನಿಗೆ ಎಚ್ಚರವಾಗುತ್ತದೆ. ಅಸಾದ ಜೋರಾಗಿ ಕೂಗಿಕೊಳ್ಳುತ್ತಾನೆ. ಬೇರೆ ಉಗ್ರರು ಅಲ್ಲಿ ಬರುತ್ತಾರೆ. ಜ್ಯೋತಿ ಅಸಾದನ ತಲೆಗೆ ಪಿಸ್ತೂಲು ಗುರಿ ಇರಿಸಿ ಆ ಉಗ್ರರನ್ನು ಹೆದರಿಸುತ್ತ, ಅವರನ್ನು ಒಂದು ಕೋಣೆಯಲ್ಲಿ ಕೂಡಿ ಹಾಕಿ ಮಹಿರಾ ಮತ್ತು ಆಫ್ರಾರನ್ನು ಕರೆದುಕೊಂಡು ಹೊರಗೆ ಬಂದು ಒಂದು ಕಾರಿನಲ್ಲಿ ಕುಳಿತು ಕಾರು ವೇಗವಾಗಿ ಚಲಾಯಿಸಿಕೊಂಡು ಗೊತ್ತು ಗುರಿಯಿಲ್ಲದೆ ದೌಡಾಯಿಸುತ್ತಾಳೆ.

ಇನ್ನೊಂದು ಚೆಕ್ ಪೋಸ್ಟ್ ಬಳಿ ಬಂದಾಗ ಅಲ್ಲಿ ಇರಾಕ್ ಸೇನೆಯವರು ಇವರನ್ನು ಯುನೈಟೆಡ್ ನೇಷನ್ಸ್ ನಿರಾಶ್ರಿತ ಶಿಬಿರಕ್ಕೆ ತಲುಪಿಸುತ್ತಾರೆ. ಅಲ್ಲಿ ಮಹಿರಾ ಮತ್ತು ಆಫ್ರಾರ ಚಾಚಾ ಸಿಗುತ್ತಾರೆ. ಮಹಿರಾ ಮತ್ತು ಆಫ್ರಾ ಸಿಕ್ಕಿದ ಸಂತೋಷಕ್ಕೆ ಆ ಚಾಚಾ ಜ್ಯೋತಿಗೆ ಭಾರತ ತಲುಪಲು ಸಹಾಯ ಮಾಡುತ್ತಾನೆ. ಮಸ್ಕಟ್‌ನಿಂದ ಬಾಗ್ದಾದಿಗೆ ಬಂದು ಅಲ್ಲಿಂದ ಭಾರತ ತಲುಪಬೇಕು. ಜ್ಯೋತಿಯ ವಾಪಸ್ ಪ್ರಯಾಣ ಅಷ್ಟು ಸುಲಭವಾಗಿರುವುದಿಲ್ಲ. ಉಗ್ರರು ಅವಳನ್ನು ಎಲ್ಲೆಡೆ ಹುಡುಕುತ್ತಿರುತ್ತಾರೆ. ಚಾಚಾ ಜ್ಯೋತಿಗೆ ಪಾಸ್‌ಪೋರ್ಟ್ ಮತ್ತು ಟಿಕೆಟ್ ಮಾಡಿಸಿಕೊಡುತ್ತಾರೆ.

ಭಾರತದ ವಿದೇಶಾಂಗ ಸಚಿವಾಲಯದಲ್ಲಿ ಇರಾಕ್‌ನಲ್ಲಿ ಸಿಕ್ಕಿಕೊಂಡ ನರ್ಸ್‌ಗಳನ್ನು ಬಿಡಿಸಲು ಕಾರ್ಯಾಚರಣೆ ನಡೆಯುತ್ತಿರುತ್ತದೆ. ಇರಾಕ್‌ನಲ್ಲಿ ಆದ ಘಟನೆಗಳನ್ನು ಟಿವಿಯಲ್ಲಿ ನೋಡಿದ ಜ್ಯೋತಿ ತಾಯಿ ಮತ್ತು ಅವಳ ಸೋದರ ಸೊಸೆ ಮಿಹಿರಾ ಭಯಭಿತರಾಗುತ್ತಾರೆ. ಜ್ಯೋತಿಗೆ ಕೆಲಸ ಕೊಡಿಸಿದ ದಲ್ಲಾಳಿ ಬಳಿ ಬಂದು ಅವನನ್ನು ವಿಚಾರಿಸುತ್ತಾರೆ. ಅವನು ತನಗೇನೂ ಮಾಡಲು ಸಾಧ್ಯವಿಲ್ಲ. ನೀವು ದೆಹಲಿಗೆ ಹೋಗಿ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ವಿಚಾರಿಸಿ ಎನ್ನುತ್ತಾನೆ. ಅದರಂತೆ ಅವರು ವಿದೇಶಾಂಗ ಸಚಿವಾಲಯಕ್ಕೆ ಬರುತ್ತಾರೆ. ಅಲ್ಲಿಯೂ ಆಶಾದಾಯಕ ಸುದ್ದಿ ಏನೂ ಸಿಗದಿದ್ದರೂ ಅಲ್ಲಿನ ನೌಕರನೊಬ್ಬನಿಗೆ ತಮ್ಮ ಕಷ್ಟ ಹೇಳಿಕೊಂಡು, ಜ್ಯೋತಿಯನ್ನು ಬಿಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಅವಳ ಫೋಟೋ ಕೂಡ ಕೊಡುತ್ತಾರೆ. ಆ ನೌಕರ ಸಚಿವಾಲಯದಲ್ಲಿ ತಾನು ಪ್ರಯತ್ನ ಮಾಡುವುದಾಗಿ ಹೇಳುತ್ತಾನೆ.

ಇಲ್ಲಿ ಮಸೂಲ್ ಏರ್ ಪೋರ್ಟಿನಲ್ಲಿ ಜ್ಯೋತಿ ಚೆಕ್ಕಿಂಗ್‌ಗಾಗಿ ನಿಂತಿದ್ದಾಗ ಅಲ್ಲಿ ಅಸಾದ್ ತನ್ನ ಗ್ಯಾಂಗ್‌ನೊಂದಿಗೆ ಜ್ಯೋತಿಯನ್ನು ಹುಡುಕುತ್ತ ಬರುತ್ತಾನೆ. ಆ ಗ್ಯಾಂಗಿನಲ್ಲಿ ರಫೀಕ್ ಕೂಡಾ ಇರುತ್ತಾನೆ. ರಫೀಕನನ್ನು ಬಲವಂತವಾಗಿ ಐಸಿಸ್ ಗುಂಪಿನಲ್ಲಿ ಸೇರಿಸಿಕೊಳ್ಳಲಾಗಿರುತ್ತದೆ. ಅಸಾದ್ ಗುಂಪನ್ನು ನೋಡಿದ ಜ್ಯೋತಿ ಅವರಿಂದ ತಪ್ಪಿಸಿಕೊಳ್ಳಲು ವಿಮಾನ ನಿಲ್ದಾಣದ ತಾರಸಿಯಲ್ಲಿ ಬಚ್ಚಿಟ್ಟು ಕೊಳ್ಳುತ್ತಾಳೆ. ಎಲ್ಲ ಕಡೆ ಹುಡುಕಿ ನಿರಾಶರಾದ ಉಗ್ರರು ಅಲ್ಲಿಂದ ಹೊರಡುತ್ತಾರೆ. ಆಗ ಅವಳನ್ನು ನೋಡಿದ್ದ ರಫೀಕ್ ಅವಳಿಗೆ ಗುಪ್ತವಾಗಿ ಸಹಾಯ ಮಾಡಿ, ಅವಳನ್ನು ಏರ್‌ಕ್ರಾಫ್ಟ್ ಹತ್ತಲು ಸಹಾಯ ಮಾಡುತ್ತಾನೆ. ಮತ್ತು ಒಂದು ಪತ್ರದೊಂದಿಗೆ ಕೊಂಚ ಹಣ ಕೊಟ್ಟು ಅದನ್ನು ತನ್ನ ತಾಯಿಗೆ ತಲುಪಿಸಲು ಹೇಳುತ್ತಾನೆ. ಜ್ಯೋತಿ ವಿಮಾನದಲ್ಲಿ ಹೇಗೋ ನುಸುಳಿಕೊಳ್ಳುತ್ತಾಳೆ. ರಫೀಕನನ್ನು ಶಂಕಿಸಿದ ಅಸಾದ್ ಅವನನ್ನು ಶೂಟ್ ಮಾಡುತ್ತಾನೆ. ಉಗ್ರರು ವಿಮಾನದಲ್ಲೂ ಜ್ಯೋತಿಯನ್ನು ಹುಡುಕುತ್ತಾರೆ. ಆದರೆ ಲಗೇಜ್ ಇಡುವ ಕ್ಯಾಬಿನ್‌ನಲ್ಲಿ ವಿಮಾನದ ಕೆಳಗಡೆ ಅವಿತುಕೊಂಡಿರುವ ಜ್ಯೋತಿ ಉಗ್ರರ ಕಣ್ಣಿಗೆ ಕಾಣುವುದಿಲ್ಲ. ವಿಮಾನ ಬಾಗ್ದಾದಿಗೆ ಹಾರುತ್ತದೆ. ಬಾಗ್ದಾದ್ ವಿಮಾನ ನಿಲ್ದಾಣದಲ್ಲಿ ಜ್ಯೋತಿ ಜ್ಞಾನ ತಪ್ಪಿ ಬಿದ್ದು ಬಿಡುತ್ತಾಳೆ. ಅಲ್ಲಿನ ಸಿಬ್ಬಂದಿ ಅವಳನ್ನು ಹಾಸ್ಪಿಟಲ್‌ಗೆ ಕರೆದೋಯ್ದು ಆರೈಕೆ ಮಾಡುತ್ತಾರೆ. ಅಲ್ಲಿ ಎಲ್ಲವನ್ನೂ ಹೇಳಿದ ಜ್ಯೋತಿ, ಅಲ್ಲಿನ ಭಾರತದ ರಾಯಭಾರಿ ಕಚೇರಿಯ ಸಹಾಯದಿಂದ ಭಾರತ ತಲುಪುತ್ತಾಳೆ.

ಉಗ್ರರ ಬಂದೀಖಾನೆಯಿಂದ ತಪ್ಪಿಸಿಕೊಂಡ ಜ್ಯೋತಿಯ ಪಯಣ ಅವಳು ಭಾರತ ತಲುಪುವವರೆಗೆ ಅತ್ಯಂತ ರೋಚಕವಾಗಿದೆ. ಉಗ್ರರಿಂದ ತಪ್ಪಿಸಿಕೊಳ್ಳಲು ಉಗ್ರ ಹೋರಾಟ ಮಾಡುವ ಜ್ಯೋತಿ ಕೊನೆಗೂ ಸಫಲಳಾಗುತ್ತಾಳೆ. ಜ್ಯೋತಿಯ ಪಾತ್ರದಲ್ಲಿ ನುಸ್ರತ್ ಬಹಳ ಚೆನ್ನಾಗಿ ಅಭಿನಯಿಸಿದ್ದಾರೆ. ಪಾತ್ರಕ್ಕೆ ತಕ್ಕ ನ್ಯಾಯ ಒದಗಿಸಿದ್ದಾರೆ. ಇಡೀ ಚಿತ್ರವನ್ನು ನುಸ್ರತ್ ಆವರಿಸಿಕೊಂಡಿದ್ದಾರೆ. ಯಾವುದೇ ಅಸಭ್ಯ ದೃಶ್ಯಗಳಿಲ್ಲದೆ ಎಲ್ಲರೂ ನೋಡಬಹುದಾದ ಚಿತ್ರ ಅಕೇಲಿ.



# ’ಇಡ್ಲಿ ಕಡೈ’ ಫಸ್ಟ್ ಲುಕ್

ದಕ್ಷಿಣ ಭಾರತದ ಸ್ಟಾರ್ ನಟ ಧನುಷ್ ಅಭಿನಯದ ’ಇಡ್ಲಿ ಕಡೈ’ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಹೊಸ ವರ್ಷದ ದಿನದಂದೇ ಬಿಡುಗಡೆಯಾಗಿದೆ. ಅದರಲ್ಲಿ ಒಬ್ಬ ಬಾಣಸಿಗನಾಗಿ ಧನುಷ್ ಕಾಣಿಸಿಕೊಂಡಿದ್ದಾರೆ.

ಸ್ಟಾರ್ ನಟ ಧನುಷ್ ಸ್ವ-ನಿರ್ದೇಶನದ ’ರಾಯನ್’ ಚಿತ್ರ ಅಭಿಮಾನಿಗಳ ನಿರೀಕ್ಷೆಯ ನಡುವೆ ಬಿಡುಗಡೆಯಾಗಿ 100 ಕೋಟಿಗೂ ಹೆಚ್ಚು ಗಳಿಕೆ ಕಂಡಿತು.

’ರಾಯನ್’ ಚಿತ್ರದಲ್ಲಿ ಧನುಷ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅದೇ ಸಮಯದಲ್ಲಿ ಪ್ರೀತಿಯ ಅಣ್ಣನಾಗಿಯೂ ನಟಿಸಿದ್ದಾರೆ. ಈ ಚಿತ್ರದ ನಂತರ, ಧನುಷ್ ’ಇಡ್ಲಿ ಕಡೈ’ ಚಿತ್ರದಲ್ಲಿ ಇಡ್ಲಿ ಮಾರುವವನ ಪಾತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರವನ್ನು ಆಕಾಶ್ ಭಾಸ್ಕರ್ ಡಾನ್ ಪಿಕ್ಚರ್ಸ್ ನಿರ್ಮಿಸಿದೆ. ಈ ಚಿತ್ರದಲ್ಲಿ ನಿತ್ಯಾ ಮೆನನ್ ನಾಯಕಿಯಾಗಿ ನಟಿಸಿದ್ದಾರೆ. ಶಾಲಿನಿ ಪಾಂಡೆ, ಅರುಣ್ ವಿಜಯ್, ಪ್ರಕಾಶ್ ರಾಜ್, ಸಮುದ್ರಖನಿ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಜಿ.ವಿ. ಪ್ರಕಾಶ್ ಕುಮಾರ್ ಸಂಗೀತ ನೀಡಿದ್ದಾರೆ. ಹೊಸ ವರ್ಷದಂದು ಚಿತ್ರತಂಡ ಫಸ್ಟ್ ಲುಕ್ ಬಿಡುಗಡೆ ಮಾಡಿದೆ. ಧನುಷ್ ಪಕ್ಕಾ ಹಳ್ಳಿಗನಂತೆ ಕಾಣಿಸಿಕೊಂಡಿದ್ದಾರೆ. ಈ ಚಿತ್ರ ಏಪ್ರಿಲ್ 10 ರಂದು ಬಿಡುಗಡೆಯಾಗಲಿದೆ.

# 55ರಲ್ಲೂ ಫಿಟ್ &ಫೈನ್



ಸಲ್ಮಾನ್ ಖಾನ್ ನಟನೆಯ ಮೈನೆ ಪ್ಯಾರ್ ಕಿಯಾದ ಸಾಧು ಸುಮನ್ ಅಂದ್ರೆ ಎಲ್ಲರಿಗೂ ತಟ್ಟನೇ ನೆನಪಾಗೋದು ನಟಿ ಭಾಗ್ಯಶ್ರೀ. ಪ್ರಸ್ತುತ ಅವರಿಗೆ 55ರ ಹರೆಯ. ಈ ವಯಸ್ಸಲ್ಲೂ ಅವರು ಯುವತಿಯರಂತೆ ಕಂಗೊಳಿಸುತ್ತಿದ್ದು, 35 ವರ್ಷಗಳಲ್ಲಿ ಅವರ ಲುಕ್ ಪೂರ್ತಿ ಬದಲಾಗಿದೆ. ಸೋಶಿಯಲ್ ಮೀಡಿಯಾದಲ್ಲಿ ಅವರ ಇತ್ತೀಚಿನ ಫೋಟೋಸ್ ನೋಡಿ ಅಭಿಮಾನಿಗಳು ಸ್ಟನ್ ಆಗಿದ್ದಾರೆ.

ಸೂರಜ್ ಬಡ್ಜಾತ್ಯಾ ನಿರ್ದೇಶನದ ’ಮೈನೆ ಪ್ಯಾರ್ ಕಿಯಾ’ ರಿಲೀಸ್ ಆಗಿ 35 ವರ್ಷಗಳೇ ಕಳೆದಿವೆ. ಈ ಸಿನಿಮಾದಲ್ಲಿ ಭಾಗ್ಯಶ್ರೀ ಸಿಂಪಲ್ ಹುಡುಗಿ ಸುಮನ್ ಪಾತ್ರ ಮಾಡಿದ್ದರು. ಆದರೆ ಈಗ ಈ ಸುಮನ್ ಗ್ಲಾಮರ್ ಕ್ವೀನ್ ಬದಲಾಗಿದ್ದು, 55ರ ಹರೆಯದಲ್ಲೂ ಅವರ ಈ ಬದಲಾವಣೆ ಫಿಟ್‌ನೆಸ್ ನಿರ್ವಹಣೆ ಮಾಡಿರುವುದು ಅಭಿಮಾನಿಗಳನ್ನು ಅಚ್ಚರಿಗೆ ದೂಡಿದೆ.

ಸಲ್ಮಾನ್ ಖಾನ್ ನಟನೆಯ ಮೈನೆ ಪ್ಯಾರ್ ಕಿಯಾದ ಸಾಧು ಸುಮನ್ ಅಂದ್ರೆ ಎಲ್ಲರಿಗೂ ತಟ್ಟನೇ ನೆನಪಾಗೋದು ನಟಿ ಭಾಗ್ಯಶ್ರೀ. ’ಮೈನೆ ಪ್ಯಾರ್ ಕಿಯಾ’ ಭಾಗ್ಯಶ್ರೀ ಅವರ ಮೊದಲ ಸಿನಿಮಾ. ಈ ಸಿನಿಮಾ ಅವರನ್ನು ರಾತ್ರೋರಾತ್ರಿ ಸ್ಟಾರ್ ಮಾಡಿತು. ಎಲ್ಲರ ಬಾಯಲ್ಲೂ ಅವರ ಹೆಸರೇ ಇತ್ತು.

ಈ ಸಿನಿಮಾ ಬಿಡುಗಡೆಯಾಗಿ 35 ವರ್ಷಗಳೇ ಕಳೆದಿದ್ದು, 35 ವರ್ಷಗಳಲ್ಲಿ ಭಾಗ್ಯಶ್ರೀ ಲುಕ್ ತುಂಬಾ ಬದಲಾಗಿದೆ. ವಯಸ್ಸು ಮಾಗುತ್ತಿದ್ದಂತೆ ಅವರು ಇನ್ನಷ್ಟು ಮತ್ತಷ್ಟು ಸುಂದರವಾಗಿ ಕಂಗೊಳಿಸುತ್ತಿದ್ದಾರೆ.

’ಮೈನೆ ಪ್ಯಾರ್ ಕಿಯಾ’ ನಂತರ ಭಾಗ್ಯಶ್ರೀ ಬೇರೆ ಸಿನಿಮಾಗಳಲ್ಲಿಯೂ ನಟಿಸಿದ್ರು, ಆದ್ರೆ ಮೊದಲ ಸಿನಿಮಾಗೆ ಸಿಕ್ಕಷ್ಟು ಜನಪ್ರಿಯತೆಯನ್ನು ಬೇರೆ ಸಿನಿಮಾಗಳಲ್ಲಿ ಗಳಿಸಲು ಸಾಧ್ಯವಾಗಲಿಲ್ಲ.

’ಮೈನೆ ಪ್ಯಾರ್ ಕಿಯಾ’ ಶೂಟಿಂಗ್ ವೇಳೆಯೇ ಭಾಗ್ಯಶ್ರೀ ತಮ್ಮ ಬಾಯ್ ಫ್ರೆಂಡ್ ಹಿಮಾಲಯ ದಾಸಾನಿ ಜೊತೆ ಮದುವೆ ಆದ್ರು. ಆದ್ದರಿಂದ ಮೊದಲ ಫಿಲಂ ನಂತರ ಅವ್ರು ಹೆಚ್ಚಾಗಿ ಗಂಡನ ಜೊತೆಗೆ ಸ್ಕ್ರೀನ್ ಶೇರ್ ಮಾಡಿದ್ರು.

ಭಾಗ್ಯಶ್ರೀ ಸೋಶಿಯಲ್ ಮೀಡಿಯಾದಲ್ಲಿ ಆಕ್ಟಿವ್ ಆಗಿದ್ದಾರೆ. ಆಗಾಗ ತಮ್ಮ ಬೋಲ್ಡ್ ಎನಿಸುವ ಫೋಟೋಗಳನ್ನು ಶೇರ್ ಮಾಡ್ತಿರ್ತಾರೆ ಹಾಗೆಯೇ ಎಂಜಾಯ್ ಮಾಡ್ತಿರೋ ಫೋಟೋಸ್ ಕೂಡ ಹಾಕ್ತಿರ್ತಾರೆ

55 ವರ್ಷದ ಭಾಗ್ಯಶ್ರೀ ಫಿಟ್ನೆಸ್ ಬಗ್ಗೆ ತುಂಬಾ ಕೇರ್ ತಗೊಳ್ತಾರೆ. ಇನ್ಸ್ಟಾಗ್ರಾಮ್ ನಲ್ಲಿ ಅವರು ತಮ್ಮ ವರ್ಕೌಟ್ ವಿಡಿಯೋಗಳನ್ನು ಕೂಡ ಶೇರ್ ಮಾಡುತ್ತಿರುತ್ತಾರೆ.

ಮದುವೆ ಸಂಸಾರದ ನಂತರ ಆಕ್ಟಿಂಗ್ ನಿಂದ ದೂರ ಇದ್ದ ಭಾಗ್ಯಶ್ರೀ ಮತ್ತೆ ವಾಪಸ್ ಬಂದಿದ್ದು. ಟಿವಿ ಶೋಸ್ ಜೊತೆಗೆ ಬಾಲಿವುಡ್ ಮತ್ತು ಸೌತ್ ಫಿಲಂಗಳಲ್ಲೂ ನಟಿಸುತ್ತಿದ್ದಾರೆ.

ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
**RNI.KAR/KAN/2009/31934.** VOLUME-16/ISSUE-40 Email-mussanje2010@gmail.com, Phone: **9448074878**